ಶಾಲಾ ಶಿಕ್ಷಣದ ಮೂಲಕ
ಮಗುಕೇಂದ್ರಿತ ಸಮಾಜ ನಿರ್ಮಾಣದಲ್ಲಿ
ಪಡಿ ಸಂಸ್ಥೆ 'ವೆಲೊರೆಡ್' ಯೋಜನೆ 2017–2020ರ
ಮೂಲಕ ನಡೆಸಿದ ಪ್ರಯತ್ನದ ಸಂಕಲನ

# ಋಜುವಾತು

ಪಡಿ


ಮಂಗಳೂರು

**ರುಜುವಾತು :** ಶಾಲಾ ಶಿಕ್ಷಣದ ಮೂಲಕ ಮಗುಕೇಂದ್ರಿತ ಸಮಾಜ ನಿರ್ಮಾಣದಲ್ಲಿ ಪಡಿ ಸಂಸ್ಥೆ 'ವೆಲೊರೆಡ್' ಯೋಜನೆ 2017–2020ರ ಮೂಲಕ ನಡೆಸಿದ ಪ್ರಯತ್ನದ ಸಂಕಲನ


| | | |
|---|---|---|
| ಮುದ್ರಣ | : | ಮಾರ್ಚ್ 2020 |
| ಪುಟಗಳು | : | 224 |
| ಕೃತಿ ಸ್ವಾಮ್ಯ | : | ಪಡಿ, ಮಂಗಳೂರು<br>ಹಕ್ಕುಗಳನ್ನು ಕಾಯ್ದಿರಿಸಿದೆ |
| ನಿರ್ಮಾಣ | : | ಪಡಿ, ಮಂಗಳೂರು |
| ಮಾರ್ಗದರ್ಶನ | : | ರೆನ್ನಿ ಡಿ'ಸೋಜ,<br>ನಿರ್ದೇಶಕರು, ಪಡಿ, ಮಂಗಳೂರು |
| ಸಂಯೋಜನೆ | : | ಜಾಯ್ಸ್ ವಾಟ್ಸನ್<br>ದಾಖಲಾತಿ ಸಂಯೋಜಕರು, ಪಡಿ, ಮಂಗಳೂರು |
| ಸಹಕಾರ | : | ಪಡಿ ಯೋಜನಾ ಸಿಬ್ಬಂದಿ ಬಳಗ |
| ಮುಖಪುಟ ವಿನ್ಯಾಸ | : | ಇಶಾನ್ ಪಿಲಾರ್ |
| ಮುದ್ರಣ | : | ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ |


(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

# ಮುನ್ನುಡಿ



ಮಕ್ಕಳ ಒಟ್ಟಾರೆ ಅಭಿವೃದ್ಧಿಗೆ ಶಿಕ್ಷಣ ಒಂದು ಮೂಲಭೂತ ಅಗತ್ಯತೆ. ಇದಕ್ಕೆ ಪೂರಕವಾಗಿ ಸರಕಾರವು ಮಕ್ಕಳನ್ನು ರಕ್ಷಿಸಲು ಮತ್ತು ಅವರನ್ನು ಶಿಕ್ಷಣದ ಮುಖ್ಯಧಾರೆಗೆ ಕರೆತರಲು, ಆಗಾಗ ಅನೇಕ ಕಾಯ್ದೆಗಳು ಮತ್ತು ಕಾನೂನುಗಳನ್ನು ರೂಪಿಸಿದೆ. ಆದರೂ, ಇನ್ನೂ ಸಾವಿರಾರು ಮಕ್ಕಳು ಶಾಲೆಯಿಂದ ಹೊರಗಿರುವುದನ್ನು ನಾವು ಕಾಣುತ್ತಿದ್ದೇವೆ ಮತ್ತು ಇದು ಬಹಳ ದುಃಖಕರ ಹಾಗೂ ನಿರಾಶಾದಾಯಕ ವಿಷಯವಾಗಿದೆ.

VALORED–ವೆಲೊರೆಡ್ ಪರಿಕಲ್ಪನೆಯು 1993ರಿಂದ ಕಾರ್ಯರೂಪದ ಯೋಜನೆಯಾಗಿ ಆರಂಭಗೊಂಡು ಪ್ರಸ್ತುತ, ಪಡಿ ಸಂಸ್ಥೆಯು ಎಲ್ಲಾ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯ ದೀರ್ಘಾವಧಿ ಗುರಿ ಅಂದರೆ 'ನ್ಯಾಯಯುತ, ಮಾನವೀಯ ಮೌಲ್ಯಗಳನ್ನೊಳಗೊಂಡ ಮಗು ಸ್ನೇಹಿ ಸಮಾಜ ಅದರಲ್ಲೂ ಮುಖ್ಯವಾಗಿ ಮಕ್ಕಳ ಹಕ್ಕುಗಳು ಮತ್ತು ಅದರ ಸಂರಕ್ಷಣೆಯೊಂದಿಗೆ ಗುಣ ಮಟ್ಟದ ಶಿಕ್ಷಣವನ್ನು ಪ್ರತೀ ಮಗುವು ಹೊಂದಿಕೊಳ್ಳುವುದು. ಇದನ್ನು ಈಡೇರಿಸಲು ಮಗುಸ್ನೇಹಿ ಶಾಲೆ ಮತ್ತು ಸಮುದಾಯದ ನಿರ್ಮಾಣಕ್ಕಾಗಿ ಶಿಕ್ಷಣ ಕ್ಷೇತ್ರದಲ್ಲಾದ ಬದಲಾವಣೆ ಹಾಗೂ ಕಾಲಕಾಲಕ್ಕೆ ಅಗತ್ಯವಾದ ಯೋಚನೆಗಳನ್ನು ಯೋಜನೆಗಳಲ್ಲಿ ಅಳವಡಿಸಿಕೊಂಡು ಈ ವರೆಗೆ 8 ಯೋಜನೆಗಳೊಂದಿಗೆ ನಿರಂತರ ಕಾರ್ಯಾಚರಿಸುತ್ತಾ ಬಂದಿದೆ. ಎಲ್ಲರಿಗೂ ಸಮಾನವಾದಂತಹ ಸಮಾಜವನ್ನು ನಿರ್ಮಿಸುವ ಉದ್ದೇಶದೊಂದಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಎಲ್ಲರಿಗೂ ಲಭ್ಯಗೊಳಿಸುವ ಮೂಲಕ ಶಿಕ್ಷಣದ ಸುಧಾರಣೆಗಾಗಿ ಶ್ರಮಿಸುತ್ತಿದೆ. ತನ್ನ ಈ ಸುದೀರ್ಘ ಕಾರ್ಯಾವಧಿಯಲ್ಲಿ ಸಂಸ್ಥೆಯು, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು, ಸಮುದಾಯ ನಾಯಕರು, ಎಸ್.ಡಿ.ಎಂ.ಸಿ. ಸದಸ್ಯರು, ಜನ ಪ್ರತಿನಿಧಿಗಳು, ಅಧಿಕಾರಿಗಳನ್ನು ಒಗ್ಗೂಡಿಸಲು ಪ್ರಯತ್ನಿಸಿದ್ದು, ತನ್ನ ಈ ಉದ್ದೇಶಗಳನ್ನು ಸಾಧಿಸಲು ಶಿಕ್ಷಣ ಪ್ರಕ್ರಿಯೆಯಲ್ಲಿ ಭಾಗಿಯಾಗಬಹುದಾದಂತಹ ಸಮಾಜದ ವಿವಿಧ ಸ್ಥರಗಳ ಜನರೊಂದಿಗೆ ನೇರ ಸಂಪರ್ಕವನ್ನು ಹೊಂದುವ ಮೂಲಕ ಕೆಲಸ ನಿರ್ವಹಿಸುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲಿಯೂ ಶಿಕ್ಷಕರು, ಶಿಕ್ಷಣ ಇಲಾಖೆಯೊಂದಿಗಿನ ಸಂವಹನವು ವೆಲೊರೆಡ್‌ನಲ್ಲಿ ನಮಗೆ ಅನೇಕ ಒಳನೋಟಗಳನ್ನು ಒದಗಿಸಿವೆ. ಜೊತೆಗೆ, ಇನ್ನೂ ಅನೇಕ ಸಾಮಾನ್ಯ

ಜನರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂಬ ಸವಾಲು ನಮ್ಮ ಮುಂದಿದ್ದು, ಈ ಹಿನ್ನೆಲೆಯಲ್ಲಿ, ಇವರೆಲ್ಲರನ್ನೂ ಶಾಲೆಗೆ ಕರೆತರುವ ಹಾಗೂ ಗುಣಮಟ್ಟದ ಶಿಕ್ಷಣವನ್ನು ಇವರೆಲ್ಲರಿಗೂ ತಲುಪಿಸುವ ಸರಕಾರದ ಪ್ರಯತ್ನಗಳು ನಿರೀಕ್ಷಿತ ಫಲಿತಾಂಶವನ್ನು ನೀಡಿಲ್ಲ. ಈ ಎಲ್ಲಾ ಅಂಶಗಳು ಜೊತೆಗೂಡಿ, ವ್ಯವಸ್ಥೆಯನ್ನು ನಿಕಟವಾಗಿ ಹಾಗೂ ಗಂಭೀರವಾಗಿ ಗಮನಿಸುವಂತೆ ಪ್ರೇರೇಪಿಸಿದೆ. ಗುಣಮಟ್ಟದ ಶಿಕ್ಷಣವನ್ನು ಲಭ್ಯಗೊಳಿಸಲು, ಗುಣಮಟ್ಟದ ಶಿಕ್ಷಕರೊಂದಿಗೆ, ಮಗುಸ್ನೇಹಿ ಶಾಲೆ ಹಾಗೂ ತರಗತಿಸ್ನೇಹಿ ಪರಿಸರ ಲಭ್ಯವಿರುವುದೂ ಸಹ ಮುಖ್ಯ. ಈ ವಿಚಾರವನ್ನು ಗಮನದಲ್ಲಿರಿಸಿಕೊಂಡು ಮಗು ಸ್ನೇಹಿ ಮಾದರಿ ಶಾಲೆಯನ್ನು ರೂಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವ ಮೂಲಕ, ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ತಲುಪಿಸುವ ಉದ್ದೇಶವನ್ನು ಈಡೇರಿಸಬಹುದು ಎಂಬುದು ನಮ್ಮ ಭಾವನೆ.

2017–2020ರ ಯೋಜನೆಯು ಮುಖ್ಯವಾಗಿ ಮಗುಸ್ನೇಹಿ ಸಮುದಾಯವನ್ನಾಧರಿಸಿ ಗುಣಮಟ್ಟದ ಶಿಕ್ಷಣದಲ್ಲಿ ಸಮುದಾಯದ ಪಾಲುದಾರಿಕೆಯನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಮಗುಸ್ನೇಹಿ ಶಾಲೆ, ಮಗುಸ್ನೇಹಿ ಪಂಚಾಯತ್, ಮಕ್ಕಳ ಶಿಕ್ಷಣ, ಪೋಷಣೆ ಹಾಗೂ ರಕ್ಷಣೆಯಲ್ಲಿ ಸಮುದಾಯ ಈ ಮೂರು ಮುಖ್ಯ ಅಂಶಗಳ ನಿರ್ದಿಷ್ಟ ಪರಿಕಲ್ಪನೆಯನ್ನು ಕಾರ್ಯಕ್ರಮಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಮಗುಸ್ನೇಹಿ ಶಾಲೆಯ ಮೂಲಕ ಪಡಿ ಸಂಸ್ಥೆಯು, ಎಲ್ಲಾ ಮಕ್ಕಳಿಗೂ ಮಗುಸ್ನೇಹಿ ವಾತಾವರಣದೊಂದಿಗೆ, ವಿನೋದಮಯ ಕಲಿಕೆ, ಶಿಕ್ಷಣವನ್ನು ಹೊಂದುವ ಸ್ವಾತಂತ್ರ್ಯ ಹಾಗೂ ಹಕ್ಕನ್ನು ಖಾತ್ರಿಪಡಿಸುವಂತಹ ಬಾಲಕಾರ್ಮಿಕತೆಮುಕ್ತ ಸಮಾಜ ನಿರ್ಮಾಣದ ಆಶಯವನ್ನು ಹೊಂದಿದೆ. ಮೌಲ್ಯಯುತ ಶಿಕ್ಷಣ ಪರಿಕಲ್ಪನೆಯ ಮುಂದಿನ ಹೆಜ್ಜೆಯಾಗಿ ಈ ಸಂಸ್ಥೆಯ ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದು ಈ ಕುರಿತ ಯೋಜನೆಯ ಪ್ರಕ್ರಿಯಾ ವರದಿಯನ್ನು **'ರುಜುವಾತು'** ಎಂಬ ಪುಸ್ತಿಕೆಯ ರೂಪದಲ್ಲಿ ಹೊರತರುತ್ತಿದ್ದೇವೆ. ಮಗುಸ್ನೇಹಿ ವಾತಾವರಣದ ಮೂಲಕ ಮಕ್ಕಳು ಶೋಷಣಾಮುಕ್ತರಾಗಿ ತಮ್ಮ ಹಕ್ಕುಗಳನ್ನು ಅನುಭವಿಸುತ್ತಾ ಸಂತಸದಿಂದ ಬಾಳುವಂತಾಗಲಿ.

**ಡಾ. ಜಯಂತ ಎಚ್.**
ಅಧ್ಯಕ್ಷರು
ಪಡಿ, ಮಂಗಳೂರು

# ಪರಿವಿಡಿ


| | | |
|---|---|---|
| 1. | ಮಗುಸ್ನೇಹಿ ಶಾಲೆಯತ್ತ ನಮ್ಮ ಚಿಂತನೆ | 7–58 |
| 2. | ಪ್ರಕ್ರಿಯೆ ಮತ್ತು ಬದಲಾವಣೆ ವರದಿ | 59–127 |
| 3. | ಯಶೋಗಾಥೆ/ವಿಷಯಧಾರಿತ ಅನುಭವ – ಕೇಸ್ ಸ್ಟಡಿ ಆಧಾರ | 128–220 |
| 4. | ಒಳಹುಗಳು | 221–224 |

# ಮಗುಸ್ನೇಹಿ ಶಾಲೆಯತ್ತ ನಮ್ಮ ಚಿಂತನೆ

**ಪರಿಚಯ:**




ಯಾವುದೇ ಸಮಾಜದಲ್ಲಿ ಶಿಕ್ಷಣವೇ ಮುಖ್ಯ ಬದಲಾವಣೆಯ ಅಂಶ. ಭಾರತ ಸ್ವಾತಂತ್ರ್ಯ ಪೂರ್ವದಲ್ಲಿಯೂ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಿದೆ ಹಾಗೂ ಎಲ್ಲರಿಗೂ ಶಿಕ್ಷಣವನ್ನು ಒದಗಿಸುವ ಪ್ರಯತ್ನಗಳನ್ನು ಮಾಡಿದೆ. 1950ರಿಂದಲೂ ಭಾರತದ ಅಭಿವೃದ್ಧಿ ಗುರಿಯು ಪ್ರಯತ್ನಗಳಲ್ಲಿ, ಎಲ್ಲಾ ಮಕ್ಕಳಿಗೆ ಶಿಕ್ಷಣ ಒದಗಿಸುವುದು ಒಂದು ಗುರಿಯಾಗಿದೆ.

ಭಾರತ ಇಡೀ ಜಗತ್ತಿನ ಮಕ್ಕಳ ಒಟ್ಟು ಸಂಖ್ಯೆಯ ಪೈಕಿ 19%ರಷ್ಟು ಪ್ರಮಾಣವನ್ನು ಹೊಂದಿದೆ. ದೇಶದ ಒಟ್ಟು ಜನಸಂಖ್ಯೆಯ ಪೈಕಿ, ಮೂರನೆಯ ಒಂದು ಭಾಗದಷ್ಟು, ಅಂದರೆ ಅಂದಾಜು 440 ದಶಲಕ್ಷ ಜನಸಂಖ್ಯೆ 18 ವರ್ಷಗಳಿಗಿಂತ ಕಡಿಮೆ ಜನರಿಂದ ಕೂಡಿದೆ. ರಾಷ್ಟ್ರದ ಬಲ, ಆರೋಗ್ಯಪೂರ್ಣ, ಸುರಕ್ಷಿತ, ಶಿಕ್ಷಿತ ಹಾಗೂ ಉತ್ತಮ ಅಭಿವೃದ್ಧಿಯಿಂದ ಕೂಡಿರುವ, ಭವಿಷ್ಯದಲ್ಲಿ ದೇಶದ ಅತ್ಯುತ್ತಮ ಉತ್ಪಾದಕತೆಯೊಂದಿಗೆ ಬೆಳೆಯುವಂತಹ ಮಕ್ಕಳನ್ನು ಆಧರಿಸಿದೆ. ಈ ಹಿನ್ನೆಲೆಯಲ್ಲಿ ಭಾರತದ ಮಕ್ಕಳೇ, ಭಾರತದ ಭವಿಷ್ಯವಾಗಿದ್ದಾರೆ. ಮಕ್ಕಳ ಈ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಶಿಕ್ಷಣ ಒಂದು ಮುಖ್ಯವಾದ ಮಾರ್ಗವಾಗಿದೆ.

ಭಾರತ ಸಂವಿಧಾನದ ಅನುಚ್ಛೇದ 45ರ ಪ್ರಕಾರ, “14 ವರ್ಷಗಳನ್ನು ಪೂರೈಸುವವರೆಗೆ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸುವುದು ರಾಜ್ಯಗಳ ಜವಾಬ್ದಾರಿ. ಸಂವಿಧಾನದ ಈ ಪ್ರಾವಧಾನವನ್ನು ಆಧರಿಸಿ, 1993ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಜೆ.ಪಿ. ಉನ್ನಿಕೃಷ್ಣನ್ ಹಾಗೂ ಇತರರು Vs. ಆಂಧ್ರ ಪ್ರದೇಶ ಸರ್ಕಾರ ಹಾಗೂ ಇತರರು ಪ್ರಕರಣದಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸುವಂತೆ ಸೂಚಿಸಿ ರಾಜ್ಯಗಳಿಗೆ ನಿರ್ದೇಶಿಸಿದೆ; ಶಿಕ್ಷಣದ ಹಕ್ಕು ಸೂಚ್ಯ ಮತ್ತು ಅನುಚ್ಛೇದ 21ರಡಿ ಖಾತ್ರಿಪಡಿಸಿರುವ ಜೀವಿಸುವ ಹಕ್ಕಿನೊಂದಿಗೆ ಸೇರಿದೆ ಎಂದು ವಿವರಿಸುತ್ತದೆ. ಆದ್ದರಿಂದ ಮೊದಲ ಬಾರಿಗೆ, 86ನೇ ತಿದ್ದುಪಡಿ ಕಾಯ್ದೆಯಲ್ಲಿ ಭಾರತದ ಸಂವಿಧಾನಕ್ಕೆ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಸೇರ್ಪಡೆಗೊಳಿಸಲಾಯಿತು. ಈ ಪ್ರಕಾರ, ಶಿಕ್ಷಣವನ್ನು, ಮೂಲಭೂತ ಹಕ್ಕುಗಳ

ನಿರ್ದೇಶಕ ತತ್ತ್ವಗಳಿಂದ ವರ್ಗಾಯಿಸುವ ಮೂಲಕ, ರಾಜ್ಯದ ನೈತಿಕ ಜವಾಬ್ದಾರಿಯಿಂದ ಬದಲಿಸಿ, ಕಡ್ಡಾಯ ಜವಾಬ್ದಾರಿಯಾಗಿ ಪರಿವರ್ತಿಸಲಾಯಿತು.

ಅನುಚ್ಛೇದ 21ಎ, "ರಾಜ್ಯವು ಕಾನೂನಿನ ಪರಿದಿಯೊಳಗೆ ನಿಶ್ಚಯಿಸುವಂತೆ, 6–14 ವರ್ಷಗಳೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು" ಎಂದು ಸೂಚಿಸುತ್ತದೆ ಹಾಗೂ ಅನುಚ್ಛೇದ 45ರಲ್ಲಿ ಮಕ್ಕಳು 6 ವರ್ಷಗಳನ್ನು ಪೂರೈಸುವವರೆಗೂ ಆರಂಭಿಕ ಬಾಲ್ಯ ಶಿಕ್ಷಣವನ್ನು ಒದಗಿಸುವ ಪ್ರಾವಧಾನವನ್ನು ರಚಿಸಿದೆ.



"14 ವರ್ಷಗಳವರೆಗಿನ ಎಲ್ಲಾ ಮಕ್ಕಳಿಗೂ ತೃಪ್ತಿಕರವಾದ ಗುಣಮಟ್ಟದ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಖಾತ್ರಿಪಡಿಸಬೇಕು," ಎಂಬ ಅಂಶವನ್ನು ಆಧರಿಸಿ, 1992ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಚಯಿಸಿದ ನಂತರ ಶಿಕ್ಷಣದಲ್ಲಿ ಗುಣಮಟ್ಟವನ್ನು ತರಲು ಪ್ರಯತ್ನಗಳು ಹಾಗೂ ಪ್ರಯೋಗಗಳನ್ನು ಮಾಡಲಾಯಿತು. ಕರ್ನಾಟಕ, 1993ರಲ್ಲಿ ಸಂವಿಧಾನಕ್ಕೆ 73ನೇ ಹಾಗೂ 74ನೇ ತಿದ್ದುಪಡಿ ಮಾಡಿದ ನಂತರ, ಎಸ್.ಡಿ.ಎಂ.ಸಿ. ಮೂಲಕ ಶಾಲೆಗಳಲ್ಲಿ ಪೋಷಕರಿಗೂ ಅಧಿಕಾರವನ್ನು ನೀಡುವಂತಹ ಹೊಸ ಶಾಸನವನ್ನು ಜಾರಿಗೊಳಿಸಿದ ಮೊದಲ ರಾಜ್ಯವಾಗಿದೆ.

ಈ ನಡುವೆ ಭಾರತ ಸರ್ಕಾರವು 1992ರಲ್ಲಿ, ಶಿಕ್ಷಣವನ್ನು ಮಾನವ ಹಕ್ಕುಗಳ ದೃಷ್ಠಿಕೋನದಲ್ಲಿ ಒಂದು ಮಕ್ಕಳ ಹಕ್ಕಾಗಿ ಗುರುತಿಸುವಂತಹ ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿತು. ಮಕ್ಕಳ ಉತ್ತಮ ಹಿತಾಸಕ್ತಿಯಿಂದ ರಾಜ್ಯಗಳು ಅನುಸರಿಸಬೇಕಾಗಿರುವಂತಹ ಗುಣಮಟ್ಟವನ್ನು ಈ ಘೋಷಣೆಯು, ಸೂಚಿಸುತ್ತದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ರಕ್ಷಣೆಗಾಗಿ, ಪ್ರತಿ ಮನುಷ್ಯನ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಪ್ರಾಮುಖ್ಯತೆಯನ್ನು ಪರಿಗಣಿಸಿ ಈ ಘೋಷಣೆಯನ್ನು ಅಂಗೀಕರಿಸಿರುವ ರಾಜ್ಯಗಳು, ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ಗುರುತಿಸಿಲು ಹಾಗೂ ಅದನ್ನು ಪ್ರಗತಿಪರವಾಗಿ ಸಾಧಿಸಲು ಮತ್ತು ಅನುಚ್ಛೇದ 27ರಲ್ಲಿ ಸಮಾನ ಅವಕಾಶಗಳನ್ನು ಒದಗಿಸುವುದನ್ನು ಆಧರಿಸಿ, ಒಪ್ಪಿಕೊಂಡಿವೆ. ಅನುಚ್ಛೇದ 29ರಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆ ಮಾತನಾಡುತ್ತಾ, ಯುಎನ್‌ಸಿಆರ್‌ಸಿಯು ಮಕ್ಕಳ ಶಿಕ್ಷಣವನ್ನು, ಮಗುವಿನ ವ್ಯಕ್ತಿತ್ವ, ಪ್ರತಿಭೆಗಳು ಹಾಗೂ

ಮಾನಸಿಕ ಮತ್ತು ದೈಹಿಕ ಸಾಮರ್ಥ್ಯಗಳ ಅಭಿವೃದ್ಧಿಯತ್ತ ನಿರ್ದೇಶಿಸುತ್ತದೆ; ಮಾನವ ಹಕ್ಕುಗಳ ಗೌರವ ಮತ್ತು ಮೂಲಭೂತ ಸ್ವತಂತ್ರದ ಅಭಿವೃದ್ಧಿ ಹಾಗೂ ಯುಎನ್ ಶಾಸನದಲ್ಲಿ ಅಳವಡಿಸಿರುವಂತಹ ತತ್ತ್ವಗಳ ಪಾಲನೆ; ಮಕ್ಕಳ ಪೋಷಕರಿಗೆ ಗೌರವವನ್ನು ಒದಗಿಸುವುದು, ಅವನ ಅಥವಾ ಅವಳ ಸ್ವಂತ ಸಾಂಸ್ಕೃತಿಕ ಗುರುತು, ಭಾಷೆ ಹಾಗೂ ಮೌಲ್ಯಗಳು, ಅವನು/ಅವಳು ಸೇರಿರುವ ರಾಷ್ಟ್ರದ ರಾಷ್ಟ್ರೀಯ ಮೌಲ್ಯಗಳಿಗಾಗಿ ಹಾಗೂ ವಿವಿಧ ನಾಗರೀಕತೆಗಳಿಗಾಗಿ; ಮುಕ್ತ ಸಮಾಜದಲ್ಲಿ ಜವಾಬ್ದಾರಿಯುತ ಜೀವನಕ್ಕಾಗಿ ಮಗುವಿನ ತಯಾರಿಗಾಗಿ, ಅರ್ಥಮಾಡಿಕೊಳ್ಳುವ, ಶಾಂತಿ, ತಾಳ್ಮೆ, ಲಿಂಗ ಸಮಾನತೆ ಹಾಗೂ ಎಲ್ಲಾ ಜನರೊಂದಿಗೆ ಸ್ನೇಹಪರತೆಗಾಗಿ; ರಾಷ್ಟ್ರೀಯ ಪರಿಸರದ ಅಭಿವೃದ್ಧಿ.

ಸಂವಿಧಾನದ ಅನುಚ್ಛೇದ 21ಎರ ನಿರ್ದೇಶನ ಹಾಗೂ ಯುಎನ್‌ಸಿಆರ್‌ಸಿ ಬದ್ಧತೆಗೆ ಅನುಗುಣವಾಗಿ, ಭಾರತ ಸರ್ಕಾರವು ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾಯ್ದೆ, 2009ನ್ನು ಜಾರಿಗೊಳಿಸಿದೆ. UNCRCಯಲ್ಲಿರುವಂತಹ ಸೂಚನೆಗಳ ಪ್ರಕಾರ ಶಿಕ್ಷಣವನ್ನು ಒದಗಿಸಲು ಪೂರಕವಾಗಿ ಈ ಕಾಯ್ದೆಯಲ್ಲಿ ಪ್ರಾವಧಾನಗಳನ್ನು ಒದಗಿಸಿದೆ. ಈ ಸಂಬಂಧ, ಮಕ್ಕಳ ಹಕ್ಕುಗಳ ಅನುಷ್ಠಾನಕ್ಕೆ ಸಂಬಂಧಿಸಿದ ನಿಗಾವಹಿಸುವ ಅಂಗದಂತೆ ಕೆಲಸ ನಿರ್ವಹಿಸುತ್ತಿರುವ ಹಾಗೂ ಬೆಂಬಲ ಒದಗಿಸುತ್ತಿರುವಂತಹ ಯುನಿಸೆಫ್, ಮಕ್ಕಳ ಅಭಿವೃದ್ಧಿ ಹಕ್ಕುಗಳನ್ನು ಖಾತ್ರಿಪಡಿಸುವಲ್ಲಿ ಆಗಿರುವ ಪ್ರಗತಿ ಮತ್ತು ಪ್ರಗತಿಪರ ಹಾಗೂ ಮಗುಸ್ನೇಹಿ ಪರಿಸರದಲ್ಲಿ ಶಿಕ್ಷಣದ ಹಕ್ಕಿನ ಅನುಷ್ಠಾನಗಳ ಪ್ರಗತಿಯನ್ನು ಅಂದಾಜಿಸಲು ಮಗುಸ್ನೇಹಿ ಶಾಲಾ ಮಾದರಿಯನ್ನು ಹೊರತಂದಿದೆ. ಮಕ್ಕಳು ಕೇವಲ ತಮ್ಮಲ್ಲಿರುವಂತಹ ಸಂಪೂರ್ಣ ಸಾಮರ್ಥ್ಯಕ್ಕೆ ತಕ್ಕಂತೆ ಅಭಿವೃದ್ಧಿಯನ್ನು ಸಾಧಿಸುವ ಸಂಭವವನ್ನು ಹೊಂದಿರುವ ಕಾರಣದಿಂದಾಗಿ, ಮಗುಸ್ನೇಹಿ ಶಾಲೆಯ ಪರಿಸರದಲ್ಲಿ ಶಿಕ್ಷಣವೇ ಅಂತಿಮ ಗುರಿ.

ಭಾರತದಲ್ಲಿ ಹಾಗೂ ನಿರ್ದಿಷ್ಟವಾಗಿ ಕರ್ನಾಟಕದಲ್ಲಿ ಮಗುಸ್ನೇಹಿ ಶಾಲೆಗೆ ಸಂಬಂಧಿಸಿದ ಅಂಶಗಳನ್ನು ನಿರ್ಧರಿಸಲು ಹಲವು ಸಂಸ್ಥೆಗಳು ಹಾಗೂ ವ್ಯಕ್ತಿಗಳು ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಹಾಗೂ ಸಮುದಾಯ ಶಾಲೆಯಲ್ಲಿ ಸಮುದಾಯ ಭಾಗವಹಿಸುವಿಕೆಯನ್ನು ಅಳವಡಿಸಲು ಶಿಕ್ಷಣ ಇಲಾಖೆಯು ಎಸ್‌ಎಸ್‌ಎ ಮೂಲಕ ಸೂಚಕಗಳನ್ನು ಅಭಿವೃದ್ಧಿಪಡಿಸಿದೆ. ಆದಾಗ್ಯೂ, ಶಿಕ್ಷಣಕ್ಕೆ ಸಂಬಂಧಿಸಿದ ಮಧ್ಯಸ್ಥಿಕೆಗಳ ಸಣ್ಣ ಪ್ರಯತ್ನಗಳನ್ನು ಗುಣಿಸಲು, ಗುಣಮಟ್ಟದ, ಸುಲಭ ವಿಧಾನಗಳನ್ನು ಸ್ಥಾಪಿಸಬೇಕು.




ವಿಶ್ವ ಸಂಸ್ಥೆಯು ಸಹಸ್ರಮಾನದ ಅಭಿವೃದ್ಧಿ ಗುರಿಯಲ್ಲಿಯೂ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಮುಂದಿನ 15 ವರ್ಷಗಳಲ್ಲಿ ಜಗತ್ತಿನ ಜನರೆಲ್ಲರ ಒಳಿತಿಗಾಗಿ ಉತ್ತಮ ವಿಶ್ವವನ್ನು ರೂಪಿಸಲು ಸಾಧಿಸಲೇ ಬೇಕಾದ 17 ಗುರಿಗಳನ್ನು ರೂಪಿಸಿ "ಸುಸ್ಥಿರ ಅಭಿವೃದ್ಧಿ ಗುರಿಗಳು" ಎಂದು ಹೆಸರಿಸಿದೆ. ಈ 17 ಗುರಿಗಳಲ್ಲಿ ಗುಣಮಟ್ಟದ ಶಿಕ್ಷಣವು 4ನೇ ಗುರಿಯಾಗಿದೆ. ಇದರಲ್ಲಿ ಎಲ್ಲರಿಗೂ ಸಮನ್ವಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸುವ ಉದ್ದೇಶವನ್ನು ಹೊಂದಿದೆ. ಈ ಉದ್ದೇಶವನ್ನು ಸಾಧಿಸಬೇಕಾದರೆ ನಮ್ಮ ಶಿಕ್ಷಣ ಮಕ್ಕಳಿಗೆ ಪೂರಕವಾಗಿರಬೇಕು ಮತ್ತು ಅದು ಮಗು ಕೇಂದ್ರಿತವಾಗಿರಬೇಕು. ಪ್ರಮುಖವಾಗಿ ಎಲ್ಲಾ ಮಕ್ಕಳು 2030ರೊಳಗೆ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ಅವಶ್ಯವಿರುವ ಕೌಶಲ್ಯಗಳನ್ನು, ಸುಸ್ಥಿರ ಅಭಿವೃದ್ಧಿಗಾಗಿ ಶಿಕ್ಷಣ ಮತ್ತು ಸುಸ್ಥಿರ ಜೀವನ ಶೈಲಿ, ಮಾನವ ಹಕ್ಕು, ಲಿಂಗ ಸಮಾನತೆ, ಶಾಂತಿ ಮತ್ತು ಅಹಿಂಸೆಯ ಸಂಸ್ಕೃತಿಯನ್ನು ಬೆಳೆಸುವ, ಜಾಗತಿಕ ನಾಗರೀಕತೆ ಮತ್ತು ಬಹುಸಂಸ್ಕೃತಿಯನ್ನು ಮತ್ತು ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ಕೊಡುವ ಸಂಸ್ಕೃತಿಗಳನ್ನು ಬೆಳೆಸಲು ಮಗುಸ್ನೇಹಿ ಶಿಕ್ಷಣ ಸಹಕಾರಿಯಾಗಬಲ್ಲದು.



## ಮಗುಸ್ನೇಹಿ ಶಾಲೆಯ ಅಗತ್ಯ :




ನಮ್ಮ ಮುಂದಿನ ತಲೆಮಾರಿಗೆ ಸಂಸ್ಕೃತಿಯ ಬಗ್ಗೆ ತಿಳಿಸಿಕೊಡಲು ಹಾಗೂ ಜ್ಞಾನವನ್ನು ವರ್ಗಾಯಿಸಲು ಶಿಕ್ಷಣ ಒಂದು ಬಹುಮುಖ್ಯವಾದ ಪರಿಕರವಾಗಿದೆ. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ಮಕ್ಕಳಿಗೆ ಶಾಲಾ ಶಿಕ್ಷಣ ಬಹಳ ಸಕಾರಾತ್ಮಕ ಅನುಭವವಾಗಿರುವುದಿಲ್ಲ. ಮಕ್ಕಳು ಬಹಳ ಸೂಕ್ಷ್ಮತೆ ಹಾಗೂ ಮುಗ್ದತೆಯನ್ನು ಹೊಂದಿರುತ್ತಾರೆ ಹಾಗೂ ತಮ್ಮನ್ನು ತಾವು ಬಹಳ ಸ್ನೇಹಪೂರ್ವಕ ಪರಿಸರಕ್ಕೆ ಹೊಂದಿಸಿಕೊಳ್ಳಲು ಸಮರ್ಥರಾಗಿರುತ್ತಾರೆ. ಆದರೆ ನಮ್ಮ ಶಾಲಾ ವ್ಯವಸ್ಥೆಯು ಮಕ್ಕಳ ಈ ಸೂಕ್ಷ್ಮ ಮನಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯಿಸುವಲ್ಲಿ ಇನ್ನೂ ಹೆಚ್ಚಿನ ಪ್ರಯತ್ನಗಳು ಆಗಬೇಕಾಗಿದೆ. ಬದಲಾಗಿ ಮಕ್ಕಳು ಬಲವಂತವಾಗಿ ಸ್ನೇಹಪರವಲ್ಲದಿರುವಂತಹ ಪರಿಸರದಲ್ಲಿ ಕಲಿಯುವಂತಹ ಪರಿಸರದಿಂದ, ಅತೀ ಕಠಿಣವಾದ ಪಠ್ಯಕ್ರಮ ಹಾಗೂ ತಾರತಮ್ಯತೆ ಹಾಗೂ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಬಹಳ ಬೇಸರ ಮೂಡಿಸುವಂತಹ ವಿಧಾನಗಳಿಂದ ಕೂಡಿದೆ. ನಮ್ಮ ದೇಶದಲ್ಲಿ ಬಡತನ, ಜಾತಿ, ಲಿಂಗ ಹಾಗೂ ಸ್ಥಳೀಯ ಹಾಗೂ ಪ್ರಾದೇಶಿಕ ಅಸಮಾತನೆಗಳಿಂದಾಗಿ ಅನೇಕ ಮಕ್ಕಳು ಶಾಲಾ ವ್ಯವಸ್ಥೆಯಿಂದ ಹೊರಗುಳಿದಿದ್ದಾರೆ. ಆದ್ದರಿಂದ, ಎಲ್ಲಾ ಮಕ್ಕಳು ಸ್ನೇಹಪರ ಹಾಗೂ ಮಕ್ಕಳ ಕೇಂದ್ರಿತ ಶಿಕ್ಷಣವನ್ನು ಹೊಂದುವಂತೆ ಮಾಡುವುದು ಶಿಕ್ಷಣ ವ್ಯವಸ್ಥೆಯ ಈಗಿನ ಅಗತ್ಯವಾಗಿದೆ. ಮಕ್ಕಳ ಪರವಾಗಿ ಕೆಲಸ ನಿರ್ವಹಿಸುತ್ತಿರುವಂತಹ ಸಂಸ್ಥೆಗಳು ಮಕ್ಕಳಿಗೆ, ಸಂಯುಕ್ತ ರಾಷ್ಟ್ರಗಳ ಮಕ್ಕಳ ಹಕ್ಕಿನ ಘೋಷಣೆಯ ತತ್ತ್ವಗಳು ಹಾಗೂ ಮಾರ್ಗಸೂಚಿಗಳ ಪ್ರಕಾರ ಮಗುಸ್ನೇಹಿ ಶಿಕ್ಷಣವನ್ನು ಒದಗಿಸಲು ಶ್ರಮಿಸುತ್ತಿವೆ.

ಆರ್‌ಟಿಇ (ಶಿಕ್ಷಣ ಹಕ್ಕು) ಕಾಯ್ದೆಯು, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಆಧರಿಸಿದೆ ಹಾಗೂ ನ್ಯಾಯಬದ್ಧ ಹಾಗೂ ಎಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಪ್ರಾವಧಾನದ ಮೂಲಕ ಮಾನವೀಯ ಸಮಾಜದ ರಚನೆ ಸಾಧಿಸಬಹುದು. ಸೌಕರ್ಯವಂಚಿತ ಹಾಗೂ ಬಲಹೀನ ವರ್ಗಗಳ ಜನರ ಮಕ್ಕಳಿಗೆ ತೃಪ್ತಕರ ಗುಣಮಟ್ಟದ, ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸುವುದು ಸರ್ಕಾರ ಹಾಗೂ ನಾಗರೀಕ ಸಮಾಜ, ಇಬ್ಬರ ಜವಾಬ್ದಾರಿಯೂ ಆಗಿದೆ.

# ಮಗುಸ್ನೇಹಿ ಶಾಲಾ ಪರಿಕಲ್ಪನೆ




ಮಗುಸ್ನೇಹಿ ಶಾಲೆ ಪರಿಕಲ್ಪನೆಯು ಬಹು ಆಯಾಮಗಳ ಗುಣಮಟ್ಟದ ಶಿಕ್ಷಣ ಪರಿಕಲ್ಪನೆಯನ್ನು ಆಧರಿಸಿದೆ ಮತ್ತು ಮಗುವಿನ ಒಟ್ಟು ಅಗತ್ಯಗಳನ್ನು ಕೇಂದ್ರೀಕರಿಸಿದೆ ಹಾಗೂ ಮಗು ಫಲಾನುಭವಿಯೆಂಬ ದೃಷ್ಟಿಕೋನವನ್ನು ಹೊಂದಿದೆ. ಇದು ಮಕ್ಕಳ ಹಕ್ಕುಗಳ ಘೋಷಣೆಯನ್ನು ಆಧರಿಸಿದೆ ಹಾಗೂ ಶಿಕ್ಷಣ ಸುಧಾರಣೆಗಳ ಎಲ್ಲಾ ಅಂಶಗಳೊಂದಿಗೆ ಸಂಬಂಧಿಸಿದಂತೆ ವಿಸ್ತಾರವಾದ ದೃಷ್ಟಿಕೋನವನ್ನು ಹೊಂದಿದೆ. ಈ ಮೂಲಕ ಶಾಲೆಯಲ್ಲಿ ಆಯೋಜಿಸುವ ಹಾಗೂ ಅನುಷ್ಠಾನಗೊಳಿಸುವ ಎಲ್ಲಾ ಚಟುವಟಿಕೆಗಳಲ್ಲಿಯೂ ಮಕ್ಕಳ ಕೇಂದ್ರೀಕೃತ ದೃಷ್ಟಿಕೋನದಿಂದ ಕೂಡಿದೆ.

ಮಗುಸ್ನೇಹಿ ಶಾಲೆ ಎಂದರೆ, ಪ್ರತಿ ಮಗುವಿನ ಕಲಿಕೆ ಪ್ರಕ್ರಿಯೆಯಲ್ಲಿ ಮಕ್ಕಳ ಕಲ್ಯಾಣ, ಹಕ್ಕುಗಳು ಹಾಗೂ ಸ್ನೇಹಪರ ಪರಿಸರದ ಮೇಲೆ ಪರಿಣಾಮ ಬೀರುವಂತಹ ಎಲ್ಲಾ ವಿಷಯಗಳನ್ನೂ ಬಗೆಹರಿಸುವಂತಹ, ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತಿರುವ ಶಾಲೆ. ಕಲಿಕೆ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಎಲ್ಲಾ ಆಯೋಜನೆ ಮತ್ತು ಹಂಚಿಕೆಗಳು ಮಕ್ಕಳ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ರೂಪಿಸಿಲಾಗಿವೆ. ಈ ದೃಷ್ಟಿಕೋನವು ಕಲಿಯುವವರಿಗೆ ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಮತ್ತು ಅದನ್ನು ಇತರರೊಂದಿಗೆ ಹಂಚಿಕೊಳ್ಳಲು ಪ್ರೋತ್ಸಾಹಿಸುತ್ತದೆ ಹಾಗೂ ಅವರಿಗೆ ಆಲೋಚಿಸುವ, ಅನುಭವಿಸುವ, ಪರಿಶೋಧಿಸುವ, ಪ್ರಶ್ನಿಸುವ ಹಾಗೂ ಪ್ರತಿಕ್ರಿಯೆಯನ್ನು ಕೋರುವ ಹಕ್ಕನ್ನು ಒದಗಿಸುತ್ತದೆ. ಪ್ರತಿ ಮಗುವಿನ ಅಗತ್ಯಗಳನ್ನು ಪೂರೈಸುವ ಹಾಗೂ ಮಾನವರ ಮೂಲಭೂತ ಹಕ್ಕುಗಳು ಹಾಗೂ ಸ್ವತಂತ್ರಗಳನ್ನು ಗೌರವಿಸುವ ನಿಟ್ಟಿನಲ್ಲಿ ಸತತ ಪ್ರಯತ್ನಗಳನ್ನು ಮಾಡುವುದು ಮಗುಸ್ನೇಹಿ ಶಾಲೆಗಳ ಪ್ರಾಥಮಿಕ ತತ್ತ್ವವಾಗಿದೆ.

ಗುಣಮಟ್ಟದ ಸುಧಾರಣೆಗೆ, ಶಿಕ್ಷಣ ವ್ಯವಸ್ಥೆ ಒಳಗೊಂಡಂತೆ ಶಾಲೆಯಲ್ಲಿ ಬಹು–ರೂಪಗಳ ಕಾರ್ಯತಂತ್ರಗಳ ಅಗತ್ಯವಿದೆ. ಪಠ್ಯಕ್ರಮದ ಸುಧಾರಣೆ, ಬೋಧನೆ–ಕಲಿಕೆ ಪರಿಸರ ಮತ್ತು ಸಕಾರಾತ್ಮಕ ಶಾಲಾ–ಸಮುದಾಯ ಸಂಪರ್ಕಗಳನ್ನು ಪ್ರೋತ್ಸಾಹಿಸುವಂತಹ ಬೆಂಬಲಿತ ಮಧ್ಯಸ್ಥಿಕೆಗಳು ಇದರಲ್ಲಿ ಸೇರಿದೆ. ಯಶಸ್ವಿ

ಗುಣಮಟ್ಟದ ಉಪಕ್ರಮಗಳನ್ನು ಹೊಂದಲು, ಭಾಗವಹಿಸುವ ಯೋಜನೆ ರೂಪಿಸುವಿಕೆ, ಕ್ರೋಢೀಕರಣ, ಸಂಪನ್ಮೂಲಗಳ ಬಳಕೆ ಹಾಗೂ ಕಾರ್ಯತಂತ್ರಗಳಿಂದ ಕೂಡಿರುವಂತಹ ನಿರ್ದಿಷ್ಟ ಕೌಶಲ್ಯಗಳ ಅಗತ್ಯವಿರುವಂತಹ ಸ್ಥಳೀಯ, ಪ್ರದೇಶ ಆಧಾರಿತ ಯೋಜನೆ ಹಾಗೂ ನಿರ್ವಹಣೆ ಹಾಗೂ ಹೊಣೆಗಾರಿಕೆಯ ಜವಾಬ್ದಾರಿಯನ್ನು ಹೊರಿಸುವಂತಹ ಇಚ್ಛೆಯ ಅಗತ್ಯವಿದೆ.

ಒಂದು ಪರಿಕಲ್ಪನೆಯಾಗಿ, ಮಗುಸ್ನೇಹಿ ಶಾಲೆಯು ಶಿಕ್ಷಣದ ಪ್ರಜಾಸತ್ತಾತ್ಮಕತೆಯನ್ನು ಪೋಷಿಸುತ್ತದೆ. ಇದು, ಮಕ್ಕಳ ಕಲಿಕೆಗೆ ನೆರವಾಗುವಂತಹ ಉತ್ತಮ ತರಬೇತಿ ಹೊಂದಿರುವ ಶಿಕ್ಷಕರು, ಸೂಕ್ತ ಸಂಪನ್ಮೂಲಗಳು ಹಾಗೂ ಸೂಕ್ತ ಭೌತಿಕ, ಭಾವನಾತ್ಮಕ ಹಾಗೂ ಸಾಮಾಜಿಕ ಪರಿಸ್ಥಿತಿಗಳಿಂದ ಕೂಡಿರುವಂತಹ, ಅರೋಗ್ಯ, ನೈರ್ಮಲ್ಯ, ಸುರಕ್ಷಿತ ಹಾಗೂ ಸಂತೋಷದ ಪರಿಸರವನ್ನು ಒದಗಿಸುವಂತೆ ಕೋರುತ್ತದೆ. ಜೊತೆಗೆ ಇದು, ಲಿಂಗ ಸಂಬಂಧಿತ ಅಂಶಗಳ ಕಡೆ ಸೂಕ್ಷ್ಮತೆಯನ್ನು ಹೊಂದಿರುವಂತಹ ವರ್ತನೆ ಹಾಗೂ ತರಗತಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಹಾಗೂ ಈ ಮೂಲಕ ಮಕ್ಕಳ ಹಕ್ಕುಗಳನ್ನು ರಕ್ಷಿಸುವಂತಹ ಹಾಗೂ ಅವರ ಧ್ವನಿಗಳನ್ನು ಆಲಿಸುವಂತಹ ಪರಿಣಾಮಕಾರಿ ಕಲಿಕೆಗೆ ದಾರಿಯಾಗುತ್ತದೆ. ಮಕ್ಕಳ ಪಾಲ್ಗೊಳ್ಳುವಿಕೆ, ತಮ್ಮ ಮಕ್ಕಳ ಶಾಲಾ ಶಿಕ್ಷಣದಲ್ಲಿ ಕುಟುಂಬಗಳು ಹಾಗೂ ಸಮುದಾಯಗಳ ಪಾಲ್ಗೊಳ್ಳುವಿಕೆಯನ್ನು ಸಕಾರಾತ್ಮಕವಾಗಿ ಸಂಯೋಜಿಸುತ್ತದೆ.




ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣದ ಹಕ್ಕನ್ನು ಎಲ್ಲಾ ಮಕ್ಕಳಿಗೂ ಖಾತ್ರಿಪಡಿಸುವುದು, ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಉಪಕ್ರಮಗಳ ಪ್ರಮುಖ ಗುರಿಯಾಗಿದೆ. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಒದಗುವುದನ್ನು ಖಾತ್ರಿಪಡಿಸುವುದೂ ಸಹ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಮೂಲಭೂತ ಅಂಶವಾಗಿದೆ. ಸುಸ್ಥಿರ ಅಭಿವೃದ್ಧಿ ಸಾಧನೆ – ಬಡತನಕ್ಕಾಗಿ, ಹಸಿವು, ಲಿಂಗ ಸಮಾನತೆ, ಮಕ್ಕಳ ಮರಣ ಪ್ರಮಾಣ, ಕುಡಿಯುವ ನೀರಿನ ದೊರೆಯುವಿಕೆ ಹಾಗೂ ನೈರ್ಮಲ್ಯಕ್ಕಾಗಿ – ಇದು ಶಿಕ್ಷಣ ವ್ಯವಸ್ಥೆಗಳ ಯಶಸ್ಸನ್ನು ಆಧರಿಸಿದೆ.

## ಉದ್ದೇಶ ಮತ್ತು ವ್ಯಾಪ್ತಿ



ಶಾಲೆಗಳು ಹಾಗೂ ಶಿಕ್ಷಣ ವ್ಯವಸ್ಥೆಗಳನ್ನು, ಗುಣಮಟ್ಟದ ಕಡೆ ಕೊಂಡೊಯ್ಯುವ, ಮಕ್ಕಳ ಹಕ್ಕುಗಳು ಹಾಗೂ ಕಲಿಯುವವರಿಗಾಗಿ ಹಾಗೂ ಕಲಿಕೆಯ ಪ್ರಮುಖ ಫಲಾನುಭವಿಯಾಗಿರುವಂತಹ ಮಕ್ಕಳ ಯೋಗಕ್ಷೇಮದ ಮೇಲೆ ಪ್ರಭಾವ ಬೀರುವಂತಹ ವಿಷಯಗಳನ್ನು ಪೂರೈಸುವಂತಹ, ಜೊತೆಗೆ ಇದೇ ಸಮಯದಲ್ಲಿ ಇತರೆ ಶಾಲೆಗಳ ಕಾರ್ಯಾಚರಣೆಗಳನ್ನೂ ಸುಧಾರಿಸುವಂತಹ ಅಂಶಗಳನ್ನು ಪೂರೈಸುವುದು ಮಗುಸ್ನೇಹಿ ಪರಿಕಲ್ಪನೆಯ ಉದ್ದೇಶ. ಗುಣಮಟ್ಟವು, ಎಲ್ಲಾ ಮಕ್ಕಳು ಶಾಲೆಗೆ ಹೋಗುವಂತಹ, ತರಗತಿಯಿಂದ ತರಗತಿಗೆ ಉತ್ತೀರ್ಣರಾಗುವಂತಹ ಮತ್ತು ನಿಗದಿತ ಸಮಯದೊಳಗೆ ಶಿಕ್ಷಣವನ್ನು ಪೂರೈಸುವುದನ್ನು ಖಾತ್ರಿಪಡಿಸಬೇಕು; ಜೊತೆಗೆ ಗುಣಮಟ್ಟವು, ವಿದ್ಯಾರ್ಥಿಗಳು ಬೆಳೆಯುವ, ಅಭಿವೃದ್ಧಿ ಹೊಂದುವ ಹಾಗೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸಾಧಿಸುವಂತಹ ಪುಷ್ಟೀಕರಿಸಿದ ಶೈಕ್ಷಣಿಕ ಅನುಭವವನ್ನೂ ಒದಗಿಸಬೇಕು.

ಮಗುಸ್ನೇಹಿ ಶಾಲಾ ಮಾದರಿಗಳು, ಸಂಬಂಧಪಟ್ಟ ಎಲ್ಲಾ ಭಾಗೀದಾರರೂ, ಗುಣಮಟ್ಟದ ಶಿಕ್ಷಣವನ್ನು ಪಡೆಯುವಂತಹ ಮಕ್ಕಳ ಹಕ್ಕನ್ನು ಒದಗಿಸುವಂತಹ ಸಂಪೂರ್ಣ ಪಾಲ್ಗೊಳ್ಳುವಿಕೆ ಹಾಗೂ ಬೆಂಬಲಕ್ಕೆ ಸಂಬಂಧಿಸಿದೆ. ಈ ಭಾಗೀದಾರರು, ಅಥವಾ 'ಕರ್ತವ್ಯ ಪದಾಧಿಕಾರಿಗಳ' ಪೈಕಿ ಪೋಷಕರು, ಸಮುದಾಯಗಳು, ಶಿಕ್ಷಕರು, ಶಾಲಾ ಮುಖ್ಯಸ್ಥರು, ಶೈಕ್ಷಣಿಕ ಯೋಜಕರು ಹಾಗೂ ನಾಗರೀಕ ಸಮಾಜ ಗುಂಪುಗಳು ಮತ್ತು ಸ್ಥಳೀಯ ಹಾಗೂ ರಾಷ್ಟ್ರೀಯ ಸರ್ಕಾರಗಳು ಹಾಗೂ ಅವರ ಬಾಹ್ಯ ಪಾಲುದಾರರು ಸೇರಿದ್ದಾರೆ. ಶಾಲೆಗಳು ಹಾಗೂ ಶಿಕ್ಷಣ ವ್ಯವಸ್ಥೆಗಳು, ಮಗುಸ್ನೇಹಿ ಪರಿಕಲ್ಪನೆಯು ಹೊಂದಿರುವಂತಹ ಗುಣಮಟ್ಟವನ್ನು ಸಾಧಿಸಲು ಅಗತ್ಯವಿರುವ ಸಂಪನ್ಮೂಲಗಳು ಹಾಗೂ ಪರಿಸ್ಥಿತಿಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಲು, ಇವರೆಲ್ಲರ ಪಾಲ್ಗೊಳ್ಳುವಿಕೆಯು ನೆರವಾಗುತ್ತದೆ.

ಮಗುಸ್ನೇಹಿ ಶಾಲಾ ಪರಿಕಲ್ಪನೆಯು ಶೈಕ್ಷಣಿಕ ಶ್ರೇಷ್ಠತೆ ಹಾಗೂ ಪ್ರದರ್ಶನ ಫಲಿತಾಂಶಗಳನ್ನು ದಾಟುವ ಗುಣಮಟ್ಟದ ಪರಿಕಲ್ಪನೆಯನ್ನು ಹೊಂದಿರುತ್ತವೆ. ಈ ಪರಿಕಲ್ಪನೆಯ ಮುಖ್ಯ ದೃಷ್ಟಿಕೋನ, ಬೋಧಕರು ಸಾಂಪ್ರದಾಯಿಕವಾಗಿ ತಾವು


ಜವಾಬ್ದಾರಿಯೆಂದು ಭಾವಿಸುವಂತಹ 'ಶಾಲಾ ತುಣುಕು'ಗಳಲ್ಲ, ಬದಲಾಗಿ ಮಗುವಿನ ಅಗತ್ಯಗಳಾಗಿವೆ. ಮಗುಸ್ನೇಹಿ ಶಾಲಾ ಪರಿಕಲ್ಪನೆಯ ವ್ಯಾಪ್ತಿ, ಗುಣಮಟ್ಟದ ಬಹುಆಯಾಮಗಳ ವ್ಯಾಪ್ತಿ ಮತ್ತು ಮಗುವಿನ ಅಗತ್ಯಗಳ ಸಮಗ್ರ ಪರಿಕಲ್ಪನೆಯಿಂದ ಕೂಡಿದೆ.

## ಮಗುಸ್ನೇಹಿ ಶಾಲೆಯ ಚೌಕಟ್ಟು

ಮಗುಸ್ನೇಹಿ ಶಾಲೆ ಚೌಕಟ್ಟು ಯುಎನ್‌ಸಿಆರ್‌ಸಿಯ ಮಕ್ಕಳ ಹಕ್ಕುಗಳ ತತ್ತ್ವಗಳನ್ನು ಆಧರಿಸಿದೆ. ಇದು ಶಾಲೆಯಲ್ಲಿ ಆಯೋಜಿಸುವ ಹಾಗೂ ಅನುಷ್ಠಾನಗೊಳಿಸುವ ಎಲ್ಲಾ ಚಟುವಟಿಕೆಗಳು ಮಕ್ಕಳ ಕೇಂದ್ರೀಕೃತವಾಗಿರುವಂತಹ ಸಮಗ್ರ ದೃಷ್ಠಿಕೋನವಾಗಿದೆ. ಆದ್ದರಿಂದ, ಶಾಲೆಯಲ್ಲಿ ಸಾಧಿಸುವಂತಹ ಎಲ್ಲಾ ಹಾಗೂ ಅದನ್ನು ಸಾಧಿಸುವಲ್ಲಿ ಪಾಲ್ಗೊಳ್ಳುವಂತಹ ಪ್ರತಿಯೊಬ್ಬರನ್ನೂ ಸಹ, ಕಲಿಯುವವರ ಆಸಕ್ತಿಗಳ ಸುತ್ತ ಅಭಿವೃದ್ಧಿ



ಪಡಿಸಬೇಕು. ಈ ತತ್ತ್ವಗಳು, ಈ ಮುಂದಿನ ಅಂಶಗಳಿಗೆ ಒತ್ತು ನೀಡುತ್ತದೆ:– ದಾಖಲಾತಿ ಮತ್ತು ಹಾಜರಾತಿಯನ್ನು ಪ್ರೋತ್ಸಾಹಿಸುವಂತಹ ವ್ಯವಸ್ಥೆಯಡಿ ಎಲ್ಲಾ ಮಕ್ಕಳೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕು; ಮಾನವೀಯವಾಗಿ ಹಾಗೂ ನ್ಯಾಯಯುತವಾಗಿ ಶಿಸ್ತಿನ ಅಳವಡಿಕೆ; ವಿದ್ಯಾರ್ಥಿಗಳ ವ್ಯಕ್ತಿತ್ವ, ಪ್ರತಿಭೆ ಹಾಗೂ ಸಾಮರ್ಥ್ಯಗಳ ಅಭಿವೃದ್ಧಿ; ಮಕ್ಕಳ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವತಂತ್ರಗಳ ಗೌರವ; ಮಗುವಿನ ಸ್ವಂತ ಸಂಸ್ಕೃತಿಯ ಗುರುತು, ಭಾಷೆ ಹಾಗೂ ಮೌಲ್ಯಗಳು ಮತ್ತು ರಾಷ್ಟ್ರದ ಸಂಸ್ಕೃತಿ ಹಾಗೂ ಮಗು ವಾಸಿಸುತ್ತಿರುವಂತಹ ರಾಷ್ಟ್ರದ ಮೌಲ್ಯಗಳನ್ನು ಪ್ರೋತ್ಸಾಹಿಸುವುದು ಹಾಗೂ ಗೌರವಿಸುವುದು; ಮತ್ತು ಮಗು ಇತರನ್ನು ಗೌರವಿಸುವಂತಹ ಹಾಗೂ ಸ್ವಾಭಾವಿಕ ಪರಿಸರವನ್ನು ಗೌರವಿಸುವಂತಹ ಜವಾಬ್ದಾರಿಯುತ ವ್ಯಕ್ತಿಯಾಗಿ ಹಾಗೂ ಮುಕ್ತವಾಗಿ ಬದುಕುವಂತೆ ಅಣಿಗೊಳಿಸುವುದು.




ಮಗುವಿನ ಜೀವನದಲ್ಲಿ ಶಾಲೆಗಳು ಬಹು ಮುಖ್ಯ ಅಂಶ. ಶಾಲೆಗಳು ಎಲ್ಲಾ ಮಕ್ಕಳಿಗೂ ದೊರೆಯುವಂತಿರಬೇಕು ಮತ್ತು ಸ್ವಾಗತಿಸುವಂತಿರಬೇಕು. ಶಾಲೆಯು, ಮಕ್ಕಳು, ಪೋಷಕರು ಹಾಗೂ ಸಮುದಾಯದ ಪ್ರಜಾಸತ್ತಾತ್ಮಕ ಭಾಗವಿಸುವಿಕೆಯನ್ನು ಪ್ರೋತ್ಸಾಹಿಸುವಂತಹ ಆರೋಗ್ಯಪೂರ್ಣ, ಸುರಕ್ಷಿತ ಹಾಗೂ ರಕ್ಷಣಾತ್ಮಕ ಕಲಿಕಾ ಪರಿಸರದಲ್ಲಿ ಅನುಷ್ಠಾನಗೊಳಿಸುವಂತಹ ಮಗು-ಕೇಂದ್ರಿತ ಶೈಕ್ಷಣಿಕ ದೃಷ್ಟಿಕೋನಗಳನ್ನು ಹೊಂದಿರಬೇಕು. ಇವೆಲ್ಲವೂ ಜೊತೆಗೂಡಿ, ಮಕ್ಕಳು ಸುರಕ್ಷಿತವಾಗಿರಲು ಮತ್ತು ಸೇರ್ಪಡೆಯಾಗಿರಲು, ಸವಾಲುಗಳನ್ನು ಎದುರಿಸಲು ಮತ್ತು ಬೆಂಬಲ ಪಡೆಯುವಂತೆ ಮಾಡುತ್ತದೆ. ಈ ಎಲ್ಲಾ ಅಂಶಗಳೂ ಮಕ್ಕಳಿಗೆ ಬಹಳ ಮುಖ್ಯ. ಏಕೆಂದರೆ, ಮಕ್ಕಳು ಇದರಿಂದ ಶಾಲೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಲಿಯಲು ಹಾಗೂ ಮುಂದುವರೆಯಲು ನೆರವಾಗುತ್ತದೆ.

ಶಾಲೆಗಳು ಹೆಚ್ಚು ವಿಸ್ತಾರವಾದ ಸಂದರ್ಭಗಳಲ್ಲಿವೆ: ರಾಷ್ಟ್ರೀಯ ಹಾಗೂ ಸ್ಥಳೀಯ ನೀತಿಗಳು, ವಕಾಲತ್ತು ಪ್ರಯತ್ನಗಳು ಮತ್ತು ಬಹು-ವಲಯ ದೃಷ್ಟಿಕೋನಗಳು, ಸಂಪನ್ಮೂಲಗಳ ಲಭ್ಯತೆ ಹಾಗೂ ಹಂಚಿಕೆ ಮತ್ತು ಶಾಲಾ-ಮಟ್ಟದ ನೀತಿಗಳು ಹಾಗೂ ಅಭ್ಯಾಸಗಳನ್ನು ನಿರ್ಧರಿಸುತ್ತದೆ. ಮತ್ತೊಂದು ಪ್ರಭಾವವೆಂದರೆ, ಸರ್ಕಾರ ಹಾಗೂ ಶಾಲೆಗಳನ್ನು ಪ್ರೋತ್ಸಾಹಿಸಿ ಬೆಂಬಲಿಸುವಂತಹ ಸರ್ಕಾರೇತರ ಸಂಸ್ಥೆಗಳು ಹಾಗೂ ನಾಗರೀಕ ಸಮಾಜ ಸಂಸ್ಥೆಗಳ ಇತರೆ ಪಾಲುದಾರರ ಬೆಂಬಲ. ಅಂತಿಮವಾಗಿ, ತತ್ತ್ವಗಳು ಹೇಗೆ ಅನುಷ್ಠಾನವಾಗುತ್ತಿವೆ ಮತ್ತು ಹೇಗೆ ಕೈಗೂಡುತ್ತಿದೆ ಎಂಬ ಅಂಶಗಳ ಮೇಲೆ ರಾಷ್ಟ್ರದ ಆರ್ಥಿಕ ಆರೋಗ್ಯ ಮತ್ತು ಜನಸಂಖ್ಯಾಶಾಸ್ತ್ರದ ವ್ಯಕ್ತಿಚಿತ್ರಣ ಹಾಗೂ ರಾಜಕೀಯ ಸನ್ನಿವೇಶಗಳು ಅಗತ್ಯ ಪ್ರಭಾವ ಬೀರುತ್ತವೆ.

## ಮಗುಸ್ನೇಹಿ ಶಾಲಾ ಚೌಕಟ್ಟಿನ 6 ಪ್ರಮುಖ ಆಯಾಮಗಳು




ಎಲ್ಲಾ ಮಕ್ಕಳ ಒಳಗೊಳ್ಳುವಿಕೆ

ಪರಿಣಾಮಕಾರಿ ಕಲಿಕೆ ಮತ್ತು ಭೋದನೆ (ಪ್ರಸ್ತುತತೆ ಮತ್ತು ಗುಣಮಟ್ಟ)

ಆರೋಗ್ಯಯುತ ಪರಿಸರ ಮತ್ತು ಸುರಕ್ಷತೆ

ಲಿಂಗ–ಸ್ನೇಹಪರತೆ

ಪ್ರಜಾಪ್ರಭುತ್ವ ಮಾದರಿಯಲ್ಲಿ ಮಕ್ಕಳ, ಹೆತ್ತವರ ಮತ್ತು ಸಮುದಾಯದ ಪಾಲ್ಗೋಳ್ಳುವಿಕೆ

ಸಾಂಸ್ಕೃತಿಕ ವೈವಿಧ್ಯತೆ


## ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣ ಮಾಡುವಲ್ಲಿ ಕೈಗೊಳ್ಳುವಲ್ಲಿ ಪ್ರಮುಖ ಚಟುವಟಿಕೆಗಳು



ಶಾಲೆಯಲ್ಲಿ ಮಕ್ಕಳ ಹಾಜರಾತಿಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದು ಮತ್ತ ಶಾಲೆಯಿಂದ ಹೊರಗುಳಿಯುವ ಮಕ್ಕಳ ಪ್ರಮಾಣವನ್ನು ನಿಲ್ಲಿಸುವುದು.

ಶಿಕ್ಷೆ ರಹಿತ ಬೋಧನೆಗೆ ಪ್ರೇರಣೆ ಮತ್ತು ಮಕ್ಕಳ ಮೇಲೆ ಯಾವುದೇ ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸೆ, ದೌರ್ಜನ್ಯ, ಕಿರುಕುಳ, ಹಾಗೂ ತಾರತಮ್ಯ ಆಗದಂತೆ ನೋಡಿಕೊಳ್ಳುವುದು.

ಶಾಲಾ ಚಟುವಟಿಕೆಗಳ (ಮೂಲಭೂತ ಸೌಕರ್ಯ ಹಾಗೂ ಮಕ್ಕಳ ಕಲಿಕಾ ಪ್ರಗತಿ ಪರಿಶೀಲನೆ) ನಿರಂತರ ಮೌಲ್ಯಮಾಪನ.



ಸಮುದಾಯದಲ್ಲಿ ಮಕ್ಕಳ ಸುರಕ್ಷೆ ಮತ್ತು ಮಕ್ಕಳ ಹಕ್ಕುಗಳು ಹಾಗೂ ರಕ್ಷಣೆಗಾಗಿ ಇರುವ ವಿವಿಧ ಕಾನೂನು ಮತ್ತು ಪ್ರಾಧಿಕಾರಗಳ ಕುರಿತು ಜನ ಜಾಗೃತಿ.

ಪಂಚಾಯತು ವ್ಯಾಪ್ತಿಯ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವಲ್ಲಿ ಸಾಮುದಾಯಿಕ ಆಂದೋಲನವನ್ನು ಕೈಗೊಳ್ಳುವುದು.

ಶಾಲಾ ಚಟುವಟಿಕೆಗಳಲ್ಲಿ ಲಿಂಗ ಸಮಾನತೆಯಾಧಾರಿತ ಕಾರ್ಯಕ್ರಮಗಳ ಆಯೋಜನೆಗೆ ಪ್ರೇರಣೆ.

ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾಯಿದೆಯ ಪರಿಪೂರ್ಣ ಜಾರಿಗಾಗಿ ಕಾರ್ಯತಂತ್ರಗಳ ಆಯೋಜನೆ.

ಶಾಲಾಭಿವೃದ್ಧಿಗಾಗಿ ಪೋಷಕರ ಮತ್ತು ಎಸ್.ಡಿ.ಎಮ್.ಸಿಯ ಸಬಲೀಕರಣದೊಂದಿಗೆ ಶಾಲಾ ಚಟುವಟಿಕೆಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು.

ಶಾಲಾ ಹಂತದಲ್ಲಿ ಮಕ್ಕಳಲ್ಲಿ ನಾಯಕತ್ವ ಬೆಳೆಸುವ ಹಾಗೂ ಎಲ್ಲಾ ಮಕ್ಕಳಿಗೆ ಸಮಾನವಾಗಿ ಭಾಗವಹಿಸುವ ಅವಕಾಶ ನಿರ್ಮಾಣ ಮಾಡುವುದರೊಂದಿಗೆ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಮತ್ತು ಚಿಂತನಾ ಶಕ್ತಿ ಬೆಳೆಸಿ ಪ್ರತಿಭೆಗಳ ಅನಾವರಣಕ್ಕೆ ಕಾರ್ಯಕ್ರಮಗಳ ಆಯೋಜನೆ.



ಶಿಕ್ಷಣ ಇಲಾಖೆಯ ವಿವಿಧ ಸ್ತರಗಳ ಆಡಳಿತ ವ್ಯವಸ್ಥೆಗಳ ಮೂಲಕ ಮಕ್ಕಳ ಗುಣಾತ್ಮಕ ಶಿಕ್ಷಣದ ಮೌಲ್ಯಮಾಪನವನ್ನು ಕಾಲಕಾಲಕ್ಕೆ ನಡೆಸಿ ಎಲ್ಲಾ ಮಕ್ಕಳ ಪ್ರಗತಿಗೆ ಸಹಕರಿಸುವುದು.

ಮಕ್ಕಳಲ್ಲಿನ ಪ್ರತಿಭೆಗಳ ಅನಾವರಣ ಮತ್ತು ಜನಜಾಗೃತಿಗಾಗಿ ಮಕ್ಕಳ ಶೈಕ್ಷಣಿಕ ರಂಗ ತಂಡ ರಚನೆ.

ಎಸ್.ಡಿ.ಎಮ್.ಸಿ.ಗೆ ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣ ಮಾಡುವಲ್ಲಿ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ.

ಶಾಲಾ ಮಟ್ಟದಲ್ಲಿ ಮಕ್ಕಳ ವಿವಿಧ ಸಂಘ/ಕ್ಲಬ್‌ಗಳ ಪರಿಣಾಮಕಾರಿ ಅನುಷ್ಠಾನ ಮಾಡುವ ಮೂಲಕ ಮಕ್ಕಳ ಭಾಗವಹಿಸುವ ಹಕ್ಕಿನ ಚಲಾವಣೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಪರಿಚಯ.

ಈ ಮೇಲಿನ ಅಂಶಗಳ ಈಡೇರಿಕೆಗಾಗಿ ಶಾಲೆಯ ಅಭಿವೃದ್ಧಿಯಲ್ಲಿ ಪ್ರಮುಖ ಭಾಗಿದಾರರಾದ ಮಕ್ಕಳು, ಶಿಕ್ಷಕರು, ಎಸ್.ಡಿ.ಎಮ್.ಸಿ. ಹಳೆ ವಿದ್ಯಾರ್ಥಿ ಸಂಘಟನೆಗಳು, ನಾಗರೀಕ ಸಮುದಾಯ, ಸ್ಥಳೀಯ ಸರಕಾರ ಮತ್ತು ಶಿಕ್ಷಣ ಇಲಾಖೆ ಜಂಟಿಯಾಗಿ ಮಕ್ಕಳ ಕೇಂದ್ರಿತ ಶಿಕ್ಷಣದ ಜತೆಗೆ ಮಗು ಸ್ನೇಹಿ ವಾತಾವರಣ ನಿರ್ಮಾಣ ಮಾಡುವಲ್ಲಿ ಕೈಜೋಡಿಸಿದರೆ ಯಶಸ್ವಿಯಾಗಬಹುದು.

## ಪಡಿ ಮಗುಸ್ನೇಹಿ ಶಾಲಾ ಸೂಚ್ಯಂಕಗಳು

ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಆಧಾರದಲ್ಲಿ ಮಗುಸ್ನೇಹಿ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸಿದ್ದು ಶಾಲಾಭಿವೃದ್ಧಿಯನ್ನು ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ರೂಪಿಸಲಾಗಿದೆ. ಈ ಸೂಚ್ಯಂಕಗಳ ಪ್ರಕಾರ ಶಾಲೆಯ ಪ್ರಸ್ತುತ ಸ್ಥಿತಿಯನ್ನು ಅಳತೆ ಮಾಡಲು ಉಪಕಾರಿಯಾಗಬಲ್ಲದು. ಅಲ್ಲದೇ ಪ್ರತಿ 6 ತಿಂಗಳಿಗೊಮ್ಮೆ ಈ ಸೂಚ್ಯಂಕಗಳನ್ನು ಮೌಲ್ಯಮಾಪನ ಮಾಡಬಹುದು ಮತ್ತು ಸೂಚ್ಯಂಕಗಳನ್ನು ಸಾಧಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.

| ಕ್ರಮ ಸಂಖ್ಯೆ | ಸೂಚ್ಯಂಕ | ಉತ್ತಮ (4/2) | ತೃಪ್ತಿಕರ (1) | ಅತೃಪ್ತಿಕರ (0) |
|---|---|---|---|---|
| 1 | ಎಸ್.ಡಿ.ಎಮ್.ಸಿಯು ಶಾಲೆಯಲ್ಲಿ ಸರಕಾರದ ಸುತ್ತೋಲೆಯ ಪ್ರಕಾರ ವರ್ಷಕ್ಕೆ ಎರಡು ಬಾರಿ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆಯುವಂತೆ ನೋಡಿಕೊಳ್ಳುತ್ತಾರೆಯೇ?<br>ಸರಕಾರದ ಸುತ್ತೋಲೆಯ ಎಲ್ಲಾ ನಿಯಮಗಳನ್ನು ಅನುಸರಿಸಿ ಕಾರ್ಯಕ್ರಮ ನಡೆಸಿರುವುದು.–4<br>ಕೆಲವೊಂದು ನಿಯಮಗಳನ್ನು ಮಾತ್ರವೇ ಪಾಲಿಸಿರುವುದು. –1 | 4 | 1 | 0 |

| | | | | |
|---|---|---|---|---|
| | ಸುತ್ತೋಲೆಯ ಪ್ರಕಾರ ಸಮುದಾಯದತ್ತ ಶಾಲೆಯನ್ನು ನಡೆಸದೆ ಇರುವುದು. –0 | | | |
| 2. | ಎಸ್.ಡಿ.ಎಮ್.ಸಿ ಯು ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ಎಲ್ಲಾ ಹೆತ್ತವರು ಭಾಗವಹಿಸುವಂತೆ ನೋಡಿಕೊಳ್ಳುವುದರ ಜೊತೆಗೆ ಅವರ ಅಭಿಪ್ರಾಯ ವ್ಯಕ್ತಪಡಿಸಲು ಪ್ರೋತ್ಸಾಹ ನೀಡುತ್ತದೆಯೇ?<br>ಹೆಚ್ಚಾಗಿ ಎಲ್ಲಾ ಮಕ್ಕಳ ಹೆತ್ತವರು (ಶೇ.75%ಕ್ಕಿಂತಲೂ ಹೆಚ್ಚು) ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ.2<br>ಹೆಚ್ಚಿನ ಹೆತ್ತವರು (ಶೇ.75%ಕ್ಕಿಂತಲೂ ಹೆಚ್ಚು) ಭಾಗವಹಿಸಿದ್ದು, ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿರುವುದಿಲ್ಲ –1<br>ತುಂಬಾ ಕಡಿಮೆ ಮಕ್ಕಳ ಹೆತ್ತವರು (50 ಶೇ ಕ್ಕಿಂತ ಕಡಿಮೆ) ಭಾಗವಹಿಸಿ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿರುವುದಿಲ್ಲ (ಶೇ 50ಕ್ಕಿಂತಲೂ ಕಡಿಮೆ)–0 | 2 | 1 | 0 |
| 3 | ಎಸ್.ಡಿ.ಎಮ್.ಸಿಯು ಸಮುದಾಯದತ್ತ ಶಾಲೆಯಲ್ಲಿ ಹೆತ್ತವರು ಚರ್ಚಿಸಿದ ಸಮಸ್ಯೆಗಳ ಕುರಿತು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ<br>ಎಲ್ಲಾ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ–4<br>ಕೆಲವು ವಿಷಯಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ–1<br>ಯಾವುದೇ ವಿಷಯಗಳ ಬಗ್ಗೆ ಕ್ರಮಕೈಗೊಂಡಿಲ್ಲ–0 | 4 | 1 | 0 |
| 4 | ಎಸ್.ಡಿ.ಎಮ್.ಸಿಯು ಶಾಲಾಭಿವೃದ್ಧಿ ಯೋಜನೆಯನ್ನು ಸಕ್ರಿಯ ಭಾಗವಹಿಸುವಿಕೆಯಿಂದ ರೂಪಿಸಿರುವುದು. | 4 | 1 | 0 |

| | | | | |
|---|---|---|---|---|
| | ಎಲ್ಲಾ ಎಸ್.ಡಿ.ಎಮ್.ಸಿ ಸದಸ್ಯರ ಸಕ್ರೀಯ ಭಾಗವಹಿಸುವಿಕೆಯಿಂದ (ಪಂಚಾಯತ್ ಮತ್ತು ಮಕ್ಕಳ ಪ್ರತಿನಿಧಿಗಳ ಭಾಗವಹಿಸುವಿಕೆಯಿಂದ) ಯೋಜನೆಯನ್ನು ರೂಪಿಸಿರುವುದು –4<br>ಕೆಲವೇ ಎಸ್.ಡಿ.ಎಮ್.ಸಿ. ಸದಸ್ಯರು ಯೋಜನೆಯನ್ನು ರೂಪಿಸಿರುವುದು–1<br>ಯಾವುದೇ ಯೋಜನೆ ಇಲ್ಲದೆ ಇರುವುದು.–0. | | | |
| 5 | ಶಾಲಾಭಿವೃದ್ಧಿ ಯೋಜನೆಯನ್ನು ಪಂಚಾಯತು, ಶಿಕ್ಷಣ ಇಲಾಖೆ ಮತ್ತು ಸಂಬಂಧಿತ ಇಲಾಖೆ/ ಜನಪ್ರತಿನಿಧಿಗಳಿಗೆ ಸಲ್ಲಿಸಲಾಗಿದೆಯೇ?<br>ಯೋಜನೆಯನ್ನು ಸಲ್ಲಿಸಲಾಗಿದ್ದು ಸಕಾರಾತ್ಮಕ ಸ್ಪಂದನೆಯನ್ನು ಪಡೆದಿರುವುದು.–2<br>ಯೋಜನೆಯನ್ನು ಸಲ್ಲಿಸಿರುವುದು ಆದರೆ ಯಾವುದೇ ಸ್ಪಂದನೆಯನ್ನು ಪಡೆಯದೆ ಇರುವುದು–1<br>ಯೋಜನೆಯನ್ನು ಸಲ್ಲಿಸದೇ ಇರುವುದು –0 | 2 | 1 | 0 |
| 6 | ಎಸ್.ಡಿ.ಎಮ್.ಸಿ ತಮ್ಮ ತಿಂಗಳ ಸಭೆಯಲ್ಲಿ ಶಾಲಾಭಿವೃದ್ಧಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತಂತೆ ಚರ್ಚಿಸಲು ಅದನ್ನು ಒಂದು ಅಜೆಂಡವಾಗಿ ಪರಿಗಣಿಸಿದ್ದಾರೆಯೇ?<br>ಎಲ್ಲಾ ತಿಂಗಳ ಸಭೆಗಳಲ್ಲಿ ಪರಿಣಾಮಕಾರಿಯಾಗಿ ಚರ್ಚಿಸಿರುವುದು ಮತ್ತು ಅನುಷ್ಠಾನಕ್ಕಾಗಿ ಕಾರ್ಯತಂತ್ರವನ್ನು ರೂಪಿಸುವುದರೊಂದಿಗೆ ಅನುಸರಣೆ ಮಾಡುವುದು–2<br>ಕಳೆದ 6 ತಿಂಗಳಲ್ಲಿ 1 ಅಥವಾ 2 ತಿಂಗಳ ಸಭೆಗಳಲ್ಲಿ ಭಾಗಶಃ ಚರ್ಚೆ ಮತ್ತು ಅನುಷ್ಠಾನ–1<br>ಯಾವುದೇ ಸಭೆಗಳಲ್ಲಿ ಚರ್ಚಿಸದೆ ಇರುವುದು–0 | 2 | 1 | 0 |

| | | | | |
|---|---|---|---|---|
| 7 | ಎಸ್.ಡಿ.ಎಮ್.ಸಿ.ಯು ಎಲ್ಲಾ ಮಕ್ಕಳು ಶಾಲೆಯಲ್ಲಿ ದಾಖಲಾಗುವಂತೆ ಮೇಲ್ವಿಚಾರಣೆ ಮಾಡುತ್ತಿದೆಯೇ ಮತ್ತು ಅದಕ್ಕಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದೆಯೇ?<br>ಎಸ್.ಡಿ.ಎಮ್.ಸಿ.ಯು ಶಾಲೆಗೆ ಗೈರು ಹಾಜರಾಗುವ ಮಕ್ಕಳ ಹಾಜರಾತಿಯನ್ನು ಪರಿಶೀಲಿಸುತ್ತಾರೆ ಮತ್ತು ಅಂತಹ ಮಕ್ಕಳು ಕಂಡು ಬಂದರೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಆ ಮಕ್ಕಳನ್ನು ಕೂಡಲೆ ಮರಳಿ ಶಾಲೆಗೆ ಸೇರಿಸುತ್ತಾರೆ–2<br>ಎಸ್.ಡಿ.ಎಮ್.ಸಿ.ಯು ನಿರಂತರ ಗೈರು ಹಾಜರಾಗುವ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರಲು ಸಾಧಾರಣ ಪ್ರಯತ್ನವನ್ನು ಮಾಡಿರುತ್ತಾರೆ–1<br>ಎಸ್.ಡಿ.ಎಮ್.ಸಿ.ಯು ನಿರಂತರ ಗೈರು ಹಾಜರಾಗುವ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರಲು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ–0 | 2 | 1 | 0 |
| 8 | ಎಸ್.ಡಿ.ಎಮ್.ಸಿ.ಯು ಶಾಲೆಗಳಲ್ಲಿ ವಿವಿಧ ಕುಂದುಕೊರತೆ ನಿವಾರಣಾ ವ್ಯವಸ್ಥೆಗಳನ್ನು ಅನುಷ್ಠಾನ ಮಾಡಲಾಗಿದೆಯೇ? (ನೋಡಿ ಸಬ್‌ಚೆಕ್‌ಲಿಸ್ಟ್)<br>ಬಂದಂತಹ ಎಲ್ಲಾ ಸಮಸ್ಯೆಗಳನ್ನು ಪರಿಗಣಿಸಿ ಅದರ ಕುರಿತಂತೆ ಅರಿವು ಮೂಡಿಸುವುದು.–4<br>ಬಂದಂತಹ ಎಲ್ಲಾ ಸಮಸ್ಯೆಗಳನ್ನು ಪರಿಗಣಿಸಿ ಅದರ ಕುರಿತಂತೆ ಯಾವುದೇ ಅರಿವನ್ನು ಮೂಡಿಸದೆ ಇರುವುದು.–1<br>ಯಾವುದೇ ಕೆಲಸವನ್ನು ಮಾಡದೆ ಇರುವುದು–0 | 4 | 1 | 0 |
| 9 | ಎಸ್.ಡಿ.ಎಮ್.ಸಿಯು ಶಾಲೆಯ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ನಿರ್ವಹಣಾ | 2 | 1 | 0 |

| | | | | |
|---|---|---|---|---|
| | ಕೆಲಸದ (ಮಗು ಸ್ನೇಹಿ ದೃಷ್ಟಿಕೋನದಲ್ಲಿ) ಮೇಲ್ವಿಚಾರಣೆಯನ್ನು ಮಾಡುತ್ತಿದೆಯೇ? ನಿಯಮಿತವಾಗಿ ಮತ್ತು ಯಾವಾಗಲೂ ಮಗು ಸ್ನೇಹಿ ದೃಷ್ಟಿಕೋನದಿಂದ–ಕನಿಷ್ಟ ತಿಂಗಳಿಗೊಮ್ಮೆ.–2<br>ಕೆಲವೊಮ್ಮೆ ಮಾತ್ರ ಮಗು ಸ್ನೇಹಿ ದೃಷ್ಟಿಕೋನದಲ್ಲಿ– 3 ತಿಂಗಳಿಗೊಮ್ಮೆ.–1<br>ಯಾವುದೇ ಮೇಲ್ವಿಚಾರಣೆ ಇಲ್ಲ/ ಮಗು ಸ್ನೇಹಿ ದೃಷ್ಟಿಕೋನವನ್ನು ಪರಿಗಣನೆಗೆ ತೆಗೆದುಕೊಳ್ಳದೆ–0 | | | |
| 10 | ಎಸ್.ಡಿ.ಎಮ್.ಸಿಯೂ ಶಾಲೆಯಲ್ಲಿ ಮಕ್ಕಳ ಅರೋಗ್ಯ ತಪಾಸಣೆ ನಡೆಸುವಂತೆ ಖಾತ್ರಿ ಪಡಿಸುತ್ತದೆಯೇ?<br>ಮಕ್ಕಳ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆಗೆ ಮಾರ್ಗದರ್ಶನ ನೀಡುತ್ತಾರೆ–2<br>ವರ್ಷಕ್ಕೆ ಎರಡು ಭಾರಿ ಆರೋಗ್ಯ ತಪಾಸಣೆ ಮಾಡುವುದರ ಜೊತೆಗೆ ದಾಖಲೆಗಳ ನಿರ್ವಹಣೆ ಮಾಡುತ್ತಾರೆ–1.<br>ವರ್ಷಕ್ಕೆ ಒಂದು ಸಲ ಮಾತ್ರ, ಅರೋಗ್ಯ ತಪಾಸಣೆಯನ್ನು ನಡೆಸಿರುವುದು ಮತ್ತು ದಾಖಲೆಗಳ ನಿರ್ವಹಣೆಯನ್ನು ಮಾಡದೇ ಇರುವುದು.–0 | 2 | 1 | 0 |
| 11 | ಎಸ್.ಡಿ.ಎಮ್.ಸಿ ಯ ಮಾಸಿಕ ಸಭೆಯಲ್ಲಿ ಮಕ್ಕಳ ಪ್ರತಿನಿಧಿಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಮತ್ತು ನಿರ್ಣಯ ತೆಗೆದುಕೊಳ್ಳುವುದರಲ್ಲಿ ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಾರೆಯೇ?<br>ಪ್ರತಿ ಬಾರಿಯೂ ಮತ್ತು ಪರಿಣಾಮಕಾರಿಯಾಗಿ–2<br>ಕೆಲವೊಮ್ಮೆ ಮಾತ್ರ–1 ಯಾವತ್ತೂ ಇಲ್ಲ–0 | 2 | 1 | 0 |

| | | | | |
|---|---|---|---|---|
| 12 | ಶಾಲೆಯಲ್ಲಿ ಸ್ವಚ್ಛತೆಯ ವ್ಯವಸ್ಥೆಗಳು ಪ್ರತ್ಯೇಕ ಸಿಬ್ಬಂದಿಯ ನೇಮಕ/ಮಕ್ಕಳನ್ನು ಸ್ವಚ್ಛತಾ ಕಾರ್ಯಕ್ಕೆ ಬಳಸದೆ ಇರುವುದು ವಿಶೇಷವಾಗಿ ಶೌಚಾಲಯ–2<br>ಪ್ರತ್ಯೇಕ ಸಿಬ್ಬಂದಿಯ ನೇಮಕ ಆದರೆ ಮಕ್ಕಳನ್ನೂ ಸ್ವಚ್ಛತೆ ಕಾರ್ಯದಲ್ಲಿ ತೊಡಗಿಸಿರುವುದು–1<br>ಯಾವುದೇ ಸಿಬ್ಬಂದಿಯನ್ನು ನೇಮಕ ಮಾಡದೆ ಇರುವುದು ಮತ್ತು ಮಕ್ಕಳ ಸ್ವಚ್ಛತೆ ಕಾರ್ಯವನ್ನು ಮಾಡುವುದು–0 | 2 | 1 | 0 |
| 13 | ಮಕ್ಕಳ ಮಂತ್ರಿಮಂಡಲ/ ಸಂಸತ್ತಿನ ಪರಿಣಾಮಕಾರಿ ನಿರ್ವಹಣೆ.<br>ಮಕ್ಕಳು ಸ್ವತಂತ್ರವಾಗಿ ಮಾತಾಡುವಷ್ಟು ಸಬಲರಾಗಿ ನಿರ್ವಹಿಸುತ್ತಾರೆ.–2<br>ಮಕ್ಕಳ ಪ್ರತಿಕ್ರಿಯೆಯನ್ನು ನಿಯಂತ್ರಿಸಲಾಗಿ/ ಮಾರ್ಗದರ್ಶನದ ಮೂಲಕ ನಿರ್ವಹಣೆ–1<br>ಮಕ್ಕಳಿಗೆ ಮಾತನಾಡಲು ಅವಕಾಶ ನೀಡದೆ ಇರುವುದು.–0 | 2 | 1 | 0 |
| 14 | ಎಸ್.ಡಿ.ಎಮ್.ಸಿ.ಯು ಮಧ್ಯಾಹ್ನದ ಬಿಸಿಯೂಟ, ಅಹಾರ ಮತ್ತು ಕಿರಾಣಿ ವಸ್ತುಗಳ ಮೇಲ್ವಿಚಾರಣೆ ನಡೆಸುತ್ತದೆಯೇ ಅದರಲ್ಲೂ ಸ್ವಚ್ಛತೆ ಮತ್ತು ಗುಣಮಟ್ಟ.<br>ನಿರಂತರ ಮೇಲ್ವಿಚಾರಣೆ ಮತ್ತು ಪ್ರತಿ ದಿನವೂ ಮಕ್ಕಳಿಗೆ ನೀಡುವ ಬಿಸಿಯೂಟದ ಗುಣಮಟ್ಟ ಮತ್ತು ಪ್ರಮಾಣವನ್ನು ಖಾತ್ರಿಪಡಿಸುತ್ತದೆಯೇ? (ಸಾಮಗ್ರಿಗಳು, ಸ್ವಚ್ಛತೆ ಮತ್ತು ನೈರ್ಮಲ್ಯ)–2<br>ಕೆಲವೊಮ್ಮೆ ಮಾತ್ರ ಮೇಲ್ವಿಚಾರಣೆ ಮತ್ತು ಕೆಲವು ಗುಣಮಟ್ಟ ಮತ್ತು ಪ್ರಮಾಣಕ್ಕೆ ಸಂಬಂಧಿಸಿದ ಸಮಸ್ಯೆಗಳು ಇವೆ.–1 | 2 | 1 | 0 |

| | | | | |
|---|---|---|---|---|
| | ಯಾವುದೇ ಮೇಲ್ವಿಚಾರಣೆ ಇಲ್ಲದೇ ಗುಣಮಟ್ಟ ಮತ್ತು ಪ್ರಮಾಣಕ್ಕೆ ಸಂಬಂಧಿಸಿದ ಸಾಕಷ್ಟು ಸಮಸ್ಯೆಗಳು.–0 | | | |
| 15 | ಎಸ್.ಡಿ.ಎಮ್.ಸಿ.ಯು ಮಕ್ಕಳ ಕಲಿಕಾ ಪ್ರಗತಿಯ ಮೌಲ್ಯಮಾಪನ ನಡೆಸುತ್ತದೆಯೇ?<br>3 ತಿಂಗಳಿಗೊಮ್ಮೆ – 2<br>6 ತಿಂಗಳಿಗೊಮ್ಮೆ – 1<br>ಯಾವತ್ತೂ ಇಲ್ಲ – 0 | 2 | 1 | 0 |
| 16 | ಮಕ್ಕಳ ಹಕ್ಕುಗಳ ಕ್ಲಬ್‌ಗಳು ಸಕ್ರೀಯವಾಗಿದೆಯೇ (ಅದರ ಚಟುವಟಿಕೆಗಳು ನಿರಂತರ ಸಭೆ, ಸಲಹಾ ಪೆಟ್ಟಿಗೆ ಇತ್ಯರ್ಥ, ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಟಾನ, ಮಕ್ಕಳ ಹಕ್ಕುಗಳ ಸಮಸ್ಯೆಯನ್ನು ನಿರ್ವಹಿಸುವುದು)<br>ಸಕ್ರಿಯವಾಗಿ, ನಿಯಮಿತವಾಗಿ ಚಟುವಟಿಕೆಗಳ ಆಯೋಜನೆ ಕನಿಷ್ಟ ತಿಂಗಳಿಗೆ ಒಂದು ಕಾರ್ಯಕ್ರಮ–4<br>ಮಕ್ಕಳ ಕ್ಲಬ್ ಸಭೆಗಳನ್ನು ನಡೆಸುತ್ತದೆ ಆದರೆ ಯಾವುದೇ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದಿಲ್ಲ.–1<br>ನಿಷ್ಕ್ರೀಯವಾಗಿದೆ– ಯಾವುದೇ ಸಭೆ/ ಚಟುವಟಿಕೆಗಳು ಇಲ್ಲ.–0 | 4 | 1 | 0 |
| 17 | ಮಕ್ಕಳ ಹಕ್ಕುಗಳ ಕ್ಲಬ್‌ಗಳಲ್ಲಿ ಹೆಣ್ಣು ಮಕ್ಕಳ ಭಾಗವಹಿಸುವಿಕೆ.<br>ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಮತ್ತು ಕಾರ್ಯಚಟುವಟಿಕೆಗಳಲ್ಲಿ ಮಕ್ಕಳು ಸಮಾನವಾಗಿ ಪಾಲ್ಗೊಳ್ಳುತ್ತಾರೆ–2<br>ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಮತ್ತು ಕಾರ್ಯಚಟುವಟಿಕೆಗಳಲ್ಲಿ ಮಕ್ಕಳು ಸಮಾನವಾಗಿ ಪಾಲ್ಗೊಳ್ಳುವುದಿಲ್ಲ–1<br>ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಮತ್ತು | 2 | 1 | 0 |


| | | | | |
|---|---|---|---|---|
| | ಕಾರ್ಯಚಟುವಟಿಕೆಗಳಲ್ಲಿ ಹೆಣ್ಣು ಮಕ್ಕಳ ಯಾವುದೇ ಪಾತ್ರವಿಲ್ಲ–0 | | | |
| 18 | ಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಗಳು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ /ಹೆಣ್ಣು ಮಕ್ಕಳಿಗೆ ಉಪಯೋಗಿಸಲು ಅನುಕೂಲವಾಗುವಂತಿದೆಯೇ?<br>ಎಲ್ಲಾ ವಿಶೇಷ ಅಗತ್ಯಗಳನ್ನು ಪೂರೈಸಲಾಗಿದೆ/ ಎಲ್ಲಾ ಸೌಲಭ್ಯಗಳು ಈ ಮಕ್ಕಳಿಗೆ ಉಪಯೋಗಿಸಲು ಅನೂಕೂಲಕರ ಮತ್ತು ಯೋಗ್ಯವಾಗಿದೆ–4<br>ಮಕ್ಕಳಿಗೆ ಲಭ್ಯವಿದೆ ಆದರೆ ಉಪಯೋಗಕ್ಕೆ ಅನುಕೂಲಕರವಾಗಿಲ್ಲ–1<br>ಯಾವುದೇ ಸೌಲಭ್ಯಗಳು ಇಲ್ಲ –0 | 4 | 1 | 0 |
| 19 | ಎಸ್.ಡಿ.ಎಮ್.ಸಿ.ಯು ಶಾಲಾ ಮಕ್ಕಳಿಗೆ ಸರಕಾರದಿಂದ ಸಿಗುವ ವಿವಿಧ ಸೌಲಭ್ಯ ಮತ್ತು ಸವಲತ್ತುಗಳು ಲಭ್ಯವಾಗುವಂತೆ ನೋಡಿಕೊಳ್ಳುತ್ತದೆಯೇ?<br>ಶಾಲಾ ಮಕ್ಕಳಿಗೆ ಮತ್ತು ಪೋಷಕರಿಗೆ ಅರಿವು ಮೂಡಿಸುವುದರ ಜೊತೆಗೆ ಸೌಲಭ್ಯಗಳು ಲಭ್ಯವಾಗುವಂತೆ ನೋಡಿಕೊಳ್ಳುತ್ತಾರೆ.–2<br>ಕೇವಲ ಅರಿವು ಮಾತ್ರ ಮೂಡಿಸುತ್ತಾರೆ. –1<br>ಅರಿವು ಮೂಡಿಸುವುದಿಲ್ಲ/ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ–0 | 2 | 1 | 0 |
| 20 | ಎಸ್.ಡಿ.ಎಮ್.ಸಿ ಮಗುಸ್ನೇಹಿ ಶಾಲೆಯ ಸೂಚ್ಯಂಕವನ್ನು ಮೇಲ್ವಿಚಾರಣೆ ಪರಿಣಾಮಕಾರಿಯಾಗಿ ಮಾಡುತ್ತಿದೆಯೇ.<br>ಎಲ್ಲಾ ಸೂಚ್ಯಂಕಗಳನ್ನು ವಸ್ತುನಿಷ್ಟವಾಗಿ ಚರ್ಚಿಸಿದ್ದಾರೆ.–2<br>ಕೆಲವು ಸೂಚ್ಯಂಕಗಳನ್ನು ಮಾತ್ರ ಅಥವಾ ಹೆಚ್ಚಿನ ಸದಸ್ಯರು ಸಮರ್ಪಕ ಚರ್ಚೆ ಇಲ್ಲದೆ–1 | 2 | 1 | 0 |

ಸೂಚ್ಯಂಕವನ್ನು ಬಳಸದೆ ಇರುವುದು ಅಥವಾ ಪರಿಣಾಮಕಾರಿಯಾಗಿಲ್ಲದೆ ಕೆಲವೇ ಸದಸ್ಯರು ಭಾಗವಹಿಸಿದ್ದರು–0

| ಮೌಲ್ಯಮಾಪನದ ದಿನಾಂಕ: | | | |
|---|---|---|---|
| ಗರಿಷ್ಠ ಸಾಧ್ಯತ ಅಂಕ | | | |
| ಮೌಲ್ಯಮಾಪನದಲ್ಲಿ ಗಳಿಸಿದ ಒಟ್ಟು ಅಂಕ = | | | |
| ಕ್ರಮ ಸಂಖ್ಯೆ | ಗ್ರೇಡ್ | ಅಂಕ | ಮೌಲ್ಯಮಾಪನದ ಪ್ರಕಾರ ಗಳಿಸಿದ ಸ್ಥಾನ |
| 1 | ಉತ್ತಮ | 35 ರಿಂದ 52 | |
| 2 | ತೃಪ್ತಿಕರ | 17 ರಿಂದ 34 | |
| 3 | ಅತೃಪ್ತಿಕರ | 0 ರಿಂದ 17 | |

## ಮಗುಸ್ನೇಹಿ ಪಂಚಾಯತು

ಮಗುಸ್ನೇಹಿ ಪಂಚಾಯತು ಎಂದರೇನು?




ಮಗುಸ್ನೇಹಿ ಪಂಚಾಯತು ಪರಿಕಲ್ಪನೆಯು ಮಾದರಿ ಪರಿಕಲ್ಪನೆಯಾಗಿದ್ದು ಪಂಚಾಯತು ವ್ಯಾಪ್ತಿಯಲ್ಲಿ ಯಾವುದೇ ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ಮತ್ತು ಎಲ್ಲಾ ಮಕ್ಕಳು ಶಾಲೆಯಲ್ಲಿ ದಾಖಲಾಗುವಂತೆ ನೋಡಿ ಕೊಳ್ಳುವುದರೊಂದಿಗೆ ಸಾರ್ವತ್ರಿಕ ಶಿಕ್ಷಣದೊಂದಿಗೆ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸುವುದು. ಮಗುಸ್ನೇಹಿ ಪಂಚಾಯತು ಪರಿಕಲ್ಪನೆಯ ಮೂಲಕ ಬಾಲಕಾರ್ಮಿಕ ಮುಕ್ತ ಗ್ರಾಮವನ್ನು ನಿರ್ಮಿಸುವುದರೊಂದಿಗೆ, ಎಲ್ಲಾ ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯ ಮತ್ತು ಮಕ್ಕಳ ಸ್ನೇಹಿ ವಾತವರಣದೊಂದಿಗೆ ಶಿಕ್ಷಣದ ಹಕ್ಕು ದೊರೆಯುವಂತೆ ಮಾಡುವುದು ಮುಖ್ಯ ಉದ್ದೇಶವಾಗಿದೆ. ಮತ್ತು ಪ್ರತಿ ಗ್ರಾಮ

ಪಂಚಾಯತುಗಳಲ್ಲಿ ಶೋಷಣೆ ಮತ್ತು ಬೇಧ–ಭಾವವಿಲ್ಲದೆ ಮಕ್ಕಳು ಬೆಳೆಯುವುದು ಇದರ ಆಶಯವಾಗಿದೆ.

ಶಿಕ್ಷಣ ಹಕ್ಕು ಕಾಯಿದೆಯ ಬಗ್ಗೆ ಅರಿವು ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಸಿದ್ಧಾಂತವನ್ನು ಪ್ರೋತ್ಸಾಹಿಸುವುದು.

ಮಕ್ಕಳ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಈಗಾಗಲೆ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಸಮಿತಿಗಳನ್ನು ಮಕ್ಕಳ ಸ್ನೇಹಿ ವಾತವರಣದೊಳಗೆ ಕಾರ್ಯನಿರ್ವಹಿಸುವಂತೆ ಮಾಡುವುದು.

ಶೋಷಣೆ ರಹಿತ, ದೌರ್ಜನ್ಯ ರಹಿತ, ಮಕ್ಕಳಿಗೆ ಪೂರಕವಾಗಿ ಮನರಂಜನೆಯನ್ನು ಮತ್ತು ಆರೋಗ್ಯ ಸೌಲಭ್ಯವನ್ನು ಪಂಚಾಯತ್ ಸಹಭಾಗಿತ್ವದಲ್ಲಿ ಪೂರೈಸುವುದು.

ಮಕ್ಕಳ ವಾಸ್ತವ ಸ್ಥಿತಿಗಳ ದಾಖಲೆ, ಅಂಕಿ ಆಂಶಗಳು ದೊರೆಯುವಂತೆ ಮಾಡುವುದು.

ಗ್ರಾಮ ಪಂಚಾಯತು ಮಕ್ಕಳ ಧ್ವನಿಗೆ ಮಕ್ಕಳ ಗ್ರಾಮ ಸಭೆಯ ಮೂಲಕ ಗುರುತಿಸಬೇಕು ಮತ್ತು ಬೆಂಬಲಿಸಬೇಕು.

ಮಗುಸ್ನೇಹಿ ಪಂಚಾಯತಿನ ಪ್ರಮುಖ ಆಶಯಗಳು.

## ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ

**ಮಕ್ಕಳ ಹಕ್ಕುಗಳು ಸಂರಕ್ಷಣೆ:**

ಪಂಚಾಯತು ಮಟ್ಟದಲ್ಲಿ ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಗಳು ಮತ್ತು ನೀತಿಗಳ ಕುರಿತಂತೆ.




ಶಿಕ್ಷಣ ಹಕ್ಕು ಕಾಯಿದೆಯ (ಉಚಿತ ಮತ್ತು ಕಡ್ಡಾಯ) ಸ್ಥಳೀಯ ಮಟ್ಟದಲ್ಲಿ ಪರಿಣಾಮ ಕಾರಿ ಅನುಷ್ಠಾನ.

ಗ್ರಾಮ ಪಂಚಾಯತು ಮಕ್ಕಳ ಗ್ರಾಮ ಸಭೆಯ ಮೂಲಕ ಮಕ್ಕಳ ಧ್ವನಿಯನ್ನು ಗುರುತಿಸಬೇಕು.

ಪಂಚಾಯತು ವ್ಯಾಪ್ತಿಯಲ್ಲಿ ಮಕ್ಕಳ ಮೇಲೆ ಯಾವುದೇ ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸೆ, ದೌರ್ಜನ್ಯ, ಕಿರುಕುಳ ಹಾಗು ತಾರತಮ್ಯ ಆಗದಂತೆ ನೋಡಿಕೊಳ್ಳುವುದು.

**ಮಗುಸ್ನೇಹಿ ಪಂಚಾಯತು ಹೇಗೆ:**



ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿಯು ಪಂಚಾಯತು ರಾಜ್ ಸಂಸ್ಥೆಯ 29 ಪ್ರಮುಖ ಕಾರ್ಯಗಳಲ್ಲಿ ಒಂದು. ಗ್ರಾಮ ಪಂಚಾಯತು ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಹುಟ್ಟುವ ಎಲ್ಲಾ ಮಗು ಆರೋಗ್ಯಯುತವಾಗಿ ಹುಟ್ಟುವಂತೆ ಮತ್ತು ಬೆಳೆಯುವಂತೆ ನೋಡಿಕೊಳ್ಳುವುದರ ಜೊತೆಗೆ ಉತ್ತಮ ಶಿಕ್ಷಣ, ಮಕ್ಕಳ ಅವಶ್ಯಕತೆ ಮತ್ತು ಮಕ್ಕಳ ಸಮಸ್ಯೆಗಳನ್ನು ಗುರುತಿಸಿ ಅವುಗಳ ಕುರಿತು ಅರಿವು ಮೂಡಿಸುವುದರೊಂದಿಗೆ ವಿವಿಧ ಯೋಜನೆಗಳನ್ನು ರೂಪಿಸುವಾಗ ಮತ್ತು ಫಲಾನುಭಾವಿಗಳ ಆಯ್ಕೆ ಮಾಡುವಾಗ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬಹುದು.

ಅಲ್ಲದೆ ಅಂಗನವಾಡಿ, ಶಾಲೆಗಳ ಜೊತೆಗೆ ಉತ್ತಮ ಬಾಂಧವ್ಯದೊಂದಿಗೆ ಅವರ ಅಬಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣ ಮಾಡುವುದರ ಜೊತೆಗೆ ತಮ್ಮ ಸ್ವಂತ ಹಣಕಾಸಿನ ಮೂಲಕ ಅಥವಾ ಸಂಪನ್ಮೂಲವನ್ನು ಕ್ರೋಢಿಕರಿಸಿ ವಿನಿಯೋಗಿಸುವ ಮೂಲಕ ಕೂಡಾ ಮಕ್ಕಳ ಬದುಕಿನ ಗುಣಮಟ್ಟವನ್ನು ಹೆಚ್ಚಿಸಬಹುದು.

ಪಂಚಾಯತು ಮಟ್ಟದಲ್ಲಿ ಮಕ್ಕಳ ಕುರಿತ ಸಮಸ್ಯೆಗಳನ್ನು ಪರಿಹರಿಸಲು ಸ್ಟಾಂಡಿಂಗ್ ಕಮಿಟಿಗಳಿದ್ದು ಅವುಗಳು ಕೂಡಾ ಪರಿಣಾಮಕಾರಿ ಸಮಸ್ಯೆಗಳ ಕುರಿತು ಚರ್ಚೆ, ಪರಿಹಾರ ಮಾಡಲು ಸೂಕ್ತ ಮಾರ್ಗೋಪಾಯಗಳನ್ನು ಕಂಡುಕೊಳ್ಳಬಹುದು.

ಪಂಚಾಯತು ವಿವಿಧ ಇಲಾಖೆಗಳ ಜೊತೆ ಮತ್ತು ಸಂಸ್ಥೆಗಳ ಜೊತೆಗೆ ಮತ್ತು ಗ್ರಾಮ ಮಟ್ಟದ ಕಾರ್ಯಕರ್ತರೊಂದಿಗೆ ಅಂದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಮುಖ್ಯವಾಗಿ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು. ಎ.ಎನ್.ಎಮ್ ಮತ್ತು ಶಿಕ್ಷಕರೊಂದಿಗೆ ಮಕ್ಕಳ ಆರೈಕೆ ಮತ್ತು ಅಬಿವೃದ್ಧಿಗೆ ಕೈಜೋಡಿಸಬಹುದು.

ಅಲ್ಲದೆ ಪಂಚಾಯತಿನಲ್ಲಿ ಹಲವು ಉಪಸಮಿತಿಗಳನ್ನು ರಚಿಸುವ ಮೂಲಕ ಮಕ್ಕಳ ಬದುಕಿನ, ವಿಕಾಸ, ರಕ್ಷಣೆ ಮತ್ತು ಭಾಗವಹಿಸುವ ಹಕ್ಕನ್ನು ರಕ್ಷಿಸಬಹುದು.

1. ಅಂಗನವಾಡಿ ಹಂತದ ಮೇಲ್ವಿಚಾರಣೆ (Anganavadi Level Monitoring And Support Committee- ALMSC) ಇದು ICDS ಯೋಜನೆಯ ಮೂಲಕ ಸಮಿತಿಯನ್ನು ರಚಿಸುವ ಮೂಲಕ ಅಂಗನವಾಡಿಯ ಮೇಲ್ವಿಚಾರಣೆಗಾಗಿ ರೂಪಿಸಲಾಗಿದೆ. ಪಂಚಾಯತಿನ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

2. Village Health And Sanitation And Nutrition Committee-VHSNC: NRHM ಯೋಜನೆಯ ಮೂಲಕ ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿ ಗುಣಮಟ್ಟದ ಆರೋಗ್ಯ ಸೇವೆಯನ್ನು ದೊರಕುವಂತೆ ನೋಡಿಕೊಳ್ಳುವ ಜವಾಬ್ದಾರಿಯು ಈ ಸಮಿತಿಯದ್ದಾಗಿದೆ. ಆಶಾ ಕಾರ್ಯಕರ್ತೆಯು ಇದರ ಸದಸ್ಯ ಕಾರ್ಯಕರ್ತ ರಾಗಿರುತ್ತಾರೆ. ಈ ಸಮಿತಿಯು ಪಂಚಾಯತಿನ ಉಪ ಸಮಿತಿಯಾಗಿದ್ದು ಇದರ ಕಾರ್ಯವೈಖರಿ ಮೇಲ್ವಿಚಾರಾಣೆಯು ಪಂಚಾಯತಿನ ಜವಬ್ದಾರಿಯಾಗಿದೆ.



3. ಗ್ರಾಮಮಟ್ಟದ ಮಕ್ಕಳ ರಕ್ಷಣಾ ಸಮಿತಿ (VCPC): ಮಕ್ಕಳ ಸಮಗ್ರ ರಕ್ಷಣಾ ಯೋಜನೆಯಲ್ಲಿ ಈ ಸಮಿತಿಯು ಪಂಚಾಯತು ಮಟ್ಟದಲ್ಲಿ ರಚನೆಯಾಗಬೇಕಿದ್ದು ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಹೊಣೆಗಾರಿಕೆ ಈ ಸಮಿತಿಯದ್ದಾಗಿದೆ.

4. ಎಸ್.ಡಿ.ಎಮ್.ಸಿ.: ಶಾಲೆಗಳ ಅಭಿವೃದ್ಧಿಗಾಗಿ ರಚನೆಯಾಗಬೇಕಾದ ಸಮಿತಿಯು ಪ್ರತಿ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿರಬೇಕು. ಸರ್ವ ಶಿಕ್ಷಾ ಅಭಿಯಾನ ಯೋಜನೆ ಮತ್ತು ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನದ ಜವಾಬ್ದಾರಿ ಈ ಸಮಿತಿಯದ್ದಾಗಿದೆ. ಪಂಚಾಯತು ಇದರ ಮೇಲ್ವಿಚಾರಣೆ ಮಾಡಬಹುದು.

# ಗ್ರಾಮ ಪಂಚಾಯತು ಮತ್ತು ಅಂಗನವಾಡಿ

1. ಗ್ರಾಮ ಪಂಚಾಯತು ಅಂಗನವಾಡಿಯ ಗುಣಮಟ್ಟದ ಸೇವೆಯನ್ನು ಹೆಚ್ಚಿಸಲು ಸಾಕಷ್ಟು ಕ್ರಮ ಕೈಗೊಳ್ಳಬಹುದು. ಅಂಗನವಾಡಿ ಕಾರ್ಯಕರ್ತರು ಸಮರ್ಪಕವಾದ ಪಾತ್ರವನ್ನು ನಿರ್ವಹಿಸಲು ಸೂಕ್ತ ಸಹಕಾರವನ್ನು ನೀಡಬಹುದು.




2. ಸಮರ್ಪಕ ಸಂಖ್ಯೆಯ ಅಂಗನವಾಡಿಗಳು ಇರುವಂತೆ ಖಾತ್ರಿ ಪಡಿಸುವುದು ಮತ್ತು ಜನಸಮುದಾಯಕ್ಕೆ ಲಭ್ಯವಾಗುವ ಸ್ಥಳದಲ್ಲಿ ಇರುವಂತೆ ನೋಡಿಕೊಳ್ಳುವುದು.





3. ಗುಣಮಟ್ಟದ ಮೂಲಭೂತ ಸೌಲಭ್ಯ ಮತ್ತು ತರಬೇತಿ ಪಡೆದ ಅಂಗನವಾಡಿ ಕಾರ್ಯಕರ್ತರು ಇರುವಂತೆ ನೋಡಿಕೊಳ್ಳುವುದು.

4. ಸಾಕಷ್ಟು ಸೌಲಭ್ಯಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು ಅದರಲ್ಲೂ ಗುಣಮಟ್ಟದ ಪೌಷ್ಠಿಕಾಂಶಯುಕ್ತವಾದ ಆಹಾರ ಸರಿಯಾದ ಸಂದರ್ಭದಲ್ಲಿ ದೊರೆಯುವಂತೆ ಖಾತ್ರಿ ಪಡಿಸುವುದು.



5. ಸಮರ್ಪಕವಾದ ಆಟದ ಸಮಾನು ಮತ್ತು ತರಬೇತಿ ಪರಿಕರಗಳು ಪೂರೈಕೆ ಹಾಗೂ ಮಕ್ಕಳಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು.

6. ಹೆಣ್ಣು ಮಕ್ಕಳ ಮತ್ತು ದುರ್ಬಲ ವರ್ಗದ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಖಾತ್ರಿ ಪಡಿಸುವುದು ಭಿನ್ನ ಸಾಮಾರ್ಥ್ಯದ ಮಕ್ಕಳಿಗೆ ವಿಶೇಷ ಸವಲತ್ತು ದೊರೆಯುವಂತೆ ಹಾಗೂ ಜಾತಿ, ಲಿಂಗ, ಧರ್ಮದ ಆಧಾರದಲ್ಲಿ ತಾರತಮ್ಯವಾಗದಂತೆ ನೋಡಿ ಕೊಳ್ಳುವುದು.

7. ನಿರಂತರ ಮೇಲ್ವಿಚಾರಣೆ ಅಂಗನವಾಡಿಯು ಸರಿಯಾದ ಸಮಯದಲ್ಲಿ ತೆರೆಯುವುದು ಮತ್ತು ನಿಗದಿಪಡಿಸಿದ ಸಮಯಾವದಿಯಷ್ಟು ತೆರೆದಿರುವಂತೆ ಖಾತ್ರಿಪಡಿಸುವುದು.



8. ಜನಪ್ರತಿನಿಧಿಗಳು ಅಂಗನವಾಡಿಗೆ ಭೇಟಿ ನೀಡಿ ಸಮುದಾಯದ ಜೊತೆ ಅಂಗನವಾಡಿಯ ಕಾರ್ಯವೈಖರಿಯ ಬಗ್ಗೆ ಚರ್ಚಿಸಬಹುದು.

## ಗ್ರಾಮ ಪಂಚಾಯತು ಮತ್ತು ಮಕ್ಕಳ ಬದುಕು

1. ಗರ್ಭಿಣಿಯರ ನೋಂದಣಿ, ಮಕ್ಕಳ ಜನನ ಮತ್ತು ಮರಣ ದಾಖಲಾತಿ: ಪ್ರತಿ ಉಪಕೇಂದ್ರ ಮತ್ತು ಅಂಗನವಾಡಿ ವಲಯದಲ್ಲಿ ಗರ್ಭಿಣಿಯರ ದಾಖಲಾತಿಯು ಪ್ರಸವ ಪೂರ್ವ ತಪಾಸಣೆ, ರೋಗನಿರೋಧಕ ಲಸಿಕೆ ಮತ್ತು ಪೂರಕ ಪೌಷ್ಟಿಕಾಂಶ ಯುಕ್ತ ಆಹಾರವನ್ನು ದೊರಕಿಸಲು ಈ ನೊಂದಣಿ ಸಹಕಾರಿ ಅಲ್ಲದೆ ಶಿಶು ಮರಣ ಮತ್ತು ಜನನದ ದಾಖಲೆಯನ್ನು ಮೇಲ್ವಿಚಾರಣೆ ಮಾಡಲು ಸಹಕಾರಿ. ಜನನ ಮತ್ತು ಮರಣ ಪ್ರಮಾಣ ಪತ್ರವನ್ನು 21 ದಿನದೊಳಗೆ ನೀಡುವುದು ಪಂಚಾಯತಿನ ಜವಾಬ್ದಾರಿ.



ಮಕ್ಕಳ ಈ ದಾಖಲಾತಿಯು ಬಾಲ್ಯ ವಿವಾಹ ಮತ್ತು ಹೆಣ್ಣುಶಿಶು ಹತ್ಯೆಯ ಕುರಿತಂತೆ ಪಂಚಾಯತು ಸೂಕ್ತ ದಾಖಲಾತಿಯನ್ನು ಹೊಂದುವಂತೆ ಮಾಡುತ್ತದೆ.

2. **ರೋಗ ನಿರೋಧಕ ಚುಚ್ಚುಮದ್ದು/ ಲಸಿಕೆ :** ಮಗುವಿನ ಜನನದ ನಂತರ ನಿರ್ದಿಷ್ಟ ಸಮಯಾವಧಿಯಲ್ಲಿ ನೀಡುವ ಲಸಿಕೆಯನ್ನು ಮಕ್ಕಳಿಗೆ ದೊರಕುವಂತೆ ಮಾಡಬೇಕು. ಇದರಿಂದ ಮಕ್ಕಳನ್ನು ವಿವಿಧ ರೋಗಗಳಿಂದ ರಕ್ಷಿಸಬಹುದು.



3. **ಸ್ವಚ್ಛ ಕುಡಿಯುವ ನೀರು ಮತ್ತು ಶೌಚಾಲಯ ಮತ್ತು ನೈರ್ಮಲ್ಯ :** ಸ್ವಚ್ಛ ಕುಡಿಯುವ ನೀರು ಎಲ್ಲರಿಗೂ ದೊರೆಯುವಂತೆ ಮಾಡುವುದರ ಜೊತೆಗೆ ಸ್ವಚ್ಛತೆಯು ಎಲ್ಲಾ ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಇರುವಂತೆ ನೋಡಿಕೊಳ್ಳುವುದು ಅಲ್ಲದೆ ಆರೋಗ್ಯ ಕಾರ್ಯಕರ್ತರು ಗುಣಮಟ್ಟದ ಆರೋಗ್ಯ ಸೇವೆಯನ್ನು ನೀಡುತ್ತಿದ್ದಾರೆಯೇ ಎಂಬುದನ್ನು ಖಾತ್ರಿಪಡಿಸಬೇಕು. ಗ್ರಾಮ ಸಭಾ, ವಾರ್ಡ್ ಸಭಾ ಮಹಿಳಾ ಸಭಾ, ಮಕ್ಕಳ ಸಭಾ, ಮಹಿಳಾ ಸಭೆಗಳಲ್ಲಿ, ಸ್ವಸಹಾಯ ಸಂಘಗಳ ಸಭೆಗಳಲ್ಲಿ ಅರೋಗ್ಯದ ಕುರಿತು ಮಾಹಿತಿ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು. ಹದಿಹರೆಯದ ಮಕ್ಕಳಿಗೆ ಕಿಶೋರ/ ಕಿಶೋರಿ ದಿವಸವನ್ನು ಆಚರಿಸುವ ಮೂಲಕ ಅರಿವು ಮೂಡಿಸಬಹುದು.



- ನವಜಾತ ಶಿಶುವಿನ ದಾಖಲಾತಿಯನ್ನು ಖಾತ್ರಿಪಡಿಸಬೇಕು.
- ಪಂಚಾಯತು ಅಧ್ಯಕ್ಷರು ಗ್ರಾಮ ನೈರ್ಮಲ್ಯ, ಆರೋಗ್ಯ ಸಮಿತಿಯ ಅಧ್ಯಕ್ಷರಾಗಿರುವುದರಿಂದ ರೋಗನಿರೋಧಕ ಲಸಿಕೆಯ ಮೇಲ್ವಿಚಾರಣೆ ಮತ್ತು ಆರೋಗ್ಯದ ಮಾಹಿತಿ, ದಾಖಲಾತಿಯು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು.

- ಗ್ರಾಮ ಪಂಚಾಯತು ಸದಸ್ಯರು ಕೂಡಾ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತರು/ಆಶಾ ಕಾರ್ಯಕರ್ತರ ಸಹಯೋಗದೊಂದಿಗೆ ಹದಿಹರೆಯದ ಮಕ್ಕಳಿಗೆ ಆರೋಗ್ಯ ಸೇವೆಗಳು ಲಭ್ಯವಾಗುವಂತೆ ಖಾತ್ರಿಪಡಿಸಬೇಕು.
- ಶಾಲೆ ಮತ್ತು ಅಂಗನವಾಡಿಗಳಿಗೆ ಸ್ವಚ್ಚ ಕುಡಿಯುವ ನೀರು ಲಭ್ಯವಾಗುತ್ತಿದೆಯೇ ಎಂಬುದನ್ನು ಪಂಚಾಯತು ಖಾತ್ರಿಪಡಿಸಬೇಕು.
- ಪಂಚಾಯತು ವ್ಯಾಪ್ತಿಯ ಶೌಚಾಲಯಗಳಿಲ್ಲದ ಮನೆಗಳ, ಮತ್ತು ನೀರಿನ ಲಭ್ಯತೆ ಇಲ್ಲದ ಮನೆಗಳ ದತ್ತಾಂಶ ಕಲೆ ಹಾಕುವುದರೊಂದಿಗೆ ಅಂತಹ ಮನೆಗಳಿಗೆ ವಿವಿಧ ಯೋಜನೆಗಳ ಮೂಲಕ ಪೂರೈಸುವ ವ್ಯವಸ್ಥೆಯನ್ನು ಮಾಡಬೇಕು.
- ಕಸಗಳ ವಿಲೇವಾರಿಗೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.
- ಪಂಚಾಯತು ಎಲ್ಲಾ ಸಂಸ್ಥೆಗಳ ನೀರಿನ ಪರೀಕ್ಷೆಯನ್ನು ಮಾಡಬೇಕು. ಅದರಲ್ಲೂ ಶಾಲೆ ಆರೋಗ್ಯ ಸಂಸ್ಥೆಗಳು, ಅಂಗನವಾಡಿಗಳು.
- ಕೊಳವೆ ಬಾವಿಗಳು ಮತ್ತು ತೆರೆದ ಚರಂಡಿಗಳು ಮತ್ತು ಆಪಾಯಕಾರಿ ಕೋರೆಗಳಿಂದ ಮಕ್ಕಳಿಗೆ ಸೂಕ್ತ ರಕ್ಷಣೆ ಒದಗಿಸಬೆಕು.

## ಮಕ್ಕಳ ಬೆಳವಣಿಗೆ

ಮಕ್ಕಳ ಆರೋಗ್ಯ, ಪೌಷ್ಟಿಕಾಂಶ ಮತ್ತು ದೈಹಿಕ ಬೆಳವಣಿಗೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.

- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಹಕಾರದಿಂದ ಮಕ್ಕಳಿಗೆ ಕಬ್ಬಿನಾಂಶದ ಕೊರತೆಯ ಮಾತ್ರೆಗಳು ಮಕ್ಕಳಿಗೆ ಲಭ್ಯವಾಗುವಂತೆ ಮತ್ತು ಹೆತ್ತವರು ಮಕ್ಕಳಿಗೆ ಸರಿಯಾಗಿ ತೆಗೆದುಕೊಳ್ಳುವಂತೆ ಮಾಡುವುದು.



- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಾಗಿರುವ ಪಂಚಾಯತು ಪ್ರತಿನಿಧಿಗಳು ಮಧ್ಯಾಹ್ನದ ಬಿಸಿಯೂಟದ ಗುಣಮಟ್ಟದ ಮೇಲ್ವಿಚಾರಣೆ

ಮಾಡಬೇಕು. ಸಮಸ್ಯೆಗಳಿದ್ದಲ್ಲಿ ಎಸ್‌ಡಿಎಮ್‌ಸಿ ಸಭೆ, ಗ್ರಾಮ ಸಭಾ ಮತ್ತು ಪಂಚಾಯತುಗಳಲ್ಲಿ ಈ ಸಮಸ್ಯೆಗಳ ಪರಿಹಾರಕ್ಕಾಗಿ ಧ್ವನಿ ಎತ್ತಬಹುದು. ಸೂಕ್ತ ಸಹಕಾರವನ್ನು ನೀಡಬಹುದು.

- ಗ್ರಾಮ ಪಂಚಾಯತು ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಶಾಲಾ ಕೈತೋಟ ರಚಿಸಲು ಪ್ರೋತ್ಸಾಹ ಮತ್ತು ಸಹಕಾರವನ್ನು ನೀಡಬಹುದು. ಮತ್ತು ಮಧ್ಯಾಹ್ನದ ಬಿಸಿಯೂಟಕ್ಕೆ ಪೌಷ್ಟಿಕಾಂಶಯುಕ್ತ ಆಹಾರವನ್ನು ಪೂರೈಸಬಹುದು.
- ಅಪೌಷ್ಠಿಕತೆಯಿಂದ ಬಳಲುವ ಮಕ್ಕಳ ಗುರುತಿಸುವಿಕೆ ಮತ್ತು ಅಂತಹ ಮಕ್ಕಳಿಗೆ ಪ್ರಾಥಮಿಕ ಅರೋಗ್ಯ ಕೇಂದ್ರಕ್ಕೆ ಸೂಕ್ತ ಚಿಕಿತ್ಸೆಗೆ ಸೇರಿಸಬಹುದು.
- ಅವಶ್ಯಕತೆ ಇದ್ದಲ್ಲಿ ಗ್ರಾಮ ಪಂಚಾಯತ್ 3 ವರ್ಷದೊಳಗಿನ ಮಕ್ಕಳ ಡೇ ಕೇರ್ ಸೆಂಟರನ್ನು ಸ್ಥಾಪಿಸಬಹುದು. ಇದರಿಂದ ಮಗುವಿನ ಭೌದ್ದಿಕ ಬೆಳವಣಿಗೆ ಮತ್ತು ವೃತ್ತಿನಿರತ ತಾಯಿಗೂ ಅನುಕೂಲವಾದಂತಾಗುತ್ತದೆ.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೂಕ್ತ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಮತ್ತು ಅವರಿಗೆ ಸೂಕ್ತ ಎನಿಸುವ ಕಲಿಕಾ ತರಗತಿಗೆ ಕಳುಹಿಸಬಹುದು. ವಿಶೇಷ ಅಗತ್ಯವುಳ್ಳ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿಯಾಗಿ ಸೌಲಭ್ಯವನ್ನು ಒದಗಿಸಬಹುದು. ಅವರಿಗೆ ಲಭ್ಯವಿರುವ ಅನುದಾನ, ವಿದ್ಯಾರ್ಥಿವೇತನ, ಭತ್ಯೆಗಳು ಸರಿಯಾಗಿ ಲಭ್ಯವಾಗುವಂತೆ ಮೇಲ್ವಿಚಾರಣೆ ಮಾಡುವುದು.
- ಗ್ರಾಮ ಪಂಚಾಯತ್ ಹದಿಹರೆಯ ಮಕ್ಕಳಿಗೆ ಸೂಕ್ತ ತರಬೇತಿಯನ್ನು ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪ್ರೋತ್ಸಾಹ ಮಾಡಬಹುದು.
- ಹದಿಹರೆಯದ ಮಕ್ಕಳಿಗಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳ ಸಹಕಾರದೊಂದಿಗೆ ಶಿಕ್ಷಕರಿಗೆ ಶಾಲಾ ಸಿಬ್ಬಂದಿಗಳಿಗೆ, ಗ್ರಾಮ ಪಂಚಾಯತ್ ಕಾರ್ಯಕರ್ತರಿಗೆ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ, ಉಪ ಸಮಿತಿಯ ಸದಸ್ಯರಿಗೆ ಆರೋಗ್ಯ ಕಾರ್ಯಕರ್ತರಿಗೆ ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು.

**ಮಕ್ಕಳ ರಕ್ಷಣೆ :**

**ಮಕ್ಕಳ ರಕ್ಷಣೆಯಲ್ಲಿ ಪಂಚಾಯತಿನ ಪಾತ್ರ:** ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಹಂತದಲ್ಲಿ ಮಗು ಸ್ನೇಹಿ ವಾತಾವರಣ ನಿರ್ಮಾಣ ಮಾಡುವುದರೊಂದಿಗೆ ಮಕ್ಕಳಿಗೆ

ಸುರಕ್ಷಿತ ಎಂಬ ಭಾವನೆ ಮೂಡಬೇಕು. ಕುಟುಂಬದಲ್ಲಿ ಮಗುವಿಕೆ ರಕ್ಷಣೆ ದೊರೆಯದಿದ್ದ ಸಂದರ್ಭದಲ್ಲಿ ಪಂಚಾಯತು ಸೂಕ್ತ ಕ್ರಮ ಕೈಗೊಳ್ಳಬೇಕು. ಮಕ್ಕಳ ರಕ್ಷಣಾ ಸಮಿತಿಯು ಅಂತಹ ಪ್ರಕರಣಗಳನ್ನು ಗುರುತಿಸಿ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ವ್ಯವಸ್ಥೆಗಳಿಗೆ ಪ್ರಕರಣಗಳನ್ನು ಹಸ್ತಾಂತರಿಸಬಹುದು.



## ಬಾಲ ಕಾರ್ಮಿಕ ಪದ್ದತಿಯ ಕುರಿತು

1. **ದುರ್ಬಲ ವರ್ಗದ ಕುಟುಂಬವನ್ನು ಗುರುತಿಸುವಿಕೆ ಮತ್ತು ಸಹಕಾರ:** ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿ ಮತ್ತು ಇತರ ಕಾರ್ಯಕರ್ತರ ಮೂಲಕ ಬಾಲ ಕಾರ್ಮಿಕರ ಮತ್ತು ಬಾಲ ಕಾರ್ಮಿಕತೆಗೆ ಸಾಧ್ಯತೆ ಇರುವ ಮಕ್ಕಳ ಪಟ್ಟಿಯನ್ನು ತಯಾರಿಸಿ ಅಂತಹ ಕುಟುಂಬಗಳಿಗೆ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಮೂಲಕ 100 ದಿನಗಳ ಉದ್ಯೋಗವನ್ನು ದೊರಕಿಸಿಕೊಡಬಹುದು. ಉದ್ಯೋಗಕ್ಕಾಗಿ ವಲಸೆ ಹೋಗುವ ಕುಟುಂಬಗಳಿಗೆ ಕೂಡಾ ಈ ಉದ್ಯೋಗವನ್ನು ಕಲ್ಪಿಸಿಕೊಡಬಹುದು.

2. ಅಪಾಯಕಾರಿ ಕೆಲಸಗಳಲ್ಲಿ ನಿರತವಾಗಿರುವ ಮಕ್ಕಳ ರಕ್ಷಣೆಯನ್ನು ಗ್ರಾಮ ಪಂಚಾಯತು ಮಾಡಬೇಕು. ಮಕ್ಕಳ ರಕ್ಷಣಾ ಸಮಿತಿಯು ಜಿಲ್ಲಾ ಮಟ್ಟದ ಆಡಳಿತಕ್ಕೆ/ಪೋಲಿಸ್/ಕಾರ್ಮಿಕ ಇಲಾಖೆ/ಮಕ್ಕಳ ಕಲ್ಯಾಣ ಸಮಿತಿ/ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ತಿಳಿಸುವ ಮೂಲಕ ಬಾಲ ಕಾರ್ಮಿಕ ಪದ್ದತಿಯ ನಿರ್ಮೂಲನೆ ಮಾಡಬಹುದು.

3. **ವಲಸೆ ಕುಟುಂಬ ಮತ್ತು ಅವರ ಮಕ್ಕಳ ನಿಗಾ:** ತಮ್ಮ ಗ್ರಾಮ ವ್ಯಾಪ್ತಿಯಿಂದ ಹೊರಗೆ ಹೋಗುವ ಕುಟುಂಬಗಳ ಮಾಹಿತಿಯನ್ನು ದಾಖಲು ಮಾಡಿ ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ವಲಸೆ ಮಕ್ಕಳು ಶಿಕ್ಷಣದಿಂದ ಮಾತ್ರವಲ್ಲದೆ ಅನೈತಿಕ ಸಾಗಾಟಕ್ಕೆ ಬಲಿಯಾಗುವುದನ್ನು ತಡೆಗಟ್ಟಬಹುದು.

4. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವುದು. ಗ್ರಾಮ ಪಂಚಾಯತು ಮಕ್ಕಳನ್ನು ಮತ್ತು ಅವರ ಹೆತ್ತವರನ್ನು ಶಿಕ್ಷಣದ ಮಹತ್ವದ ಕುರಿತಂತೆ ಅರಿವು ಮೂಡಿಸುವುದರ ಜೊತೆಗೆ ಬಾಲ ಕಾರ್ಮಿಕತೆಯ ದುಷ್ಪರಿಣಾಮದ ಬಗ್ಗೆ ತಿಳಿಹೇಳಬೇಕು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ

ಸಮಿತಿಯ ಮೂಲಕ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಲು ಸಹಕಾರವನ್ನು ನೀಡಬೇಕು.

## ಬಾಲ್ಯವಿವಾಹದಿಂದ ರಕ್ಷಣೆ:



1. ಮಗುವಿನ ಜನನ ನೋಂದಣಿ ಮಾಡುವುದರ ಮೂಲಕ ಮಗುವಿನ ವಯಸ್ಸಿನ ದಾಖಲಾತಿಯನ್ನು ಗ್ರಾಮ ಪಂಚಾಯುತು ನಿರ್ವಹಿಸಿದರೆ ಬಾಲ್ಯವಿವಾಹದ ಪ್ರಕರಣಗಳಲ್ಲಿ ಸೂಕ್ತ ನಿಗಾ ವಹಿಸಬಹುದು. ಹಾಗೆಯೇ ಪಂಚಾಯುತು ವಿವಾಹ ನೋಂದಣಿಯನ್ನು ಕಡ್ಡಾಯಗೊಳಿಸಬೇಕು.
2. ಪಂಚಾಯತು ಮತ್ತು ಮಕ್ಕಳ ರಕ್ಷಣಾ ಸಮಿತಿಯು ಬಾಲ್ಯವಿವಾಹ ಪ್ರಕರಣಗಳು ನಡೆಯುತ್ತಿರುವ ಸಂದರ್ಭದಲ್ಲಿ ಸೂಕ್ತ ಪ್ರಾಧಿಕಾರಕ್ಕೆ ತಿಳಿಸುವುದು.



3 ಯಾವುದೇ ಮಗು ಕಾಣೆಯಾದಲ್ಲಿ ಅಥವಾ ಬಾಲ್ಯವಿವಾಹದ ಸಂದೇಹ ಗಳಿದ್ದಲ್ಲಿ ಗ್ರಾಮ ಪಂಚಾಯುತಿಗೆ ತಿಳಿಯುವಂತಾಗಲು ಶಾಲಾ ಶಿಕ್ಷಕರನ್ನು ಸಂವೇದನಶೀಲರನ್ನಾಗಿಸಬೇಕು.

## ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ:



ಗ್ರಾಮ ಪಂಚಾಯತು ವ್ಯಾಪ್ತಿಯಲ್ಲಿ ಯಾವುದೇ ಲೈಂಗಿಕ ಪ್ರಕರಣಗಳು ನಡೆದರೆ

1. ಅಂಗನವಾಡಿ ಕಾರ್ಯಕರ್ತರು, ಆರೋಗ್ಯ ಕಾರ್ಯಕರ್ತರು, ಶಿಕ್ಷಕರು, ಆಶಾ ಕಾರ್ಯಕರ್ತರು ಸಮುದಾಯ ದಲ್ಲಿ ನಿಕಟ ಸಂಪರ್ಕ ಹೊಂದಿರುವುದ ರಿಂದ ಅಂತಹ

ಪ್ರಕರಣಗಳು ಗಮನಕ್ಕೆ ಬಂದಲ್ಲಿ ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಯ ಗಮನಕ್ಕೆ ತರುವಂತೆ ಪ್ರೇರೆಪಿಸಬೇಕು ಮತ್ತು ಈ ಕುರಿತು ಇರುವ ಕಾಯಿದೆ ಮತ್ತು ಕಾನೂನುಗಳ ಬಗ್ಗೆ ಅರಿವು ಅವರಿಗೆ ಮೂಡಿಸಬೇಕು.

2. ಅಂತಹ ಮಗುವನ್ನು ಅತ್ಯಂತ ಸೂಕ್ಷ್ಮವಾಗಿ ನಿರ್ವಹಿಸಬೇಕು. ಗೌಪ್ಯತೆಯನ್ನು ಕಾಪಾಡಬೇಕು. ಮತ್ತು ವಿವಿಧ ಪ್ರಾಧಿಕಾರಗಳ ಮೂಲಕ ಸೂಕ್ತ ಭದ್ರತೆ ಮತ್ತು ಬೆಂಬಲವನ್ನು ನೀಡಬೇಕು. ಕಾನೂನಿನ ಪ್ರಕ್ರಿಯೆಯನ್ನು ಅನುಸರಿಸಲು ಸಹಯಹಸ್ತವನ್ನು ನೀಡಬೇಕು.

3. ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಯಾವುದೇ ತಾರತಮ್ಯವಾಗದಂತೆ ಮತ್ತು ಶಿಕ್ಷಣದಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು. ಪಂಚಾಯತು ವ್ಯಾಪ್ತಿಯ ಸಂಸ್ಥೆಗಳಲ್ಲಿ ಮಕ್ಕಳ ದೌರ್ಜನ್ಯದ ಪ್ರಕರಣಗಳು ನಡೆದರೆ ಕೂಡಲೇ ಪಂಚಾಯತು ಕಾರ್ಯಪ್ರವೃತ್ತರಾಗಿ ಪೋಲಿಸಿಗೆ ವರದಿ ಸಲ್ಲಿಸಬೇಕು.

4. ಮಕ್ಕಳಿಗೆ ಶಾಲೆಗಳಿಂದ ಹಿಂದಿರುಗುವಾಗ ಮಕ್ಕಳಿಗೆ ತೊಂದರೆಯಾಗುವ ಅಥವಾ ಅಪಾಯಕಾರಿ ಸ್ಥಳಗಳಲ್ಲಿ ಪೋಲಿಸರಿಂದ ಬೀಟ್ ಮಾಡಿಸಬಹುದು.

**ಮನೋದೈಹಿಕ ಶಿಕ್ಷೆ:**

ಗ್ರಾಮ ಪಂಚಾಯತು ಹೆತ್ತವರು, ಶಿಕ್ಷಕರು ಮತ್ತು ಪೋಷಕರಿಗೆ ಮನೋದೈಹಿಕ ದಂಡನೆಯ ಪರಿಣಾಮದ ಕುರಿತಂತೆ ಅರಿವು ಮೂಡಿಸಬಹುದು ಮತ್ತು ಮನೊದೈಹಿಕ ದಂಡನೆಯ ಕುರಿತಂತೆ ಕಾನೂನು ಅರಿವು ಮೂಡಿಸುವ ಕೆಲಸವನ್ನು ಮಾಡಬಹುದು.



ಚೈಲ್ಡ್‌ಲೈನ್, ಮಕ್ಕಳ ಕಲ್ಯಾಣ ಸಮಿತಿ, ಸನಿಹದ ಪೋಲಿಸ್ ಸ್ಟೇಷನ್‌ನ ದೂರವಾಣಿ

ಸಂಖ್ಯೆಯನ್ನು ಮಕ್ಕಳಿಗೆ ಮತ್ತು ಹೆತ್ತವರಿಗೆ ಲಭ್ಯವಾಗುವಂತೆ ಪಂಚಾಯತು ವ್ಯಾಪ್ತಿಯ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

ಎಲ್ಲಾ ಮಕ್ಕಳು ಶಾಲೆಯಲ್ಲಿ ಮತ್ತು ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗುವುದಿಲ್ಲ ಎಂಬ ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಮಗುಸ್ನೇಹಿ ಪಂಚಾಯತು ಎಂದು ಗುರುತಿಸಿಕೊಳ್ಳಬಹುದು.

**ಮಕ್ಕಳ ಭಾಗವಹಿಸುವಿಕೆಯಲ್ಲಿ ಪಂಚಾಯತಿನ ಪಾತ್ರ :**

1. ಪಂಚಾಯತು ಸದಸ್ಯರು ಮಕ್ಕಳು ಗ್ರಾಮ ಸಭಾಗಳಲ್ಲಿ ಸೂಕ್ತ ವೇದಿಕೆಗಳಲ್ಲಿ ಎತ್ತಿದ ಪ್ರಶ್ನೆಗಳಿಗೆ ಸೂಕ್ತ ಪರಿಹಾರ ಒದಗಿಸುವುದು.
2. ಪಂಚಾಯತು ಮಕ್ಕಳಿಗೆ ಆಟದ ಮೈದಾನ, ಪಾರ್ಕು ಲೈಬ್ರೇರಿಯನ್ನು ಒದಗಿಸುವುದರ ಜೊತೆಗೆ ಸರಿಯಾಗಿ ಉಪಯೋಗವಾಗುವಂತೆ ನೋಡಿಕೊಳ್ಳುವುದು.
3. ಶಾಲೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯ ದಿವಸ, ಮಕ್ಕಳ ದಿನಾಚರಣೆ ಮುಂತಾದ ಕಾರ್ಯಕ್ರಮಗಳು ಸಮರ್ಪಕ ರೀತಿಯಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಬೇಕು. ಅಲ್ಲದೇ ಮಕ್ಕಳಿಗೆ ವಿವಿಧ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.



# ಮಕ್ಕಳ ಸಂಬಂಧಿತ ಕಾಯಿದೆಗಳು

1. ಪ್ರಸವ ಪೂರ್ವ ಲಿಂಗ ಪತ್ತೆ ಕಾಯಿದೆ–1994 (ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟುವುದು)/ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ತಂತ್ರ ವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ನಿಯಮಗಳು 2014
2. ಪರ್ಯಾಯ ಶಿಶು ಆಹಾರ, ಹಾಲು ಹಾಗೂ ಹಾಲು ಕುಡಿಸುವ ಶೀಶೆ ಅಧಿನಿಯಮ–1992
3. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯಿದೆ – 2005
4. ಜೀತ ಪದ್ಧತಿ ನಿರ್ಮೂಲನಾ ಕಾಯಿದೆ – 1986
5. ಮಕ್ಕಳ ಅನೈತಿಕ ಕಳ್ಳ ಸಾಗಣೆ ತಡೆ ಕಾಯಿದೆ – 1986
6. ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ – 1989
7. ಮಕ್ಕಳಿಗಾಗಿ ರಾಷ್ಟ್ರೀಯ ನೀತಿ 2013
8. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ–2009
9. ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣಾ ಕಾಯಿದೆ–2012
10. ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ
11. ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) 1986, ತಿದ್ದುಪಡಿ 2016
12. ಬಾಲ್ಯ ವಿವಾಹ ನಿಷೇದ ಕಾಯಿದೆ – 2006
13. ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯಿದೆ – 2015

# ಮಗುಸ್ನೇಹಿ ಪಂಚಾಯತು ಸೂಚ್ಯಂಕ

| ಮೌಲ್ಯಮಾಪನದ ಅವಧಿ: | | | | |
|---|---|---|---|---|
| ಕ್ರಮ ಸಂಖ್ಯೆ | ಸೂಚ್ಯಂಕ | ಉತ್ತಮ (4/2) | ತೃಪ್ತಿಕರ (1) | ಅತೃಪ್ತಿಕರ (0) |
| 1. | ನಿಮ್ಮ ಗ್ರಾಮ ಪಂಚಾಯತಿನಲ್ಲಿ ಮಕ್ಕಳ ಹಕ್ಕುಗಳ ಗ್ರಾಮಸಭೆ ನಡೆದಿದೆಯೇ?<br>• ಎಲ್ಲಾ ಮಕ್ಕಳು ಗ್ರಾಮ ಸಭೆಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ (ಮುಂಚಿತವಾಗಿ ನೋಟಿಸು, ಅಜೆಂಡಾ, ಆ ಗ್ರಾಮದ ಮಕ್ಕಳಿಗೆ ಅನುಕೂಲವಾಗುವ ಸಮಯ ಅದರಲ್ಲೂ ಬೇರೆ ಶಾಲೆಯಲ್ಲಿ ಕಲಿಯುತ್ತಿರುವ ಅದೇ ಗ್ರಾಮದ ಮಕ್ಕಳಿಗೂ ಅನ್ವಯವಾಗುವಂತೆ)–2<br>• ಮೇಲೆ ತಿಳಿಸಿದ ವಿಧಾನಗಳನ್ನು ಅನುಸರಿಸದೆ ಕಾರ್ಯಕ್ರಮ ಆಯೋಜಿಸಿದ್ದು–1<br>• ಒಂದು ವರ್ಷದಿಂದ ಗ್ರಾಮ ಸಭೆಯನ್ನು ಆಯೋಜಿಸಲೇ ಇಲ್ಲ.–0 | 2 | 1 | 0 |
| 2. | ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಮಕ್ಕಳ ಭಾಗವಹಿಸುವಿಕೆ ಮಟ್ಟ<br>• ಮಕ್ಕಳು ಸಕ್ರೀಯವಾಗಿ ಮತ್ತು ಸ್ವತಂತ್ರವಾಗಿ ಬಾಗವಹಿಸಿದ್ದರು. 4<br>• ಶಿಕ್ಷಕರು/ಮಾರ್ಗದರ್ಶಕರ ಸೂಚನೆಯಂತೆ ಮಕ್ಕಳು ಭಾಗವಹಿಸುತ್ತಾರೆ– 1<br>• ಮಕ್ಕಳು ಗ್ರಾಮ ಸಭೆಯಲ್ಲಿ ಕೇವಲ ಕೇಳುತ್ತಾರೆ/ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ/ ಗ್ರಾಮ ಸಭೆಯನ್ನು ಆಯೋಜಿಸಿಯೆ ಇಲ್ಲ.–0 | 4 | 1 | 0 |
| 3. | ಗ್ರಾಮ ಸಭೆಯಲ್ಲಿ ಮಕ್ಕಳು ಧ್ವನಿ ಎತ್ತಿದ ವಿಷಯ/ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗಿದೆ.<br>• ಹೆಚ್ಚಿನ ಎಲ್ಲಾ ವಿಷಯಗಳು ಬಗೆಹರಿದಿದೆ. 2<br>• ಕೆಲವು ಮಾತ್ರ ಬಗೆಹರಿದಿವೆ 1<br>•ಯಾವುದೇ ಕ್ರಮತೆಗೆದುಕೊಂಡಿಲ್ಲ/ಬಗೆಹರಿಸಿಲ್ಲ 0 | 2 | 1 | 0 |

| | | | | |
|---|---|---|---|---|
| 4 | ಗ್ರಾಮ ಪಂಚಾಯತು ಸಭೆಯಲ್ಲಿ ಮಕ್ಕಳ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳನ್ನು ಒಂದು ಅಜೆಂಡಾವಾಗಿ ಪರಿಗಣಿಸಿದ್ದಾರೆಯೇ?<br>• ಎಲ್ಲಾ ತಿಂಗಳ ಸಭೆಯಲ್ಲಿ ಅಳವಡಿಸಿಕೊಳ್ಳಲಾಗಿದೆ 2<br>• ಕೆಲವೇ ತಿಂಗಳ ಸಭೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆಯೇ? 1<br>• ಗ್ರಾಮ ಸಭೆಯಲ್ಲಿ ಅಜೆಂಡಾವಾಗಿ ಪರಿಗಣಿಸಿಲ್ಲ – 0 | 2 | 1 | 0 |
| 5 | ಪಂಚಾಯತು ಸದಸ್ಯರು ಶಾಲೆಯಲ್ಲಿ ನಡೆಯುವ ಎಸ್.ಡಿ.ಎಮ್.ಸಿ ಸಭೆಯಲ್ಲಿ ಭಾಗವಹಿಸುತ್ತಾರೆಯೇ?<br>• ಎಲ್ಲಾ ಸಭೆಗಳಲ್ಲಿ ಭಾಗವಹಿಸಿದ್ದಾರೆ. 2<br>• ಕೆಲವೇ ಸಭೆಗಳಲ್ಲಿ ಭಾಗವಹಿಸಿದ್ದಾರೆ 1<br>• ಯಾವುದೇ ಸಭೆಯಲ್ಲಿ ಭಾಗವಹಿಸಿಲ್ಲ 0 | 2 | 1 | 0 |
| 6 | ಮಕ್ಕಳ ಹಕ್ಕುಗಳು ಮತ್ತು ಶಾಲೆಗಳ ಅಭಿವೃದ್ಧಿ ಕುರಿತಂತೆ ಹಣಕಾಸಿನ ಹಂಚಿಕೆ ಮತ್ತು ಅಭಿವೃದ್ಧಿಗಾಗಿ ಖರ್ಚನ್ನು ಮಾಡಿದ್ದಾರೆಯೇ?<br>• ಹಣಕಾಸಿನ ಹಂಚಿಕೆ ಮತ್ತು ಅದರ ಸಂಪೂರ್ಣ ಖರ್ಚನ್ನು ಮಾಡಿರುತ್ತಾರೆ 2<br>• ಹಣಕಾಸಿನ ಹಂಚಿಕೆಯನ್ನು ಮಾಡಿರುತ್ತಾರೆ ಅದರೆ ಖರ್ಚು ಮಾಡಿಲ್ಲ/ಸ್ವಲ್ಪವೇ ಖರ್ಚು–1<br>• ಯಾವುದೇ ಹಣಕಾಸಿನ ಹಂಚಿಕೆ ಮಾಡಿಲ್ಲ 0 | 2 | 1 | 0 |
| 7 | ಪಂಚಾಯತು ಸದಸ್ಯರು (ವಾರ್ಡ್) ಶಾಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಂಚಾಯತ್‌ನ ಅಥವಾ ಇತರ ಮೂಲಗಳ ಹಣಕಾಸಿನ ಸರಿಯಾದ ಬಳಕೆಯ ಬಗ್ಗೆ ಮೇಲ್ವಿಚಾರಣೆಯನ್ನು ಮಾಡುತ್ತಾರೆಯೇ?<br>ಎಲ್ಲಾ ಪಂಚಾಯತು ಸದಸ್ಯರು ತಮ್ಮ ವ್ಯಾಪ್ತಿಯ ಶಾಲೆಯಲ್ಲಿ ಯೋಜಿತ ಅಭಿವೃದ್ಧಿ | 2 | 1 | 0 |

| | | | | |
|---|---|---|---|---|
| | ಕೆಲಸಗಳ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆ–2<br>ಕೆಲವು ಪಂಚಾಯತು ಸದಸ್ಯರು ತಮ್ಮ ವ್ಯಾಪ್ತಿಯ ಶಾಲೆಯಲ್ಲಿ ಯೋಜಿತ ಅಭಿವೃದ್ಧಿ ಕೆಲಸಗಳ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆ–1<br>• ಯಾವುದೇ ಅಭಿವೃದ್ಧಿ ಕೆಲಸದ ಮೇಲ್ವಿಚಾರಣೆ ನಡೆಸುವುದಿಲ್ಲ 0 | | | |
| 8 | ಶಿಕ್ಷಣ ಹಕ್ಕು ಕಾಯಿದೆಯನ್ನು ಸ್ಥಳೀಯ ಭಾಷೆಯಲ್ಲಿ ಪಂಚಾಯತಿನಲ್ಲಿ ಪ್ರದರ್ಶಿಸಲಾಗಿದೆಯೇ?<br>• ಸೂಕ್ತವಾದ ಸ್ಥಳದಲ್ಲಿ ಸ್ಪಷ್ಟವಾಗಿ ಕಾಣುವಂತೆ ಪ್ರದರ್ಶಿಸಲಾಗಿದೆ 2<br>• ಪ್ರದರ್ಶಿಸಲಾಗಿದೆ ಆದರೆ ಸರಿಯಾದ ಸ್ಥಳದಲ್ಲಿ ಸ್ಪಷ್ಟವಾಗಿ ಕಾಣುತ್ತಿಲ್ಲ 1<br>• ಪ್ರದರ್ಶಿಸಲಾಗಿಲ್ಲ ಅಥವಾ ಸರಿಯಾಗಿ ಕಾಣಿಸುತ್ತಿಲ್ಲ 0 | 2 | 1 | 0 |
| 9 | ಪಂಚಾಯತು ವ್ಯಾಪ್ತಿಯ ಮಕ್ಕಳ ಅಂಕಿ ಅಂಶಗಳ ದಾಖಲೆಯನ್ನು ನಿರ್ವಹಿಸುತ್ತಿದೆಯೇ ಮತ್ತು ದಾಖಲೆಗಳನ್ನು ಪಂಚಾಯತಿನಲ್ಲಿ ಪ್ರದರ್ಶಿಸಿದೆಯೇ?<br>• ಕಳೆದ 1 ತಿಂಗಳಿನ ಅಂಕಿ ಅಂಶಗಳು ನವೀಕರಿಸಲಾಗಿದೆ ಮತ್ತು ಅದನ್ನು ಪಂಚಾಯತಿನಲ್ಲಿ ಸೂಕ್ತವಾದ ಸ್ಥಳದಲ್ಲಿ ಲಿಂಗಾನುಪಾತದೊಂದಿಗೆ ಪ್ರದರ್ಶಿಸಲಾಗಿದೆ 2<br>• ಪ್ರದರ್ಶಿಸಲಾಗಿದೆ ಆದರೆ ಸ್ಪಷ್ಟವಾಗಿಲ್ಲ ಮತ್ತು ಸೂಕ್ತ ಸ್ಥಳದಲ್ಲಿಲ್ಲ ಅಥವಾ ಲಿಂಗಾನುಪಾತವೂ ಸರಿಯಾಗಿಲ್ಲ ಮತ್ತು ಹಳೆಯ ದಾಖಲೆಗಳು 1<br>• ಪ್ರದರ್ಶಿಸಲಾಗಿಲ್ಲ ಅಥವಾ ಸರಿಯಾಗಿ ಕಾಣುವಂತಿಲ್ಲ. 0 | 2 | 1 | 0 |

| | | | | |
|---|---|---|---|---|
| 10 | ಮಕ್ಕಳ ರಕ್ಷಣಾ ವ್ಯವಸ್ಥೆ ಮತ್ತು ಅದರ ವಿವರಗಳನ್ನು ಪಂಚಾಯತಿನಲ್ಲಿ ಪ್ರದರ್ಶಿಸಲಾಗಿದೆಯೇ?<br>• ಇತ್ತೀಚಿಗಿನ ಮಾಹಿತಿಯನ್ನು ಸ್ಪಷ್ಟವಾಗಿ ಮತ್ತು ಸೂಕ್ತವಾದ ಸ್ಥಳದಲ್ಲಿ ಪ್ರದರ್ಶಿಸಲಾಗಿದೆ. 2<br>• ಪ್ರದರ್ಶಿಸಲಾಗಿದೆ ಆದರೆ ಸ್ಪಷ್ಟವಾಗಿಲ್ಲ ಮತ್ತು ನವೀಕರಿಸಲಾಗಿಲ್ಲ ಮತ್ತು ಸೂಕ್ತವಾದ ಸ್ಥಳದಲ್ಲಿ ಪ್ರದರ್ಶಿಸಲಾಗಿಲ್ಲ. 1<br>• ಪ್ರದರ್ಶಿಸಲಾಗಿಲ್ಲ ಅಥವಾ ಹಳೆಯ ಮಾಹಿತಿ ಅಥವಾ ಕಾಣಲು ಸಿಗುವುದಿಲ್ಲ 0 | 2 | 1 | 0 |
| 11 | ಮಕ್ಕಳ ಕಳ್ಳ ಸಾಗಣೆ ಸಮಸ್ಯೆ:<br>• ಮಕ್ಕಳ ಕಳ್ಳ ಸಾಗಾಟ, ಮಕ್ಕಳ ರಕ್ಷಣಾ ವ್ಯವಸ್ಥೆ ಕುರಿತಂತೆ ಅರಿವು ಕಾರ್ಯಕ್ರಮ ಮತ್ತು ಪ್ರಕರಣಗಳ ಪತ್ತೆ ಮತ್ತು ಇತ್ಯರ್ಥ–2<br>• ಮಕ್ಕಳ ಕಳ್ಳ ಸಾಗಾಟ ವಿರೋಧಿ ಸಮಿತಿಯು ಸಭೆಗಳನ್ನು ನಡೆಸುತ್ತದೆ ಆದರೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ/ ಯಾವುದೇ ಸಮಸ್ಯೆಯನ್ನು ಪರಿಹರಿಸಿರುವುದಿಲ್ಲ. 2<br>• ಸಮಿತಿಯು ಅಸ್ತಿತ್ವದಲ್ಲಿ ಇಲ್ಲ/ ಸಮಿತಿಯು ಕ್ರೀಯಾಶೀಲವಾಗಿಲ್ಲ.: 0 | 2 | 1 | 0 |
| 12 | ಪಂಚಾಯತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ದುರ್ಬಲ ವರ್ಗದ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಪ್ರಾತಿನಿಧ್ಯ ನೀಡಿದೆಯೇ?<br>• ಯೋಜನೆ, ಹಣಕಾಸಿನ ಹಂಚಿಕೆ ಮತ್ತು ದುರ್ಬಲ ವರ್ಗದ ಮಕ್ಕಳಿಗಾಗಿ ವಿಶೇಷ ಕ್ರಮಗಳ ಅನುಷ್ಠಾನ. 2 | 2 | 1 | 0 |

| | | | | |
|---|---|---|---|---|
| | • ಯೋಜನೆ ಮತ್ತು ಹಣಕಾಸಿನ ಹಂಚಿಕೆ ಆದರೆ ಸರಿಯಾದ ಅನುಷ್ಠಾನ ಇಲ್ಲ. 1<br>• ಯಾವುದೇ ಯೋಜನೆ ಇಲ್ಲ 0 | | | |
| 13 | ಪಂಚಾಯತು ಸ್ವ ಮೌಲ್ಯಮಾಪನ ಸೂಚ್ಯಂಕ (ಮೇಲಿನ 12 ಸೂಚ್ಯಂಕ)ವನ್ನು ಪರಿಣಾಮಕಾರಿಯಾಗಿ ಉಪಯೋಗಿಸುತ್ತಿದ್ದಾರೆಯೇ?<br>• ಎಲ್ಲಾ ಸೂಚ್ಯಂಕಗಳನ್ನು ವಸ್ತುನಿಷ್ಟವಾಗಿ ಚರ್ಚಿಸಿದ್ದಾರೆ. 4<br>• ಕೆಲವು ಸೂಚ್ಯಂಕಗಳನ್ನು ಮಾತ್ರ ಅಥವಾ ಹೆಚ್ಚಿನ ಸದಸ್ಯರು ಸಮರ್ಪಕ ಚರ್ಚೆ ಇಲ್ಲದೆ –1<br>• ಈ ಸೂಚ್ಯಂಕವನ್ನು ಬಳಸದೆ ಇರುವುದು ಅಥವಾ ಪರಿಣಾಮಕಾರಿಯಾಗಿಲ್ಲದೆ ಕೆಲವೇ ಸದಸ್ಯರು ಭಾಗವಹಿಸಿದ್ದರು 0 | | | |

| | | | |
|---|---|---|---|
| ಮೌಲ್ಯಮಾಪನದ ದಿನಾಂಕ: | | | |
| ಗರಿಷ್ಠ ಸಾಧ್ಯತ ಅಂಕ | | | |
| ಮೌಲ್ಯಮಾಪನದಲ್ಲಿ ಗಳಿಸಿದ ಒಟ್ಟು ಅಂಕ = | | | |
| **ಕ್ರಮ ಸಂಖ್ಯೆ** | **ಗ್ರೇಡ್** | **ಅಂಕ** | **ಮೌಲ್ಯಮಾಪನದ ಪ್ರಕಾರ ಗಳಿಸಿದ ಸ್ಥಾನ** |
| 1 | ಉತ್ತಮ | 20–30 | |
| 2 | ತೃಪ್ತಿಕರ | 10–20 | |
| 3 | ಅತೃಪ್ತಿಕರ | 0–9 | |

# ಮಕ್ಕಳ ರಕ್ಷಣಾ ಸಮಿತಿ

ಮಗುಸ್ನೇಹಿ ಸಮಾಜ ನಿರ್ಮಾಣ ಪ್ರಕ್ರಿಯೆಯಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ಅತ್ಯಂತ ಪ್ರಮುಖವಾದುದು. ಇದಕ್ಕಾಗಿ ಸರಕಾರವು ಅನೇಕ ಕಾನೂನು, ಕಾಯಿದೆಗಳನ್ನು ರೂಪಿಸಿದರೂ ಸಹ ಅದರ ಅನುಷ್ಠಾನದಲ್ಲ ಎಡವುತ್ತಿದ್ದೇವೆ. ಮಕ್ಕಳ ರಕ್ಷಣಾ ವ್ಯವಸ್ಥೆಗಳು ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದವರೆಗೂ ರಚನೆಯಾಗಬೇಕಿಂದಿದ್ದರೂ ತಳಮಟ್ಟದಲ್ಲಿ ಅದರ ಅಸ್ತಿತ್ವವು ಪ್ರಶ್ನಾರ್ಥಕ ಚಿಹ್ನೆಯಾಗಿದೆ.





ಶಾಸನಾತ್ಮಕವಾಗಿ ರೂಪಿಸಲಾದ ಮಕ್ಕಳ ಹಕ್ಕುಗಳು ಮಗುವು ವಾಸಿಸುವ ಸ್ಥಳ/ ವಾತಾವರಣವು ರಕ್ಷಣಾತ್ಮಕವಾಗಿ ರುವುದಾಗಿಯೂ ಮತ್ತು ಮಗುವು ನಿರ್ಲಕ್ಷ್ಯ, ತಾರತಮ್ಯ, ಹಿಂಸೆ, ನಿಂದನೆ, ಆರ್ಥಿಕ ಮತ್ತು ಲೈಂಗಿಕ ದೌರ್ಜನ್ಯಗಳಿಂದ ಸುರಕ್ಷಿತ ವಾಗಿರುವುದರ ಬಗ್ಗೆ ಸರ್ಕಾರದ ಬದ್ಧತೆಯನ್ನು ಖಾತರಿಪಡಿಸುವುದಲ್ಲದೆ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು ಉತ್ತಮ ವಾತಾವರಣ ನಿರ್ಮಾಣಕ್ಕಾಗಿ ಮುಂಜಾಗೃತಾ ವ್ಯವಸ್ಥೆಯನ್ನು ಹೊಂದಬೇಕಾಗಿದೆ.

ಅದಕ್ಕಾಗಿ ಕರ್ನಾಟಕ ಸರಕಾರವು ಮಕ್ಕಳ ರಕ್ಷಣೆಗಾಗಿ ವಿವಿಧ ಸ್ಥರಗಳಲ್ಲಿ ಸಮಿತಿಗಳ ರಚನೆಗಾಗಿ ಸುತ್ತೋಲೆಯನ್ನು ಹೊರಡಿಸಿವೆ. ಕರ್ನಾಟಕ ರಾಜ್ಯ ಮಕ್ಕಳ

ರಕ್ಷಣಾ ನೀತಿ– 2016ರಲ್ಲೂ ವಾರ್ಡ್ ಮಟ್ಟದಿಂದ ರಾಜ್ಯ ಮಟ್ಟದವರೆಗೂ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ.

**ಸಮಗ್ರ ಮಕ್ಕಳಾ ರಕ್ಷಣಾ ಯೋಜನೆಯಡಿ ಜಿಲ್ಲಾ, ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿ ಮಕ್ಕಳಾ ರಕ್ಷಣಾ ಸಮಿತಿಗಳ ರಚನೆ**

1. ಸರಕಾರಿ ಆದೇಶ ಸಂಖ್ಯೆ : ಮಮಇ 71 ಮಭಾಬ 2009, ದಿನಾಂಕ : 15.06.2010
2. ಸರ್ಕಾರಿ ಆದೇಶ ಸಂಖ್ಯೆ: ಮಮಇ 79 ಮಭಾಬ 2011, ದಿನಾಂಕ : 23.09.2011.
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ಸ: ಆಕುಕ 30 ಎಫ್‌ಪಿಇ 2014 ದಿನಾಂಕ 29.01.2014
4. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಮ.ಅ.ಇ: ಕೆಎಸ್.ಐ.ಸಿ.ಪಿ.ಎಸ್:ಸಿಪಿಸಿ:01:2012–13, ದಿನಾಂಕ 29.06.2013

## ಮಕ್ಕಳ ರಕ್ಷಣಾ ಸಮಿತಿ ಕುರಿತ ಪ್ರಸ್ತಾವನೆ

ಬಾಲನ್ಯಾಯ ಕಾಯ್ದೆ, ಸಮಗ್ರ ಬೀದಿ ಮಕ್ಕಳ ಕಾರ್ಯಕ್ರಮ, ದತ್ತು ಕಾರ್ಯಕ್ರಮ ಮತ್ತು ಮಕ್ಕಳ ಸಹಾಯವಾಣಿ ಇತ್ಯಾದಿ ಯೋಜನೆಗಳನ್ನು ಒಂದುಗೂಡಿಸಿ ಕೇಂದ್ರ ಸರ್ಕಾರವು ಹೊರಡಿಸುವ ಮಾರ್ಗಸೂಚಿಯನ್ವಯ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯನ್ನು ದಿನಾಂಕ 22.03.2010 ರಂದು ಕೇಂದ್ರ ಸರ್ಕಾರದೊಡನೆ ಮಾಡಿಕೊಂಡಿರುವ ಒಪ್ಪಂದದನ್ವಯ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಮೇಲೆ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.



ಕೇಂದ್ರ ಪುರಸ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು (ಐ.ಸಿ.ಪಿ.ಎಸ್) ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಐ.ಸಿ.ಪಿ.ಎಸ್ ಮಾರ್ಗಸೂಚಿಗಳನ್ವಯ ಕಾರ್ಯ ನಿರ್ವಹಿಸಲು ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿ/ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ರಚಿಸಲಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳನ್ವಯ ಗ್ರಾಮಮಟ್ಟದ ಮಕ್ಕಳ ರಕ್ಷಣಾ ಸಮಿತಿಯ ಕಾರ್ಯವನ್ನು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ/ ಅರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಗೆ ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಹಮತಿಸಿದೆ.

ಗ್ರಾಮ ಮಕ್ಕಳ ರಕ್ಷಣಾ ಸಮಿತಿಯ ಕಾರ್ಯವನ್ನು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ/ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಗೆ ವಹಿಸಲು, ಈಗಾಗಲೇ ರಚಿಸಲಾಗಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವೇ ಜಿಲ್ಲಾ ಮಕ್ಕಳ ಸಮಿತಿಯಾಗಿ ಕಾರ್ಯನಿರ್ವಹಿಸಲು ಮತ್ತು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ಘಟಕದ ಸಮಿತಿಯಲ್ಲಿರುವ ಸದಸ್ಯರ ಹುದ್ದೆಗಳ ಸಮಾನಾಂತರ ತಾಲ್ಲೂಕು ಅಧಿಕಾರಿಗಳನ್ನು ನೇಮಕ ಮಾಡಿ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಲು ನಿರ್ದೇಶಿಸಲಾಗಿದೆ.

**ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯ ಗುರಿ:**

- ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸುವುದರ ಮುಖ್ಯ ಗುರಿ ಸಂಪೂರ್ಣ ಬಾಲ ಕಾರ್ಮಿಕ ಮುಕ್ತ ಸಂಪೂರ್ಣ ಬಾಲ್ಯ ವಿವಾಹ ಮುಕ್ತ ಗ್ರಾಮ ಪಂಚಾಯತಿಯನ್ನಾಗಿ ಮಾಡುವುದು.
- ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ, ಮಕ್ಕಳ ಹಕ್ಕುಗಳಾದ ಬದುಕುವ ಹಕ್ಕು, ರಕ್ಷಣೆಯ ಹಕ್ಕು, ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು ಮತ್ತು ಭಾಗವಹಿಸುವ ಹಕ್ಕುಗಳನ್ನು ಖಾತರಿಪಡಿಸುವುದಾಗಿದೆ.

**ಉದ್ದೇಶಗಳು:**

ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸುವುದರ ಮುಖ್ಯ ಉದ್ದೇಶ ದುಡಿಮೆ/ಜೀತ/ ಸಂಬಳ ಮತ್ತು ಮನೆಗೆಲಸದಲ್ಲಿರುವ ಎಲ್ಲಾ 14 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ದುಡಿಮೆಯಿಂದ ಬಿಡಿಸಿ ಶಾಲೆಗೆ ಕರೆತರುವುದು. ಎಲ್ಲಾ ಮಕ್ಕಳ ಶಿಕ್ಷಣಕ್ಕೆ ಒತ್ತುಕೊಡುವುದು. ಹಾಗೆಯೇ 14 ರಿಂದ 18 ವರ್ಷದ ಮಕ್ಕಳೂ ಸಹ ಶಿಕ್ಷಣ ಮುಂದುವರಿಸುವುದನ್ನು ಖಾತರಿಗೊಳಿಸುವುದು.

ಕರ್ನಾಟಕ ಸರಕಾರದ ಆದೇಶ ಸಂಖ್ಯೆ: ಮಮಿ 274 ಮಭಾಬ 2013 ಬೆಂಗಳೂರು.

ದಿನಾಂಕ: 28–07–2014ರಂತೆ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಈ ಕೆಳಗಿನಂತೆ ರಚಿಸಿ, ಅವುಗಳ ಕಾರ್ಯಚಟುವಟಿಕೆಯನ್ನು ವಿವರಿಸಿದೆ.

## ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ಸಮಿತಿ

| ಕ್ರಮ ಸಂಖ್ಯೆ | ಹುದ್ದೆ | ಪದನಾಮ |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಉಪಾಧ್ಯಕ್ಷರು |
| 3 | ಪೊಲೀಸ್ ವರಿಷ್ಠಾಧಿಕಾರಿಗಳು ಸದಸ್ಯರು | |
| 4 | ಸದಸ್ಯ ಕಾರ್ಯದರ್ಶಿ/ಪ್ರತಿನಿಧಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ | ಸದಸ್ಯರು |
| 5<br>6 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು<br>ಸದಸ್ಯರು |
| 7 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 8 | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 9 | ಜಿಲ್ಲಾ ಕಾರ್ಮಿಕ ಅಧಿಕಾರಿ, ಜಿಲ್ಲಾ ಕಾರ್ಮಿಕ ಇಲಾಖೆ | ಸದಸ್ಯರು |
| 10<br>11 | ಅಧ್ಯಕ್ಷರು ಬಾಲ ನ್ಯಾಯ ಮಂಡಳಿಸದಸ್ಯರು<br>ಅಧ್ಯಕ್ಷರು ಮಕ್ಕಳ ಕಲ್ಯಾಣ ಸಮಿತಿಸದಸ್ಯರು | |
| 12 | ಜಿಲ್ಲಾ ಪಂಚಾಯತ್‌ನ ಓರ್ವ ಮಹಿಳಾ ಸದಸ್ಯರು | ಸದಸ್ಯರು |
| 13 | ಮಹಾನಗರ ಪಾಲಿಕೆ/ ನಗರ ಸಭೆ (ಮಹಾನಗರ ಪಾಲಿಕೆ/<br>ನಗರ ಸಭೆಯ ಓರ್ವ ಮಹಿಳಾ ಸದಸ್ಯರು) | ಸದಸ್ಯರು |
| 14 | ಜಿಲ್ಲಾ ಮಟ್ಟದ ಮಕ್ಕಳಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು | ಸದಸ್ಯರು |
| 15 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಡುಪಿ | ಸದಸ್ಯ ಕಾರ್ಯದರ್ಶಿ |

ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ ಸಮಿತಿಯು ಕಾರ್ಯ ನಿರ್ವಹಿಸಲಾಗುವುದು. ತಾಲೂಕು ಮಟ್ಟದ ಸಮಿತಿಯಿಂದ ಬಂದಿರುವ ವರದಿಗಳ ಕುರಿತು ಚರ್ಚಿಸುವುದು ಹಾಗೂ ಎಲ್ಲಾ ಸದಸ್ಯರು ಹಾಗೂ ಇಲಾಖೆಗಳಿಂದ

ಪ್ರಸ್ತಾಪವಾಗುವ ವಿಷಯಗಳ ಕುರಿತಾಗಿ ಚರ್ಚಿಸಿ, ಮಾರ್ಗದರ್ಶನ ನೀಡುವುದು ಹಾಗೂ ಕ್ರಿಯಾ ಯೋಜನೆ ರೂಪಿಸುವುದು. ಪ್ರತೀ ಇಲಾಖೆಗಳು ಕಡ್ಡಾಯವಾಗಿ ಪಾಲನಾ ವರದಿ ಸಲ್ಲಿಸಲು ತಿಳಿಸುವುದು ಹಾಗೂ ಸದಸ್ಯ ಕಾರ್ಯದರ್ಶಿಯವರು ಈ ಕುರಿತು ಪೂರ್ಣ ತಯಾರಿ ಮಾಡಿಕೊಳ್ಳುವುದು.

## ತಾಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿ

| ಕ್ರಮ ಸಂಖ್ಯೆ | ಹುದ್ದೆ | ಪದನಾಮ |
|---|---|---|
| 1 | ತಹಶೀಲ್ದಾರರು ಮತ್ತು ತಾಲೂಕು ದಂಡಾಧಿಕಾರಿಗಳು | ಅಧ್ಯಕ್ಷರು |
| 2 | ಕಾರ್ಯನಿರ್ವಾಹಣಾಧಿಕಾರಿಗಳು, ತಾಲೂಕು ಪಂಚಾಯತು | ಉಪಾಧ್ಯಕ್ಷರು |
| 3 | ವೃತ್ತ ಪೊಲೀಸ್ ನಿರೀಕ್ಷಕರು, ಪೊಲೀಸು ಇಲಾಖೆ | ಸದಸ್ಯರು |
| 4 | ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ | ಸದಸ್ಯರು |
| 5<br>6 | ತಾಲೂಕು ವೈದ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>ತಾಲೂಕು ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು<br>ಸದಸ್ಯರು |
| 7 | ತಾಲೂಕು ಕಾರ್ಮಿಕ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 8 | ತಾಲೂಕು ಪ್ರತಿನಿಧಿ, ತಾಲೂಕು ಪಂಚಾಯತು ಅಧ್ಯಕ್ಷರು | ಸದಸ್ಯರು |
| 9 | ತಾಲೂಕು ಪಂಚಾಯತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 10 | ಮುನ್ಸಿಪಾಲಿಟಿ/ಪಟ್ಟಣ ಪಂಚಾಯತಿನ ಓರ್ವ ಮಹಿಳಾ ಸದಸ್ಯರು | ಸದಸ್ಯರು |
| 11 | ತಾಲೂಕು ಮಟ್ಟದ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು | ಸದಸ್ಯರು |
| 12 | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಓರ್ವ ಸದಸ್ಯರು | ಸದಸ್ಯರು |
| 13 | ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ |

ತಾಲೂಕು ಮಟ್ಟದ ಮಕ್ಕಳಾ ರಕ್ಷಣಾ ಸಮಿತಿಯು ಎಲ್ಲಾ ಗ್ರಾಮ ಮಟ್ಟದ ರಕ್ಷಣಾ ಸಮಿತಿಯಿಂದ ವರದಿ ಬಂದಿರುವ ಕುರಿತು ಸದಸ್ಯ ಕಾರ್ಯದರ್ಶಿಗಳು ಖಚಿತಪಡಿಸಿಕೊಳ್ಳುವುದು ಹಾಗೂ ವಿಶೇಷ ಅಂಶಗಳ ಕುರಿತು ಚರ್ಚಿಸಿ ಸೂಕ್ತ ಮಾರ್ಗದರ್ಶನವನ್ನು ಗ್ರಾಮ ಮಟ್ಟದಲ್ಲಿ ಸಮಿತಿಗೆ ನೀಡುವುದು. ಗ್ರಾಮ ಮಟ್ಟದಲ್ಲಿ ಸಮಸ್ಯೆ ಪರಿಹಾರವಾಗದಿದ್ದಲ್ಲಿ/ ಹಣಕಾಸಿನ ಅಗತ್ಯತೆ ಇದ್ದಲ್ಲಿ ತಾಲೂಕು ಮಟ್ಟದ ಸಮಿತಿಯಲ್ಲಿ ಚರ್ಚಿಸಿ ತಾಲೂಕು ಪಂಚಾಯತಿನಲ್ಲಿ ಅಗತ್ಯ ಕ್ರಿಯಾ ಯೋಜನೆ

ರೂಪಿಸುವುದು. ಪ್ರತೀ 3 ತಿಂಗಳಿಗೊಮ್ಮೆ ನಡೆದ ಸಭೆಯ ವರದಿಯನ್ನು ಹಾಗೂ ವಿಶೇಷ ಅಂಶಗಳನ್ನು ಜಿಲ್ಲಾ ಮಟ್ಟದ ರಕ್ಷಣಾ ಸಮಿತಿಗೆ ಕಡ್ಡಾಯವಾಗಿ ಸಲ್ಲಿಸುವುದು.

## ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳು

| ಕ್ರಮ ಸಂಖ್ಯೆ | ಹುದ್ದೆ | ಪದನಾಮ |
|---|---|---|
| 1 | ಗ್ರಾಮ ಪಂಚಾಯತು ಅಧ್ಯಕ್ಷರು | ಅಧ್ಯಕ್ಷರು |
| 2 | ಪಂಚಾಯತು ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| 3 | ಪೊಲೀಸು ಸಿಬ್ಬಂದಿ, ಪೊಲೀಸು ಇಲಾಖೆ (ಆರಕ್ಷಕ ಠಾಣಾ ವ್ಯಾಪ್ತಿ) | ಸದಸ್ಯರು |
| 4 | ಗ್ರಾಮ ಪಂಚಾಯತ್‌ನ ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರು, ಎಸ್.ಡಿ.ಎಮ್.ಸಿ. ಅಧ್ಯಕ್ಷರು | ಸದಸ್ಯರು |
| 5 | ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು | ಸದಸ್ಯರು |
| 6<br>7 | ಗ್ರಾಮಕ್ಕೆ ಎರಡರಂತೆ ಸ್ತ್ರೀ ಶಕ್ತಿ/ ಸ್ವ ಸಹಾಯ ಸಂಘದ ಪ್ರತಿನಿಧಿಗಳು<br>ಗ್ರಾಮ ಪಂಚಾಯತ್‌ನ ಇಬ್ಬರು ಮಹಿಳಾ ಸದಸ್ಯರು | ಸದಸ್ಯರು<br>ಸದಸ್ಯರು |
| 8<br>9 | ಅಂಗನವಾಡಿ ಮೇಲ್ವಿಚಾರಕಿಯರು<br>ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು | ಸದಸ್ಯರು<br>ಸದಸ್ಯರು |
| 10 | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಒಬ್ಬ ಸದಸ್ಯರು | ಸದಸ್ಯರು |
| 11 | ವಿದ್ಯಾರ್ಥಿಗಳ ವಸತಿ ನಿಲಯಗಳ ವಾರ್ಡನ್‌ಗಳು | ಸದಸ್ಯರು |
| 12 | ಶೇ. 60 ರಷ್ಟು ಮಕ್ಕಳ ಪ್ರತಿನಿಧಿಗಳು | |

## ಕಾರ್ಯಚಟುವಟಿಕೆಗಳು:

1. ಪಂಚಾಯತ್‌ರಾಜ್ ಅಧಿನಿಯಮ 1993ರಂತೆ ಅಧ್ಯಾಯ 4 ಪರಿಚ್ಛೇದ–8 ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ವಯಸ್ಸಿಗನುಗುಣವಾಗಿ ಅಂಗನವಾಡಿ, ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆಗಳು ಕಡ್ಡಾಯವಾಗಿ ಶಿಕ್ಷಣವಾಹಿನಿಗೆ ಬಂದಿರುವುದನ್ನು ಖಚಿತಪಡಿಸಿಕೊಳ್ಳುವುದು. ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ವಯಸ್ಸಿಗನುಗುಣವಾಗಿ ಅಂಗನವಾಡಿ, ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪೌಢ ಶಾಲೆಗಳು ಕಡ್ಡಾಯವಾಗಿ ಶಿಕ್ಷಣ ವಾಹಿನಿಗೆ ಬಂದಿರುವುದನ್ನು ಖಚಿತಪಡಿಸಿಕೊಳ್ಳುವುದು.

2. ಜನನ, ಮರಣ, ವಿವಾಹ ನೋಂದಾವಣೆ ಕಡ್ಡಾಯವಾಗಿ ನಡೆಯುವ ಬಗ್ಗೆ ಕ್ರಮ ಕೈಗೊಳ್ಳುವುದು. ತಮ್ಮ ಪಂಚಾಯತ್‌ನಲ್ಲಿ ಮಕ್ಕಳಿಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳನ್ನು ಫಲಕಗಳ ಮೂಲಕ ಬಿತ್ತರಿಸುವುದು.

3. ಎಲ್ಲಾ ಶಾಲೆಗಳಲ್ಲಿ (ಎಸ್.ಡಿ.ಎಮ್.ಸಿ) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಕೆಲಸ ಮಾಡುವಂತೆ ಮಾಡಿ, ಅದು ಪ್ರತಿ ತಿಂಗಳ ಸಭೆ ಸೇರಿ ಶಾಲೆಯ ಮಕ್ಕಳ ಸಮಸ್ಯೆಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಮಾಡುವುದು. ಪ್ರತೀ ಶಾಲೆಯಲ್ಲಿ ದೂರು ಪೆಟ್ಟಿಗೆಯನ್ನು (ಸಲಹಾ) "ಆಪ್ತ" ಪೆಟ್ಟಿಗೆಯನ್ನು ಇಡುವ ವ್ಯವಸ್ಥೆ ಮಾಡುವುದು. ಅದನ್ನು ಪ್ರತೀ ದಿನ ವಲೇವಾರಿ ಮಾಡುವುದು. ಸಮಸ್ಯೆಗಳಿದ್ದಲ್ಲಿ ಎಸ್.ಡಿ.ಎಮ್.ಸಿ. ಗಮನಕ್ಕೆ ತರುವುದು.



4. ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಮ ಸಭೆಯನ್ನು ಕಡ್ಡಾಯವಾಗಿ ವ್ಯವಸ್ಥಿತವಾಗಿ ಆಯೋಜಿಸುವುದು. ಪಂಚಾಯ್ತಿ ವತಿಯಿಂದ ಜರುಗುವ ಸಾಮಾನ್ಯ ಸಭೆ, ವಾಡ ಸಭೆ, ಗ್ರಾಮ ಸಭೆಗಳಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಕುರಿತು ಚರ್ಚಿಸುವುದು. ಮಕ್ಕಳಿಂದ ಬರುವ ಬೇಡಿಕೆ ಪೂರೈಸಲು (ಶೌಚಾಲಯ, ಕುಡಿಯುವ ನೀರು) ಕ್ರಿಯಾ ಯೋಜನೆ ಮಾಡಿ ಕ್ರಮ ಕೈಗೊಳ್ಳುವುದು.



5. ಮಕ್ಕಳ ರಕ್ಷಣಾ ಸಮಿತಿಯ ಮಾಸಿಕ ಸಭೆಯಲ್ಲಿ ಎಲ್ಲಾ ಅಂಗನವಾಡಿ ಮತ್ತು ಬಾಲವಿಕಾಸ ಸಮಿತಿಯ ಬಗ್ಗೆ ಚರ್ಚಿಸಿ ಬಾಲ ವಿಕಾಸ ಸಮಿತಿ ರಚಿಸಿ ಸಭೆ ಸೇರುವಂತೆ, ನೋಡಿಕೊಳ್ಳುವುದು. ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯ ಉದ್ದೇಶದಂತೆ, ಅಂಗನವಾಡಿ ಸೇವೆಗಳು ಉತ್ತಮವಾಗಿ ಕಾರ್ಯರೂಪಕ್ಕೆ ಬರುವಂತೆ ಮಾಡುವುದು.

6. ಗ್ರಾಮ ಪಂಚಯುತಿ ವ್ಯಾಪ್ತಿಯ ಪ್ರತಿ ಶಾಲೆಯಲ್ಲಿ ಶಾಲಾ ಸಂಸತ್ತು, School parliament ಹಾಗೂ "ಮಕ್ಕಳ ಹಕ್ಕುಗಳ ಕ್ಲಬ್"ಗಳನ್ನು ರಚಿಸಿ ಆ ಮೂಲಕ ಎಲ್ಲಾ ಶಾಲಾ ಚಟುವಟಿಕೆಗಳು ಕ್ಲಬ್ ಮುಖಾಂತರ ನಡೆಸಿಕೊಂಡು ಹೋಗುವಂತೆ ಮಾಡುವುದು. ಶಾಲೆಯಲ್ಲಿ ನಡೆಯುವ ಎಲ್ಲಾ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ಮಕ್ಕಳಿಂದ ಕೇಂದ್ರೀಕೃತವಾಗುವಂತೆ ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಅವರಿಗೆ ಇಷ್ಟವಾಗುವಂತೆ ಕ್ರಮ ಕೈಗೊಳ್ಳುವುದು.



7. ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳು ಕನಿಷ್ಟ 10ನೇ ತರಗತಿ ತನಕವಾದರೂ ಶಿಕ್ಷಣ ಪಡೆದುಕೊಳ್ಳುವಂತೆ ಮಾಡುವುದು. ಪಂಚಾಯತಿಗಳಲ್ಲಿ ಅಭಿವೃದ್ಧಿ ಪರ ಯೋಜನೆಗಳು ಅಗತ್ಯವಿರುವ ಕುಟುಂಬಗಳಿಗೆ ಮತ್ತು ಬಾಲ ಕಾರ್ಮಿಕ ಮಕ್ಕಳ ಕುಟುಂಬಗಳಿಗೆ ನೀಡಿ ಆ ಮಕ್ಕಳು ಶಾಲೆಗೆ ಬರುವಂತೆ ಮಾಡುವುದು. ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ 18 ವರ್ಷದೊಳಗಿನ ಎಲ್ಲಾ



ಮಕ್ಕಳು ಶಿಕ್ಷಣದ ಮುಖ್ಯ ವಾಹಿನಿಯಲ್ಲಿ ಇರುವಂತೆ ಮಾಡಲು ಯೋಜನೆಗಳನ್ನು ರೂಪಿಸುವುದು.

8. ಶಾಲೆಗಳಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳು ಇರುವಂತೆ ಮಾಡಿ ಕುಡಿಯುವ ನೀರು, ಶೌಚಾಲಯ, ಶಿಕ್ಷಕರು (ಸಾಕಷ್ಟು ಕೊಠಡಿ, ಪೀಠೋಪಕರಣಗಳು, ಗ್ರಂಥಾಲಯ, ಮೈದಾನ, ಕಲಿಕಾ ಸಾಮಾಗ್ರಿ, ವಿಜ್ಞಾನ ಉಪಕರಣ ಇತ್ಯಾದಿ) ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸುವುದು.

9. ತನ್ನ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟ ಶಾಲೆ ಬಿಟ್ಟ, ದುಡಿಯುವ ಮಕ್ಕಳನ್ನು ಗುರುತಿಸಿ ಅವರ ಪೋಷಕರಿಗೆ, ಮಾಲಿಕರಿಗೆ, ತಿಳುವಳಿಕೆ ನೀಡಿ ಮಕ್ಕಳು ಶಾಲೆಗೆ ಬರುವಂತೆ ಮಾಡುವುದು, ತಪ್ಪಿದಲ್ಲಿ ಮಾಲಿಕರ, ಪೋಷಕರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು.

10. ಸಂಪೂರ್ಣ "ಬಾಲಕಾರ್ಮಿಕ ಮುಕ್ತ" ಮತ್ತು ಬಾಲ್ಯ ವಿವಾಹ ಮುಕ್ತ ಪಂಚಾಯುತಿಯನ್ನಾಗಿ ಮಾಡಲು ವಿವಿಧ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಮಕ್ಕಳ ಹಕ್ಕುಗಳ ಕುರಿತು ನಿರಂತರವಾಗಿ ಸಾರ್ವಜನಿಕರಿಗೆ ಮಾಹಿತಿ ನೀಡುವುದು. 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮತ್ತು 21 ವರ್ಷದೊಳಗಿನ ಗಂಡು ಮಕ್ಕಳಿಗೆ ಬಾಲ್ಯ ವಿವಾಹಗಳು ಆಗದಂತೆ ಕ್ರಮ ಕೈಗೊಳ್ಳುವುದು.

11. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಯಾವುದೇ ಕುಟುಂಬಗಳು ವಲಸೆ ಹೋಗದಂತೆ ನೋಡಿಕೊಳ್ಳುವುದು ಹಾಗೂ ಮಹಿಳೆಯರ ಮಕ್ಕಳ ಸಾಗಾಣಿಕೆ ಮತ್ತು ಮಾರಾಟದಂತಹ ಪಿಡುಗನ್ನು ತಡೆಯಲು ಕ್ರಮ ಕೈಗೊಳ್ಳುವುದು.

12. ಸಮಿತಿಯ ಎಲ್ಲಾ ಸದಸ್ಯರು ಕ್ರಿಯಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಂಡು ಮಕ್ಕಳ ರಕ್ಷಣೆ ಮತ್ತು ಶಿಕ್ಷಣಕ್ಕೆ ಸಹಕರಿಸುವುದು. ಈ ಸಮಿತಿಯು ತಿಂಗಳಿಗೊಮ್ಮೆ ನಡೆಯಬೇಕು ಮತ್ತು ಪ್ರತಿ ತಿಂಗಳಿಗೊಮ್ಮೆ ನಡೆಸಿರುವ ಕೆಲಸದ ಬಗ್ಗೆ ಮೌಲ್ಯಮಾಪನ ಮಾಡುವುದು.

13. ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ–2009 ಪ್ರಕಾರ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು ಮತ್ತು ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯಿದೆ–2000 ಮತ್ತು ತಿದ್ದುಪಡಿ 2015ರ ಪ್ರಕಾರ ಅಗತ್ಯವಿರುವ ಮಕ್ಕಳಿಗೆ ಪೋಷಣೆ ರಕ್ಷಣೆ ದೊರಕಿಸುವುದು.

14. ಅನಾಥ ಮಕ್ಕಳನ್ನು ಗುರುತಿಸಿ, ಅವರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು ಹಾಗೂ ಭಿಕ್ಷಾಟನೆಯಲ್ಲಿ ತೊಡಗುವ ಮಕ್ಕಳನ್ನು ಪುನರ್ವಸತಿ ಕೇಂದ್ರಕ್ಕೆ ದಾಖಲಿಸಬೇಕು.

15. ಮಕ್ಕಳ ರಕ್ಷಣಾ ಸಮಿತಿಯ ಅಧ್ಯಕ್ಷರು, ಗ್ರಾಮ ಪಂಚಾಯತು ವ್ಯಾಪ್ತಿಯಲ್ಲಿ ಬರುವ, ವಿದ್ಯಾರ್ಥಿಗಳ ವಸತಿನಿಲಯಗಳಿಗೆ–ತಿಂಗಳಿಗೊಮ್ಮೆ ಭೇಟಿ ನೀಡಿ, ಅಲ್ಲಿಯ ಮೂಲಭೂತ ಸೌಕರ್ಯಗಳ ಲಭ್ಯತೆ, ಕೊರತೆಯ ಅಂಶಗಳು (ಕುಡಿಯುವ ನೀರು, ಶೌಚಾಲಯ, ಬೆಳಕಿನ ವ್ಯವಸ್ಥೆ, ಸ್ವಚ್ಛತೆ) ಬಗ್ಗೆ ಗ್ರಾಮ ಪಂಚಾಯತ್‌ನಲ್ಲಿ ಚರ್ಚಿಸಿ ಸಂಬಂಧಿಸಿದ ಇಲಾಖೆಗೆ ವರದಿ ಮಾಡುವುದು.

16. ವಿಶೇಷ ಅಗತ್ಯತೆ ಹೊಂದಿರುವ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿ– ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

17. ಗ್ರಾಮ ರಕ್ಷಣಾ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ನಡೆದ ಸಭೆಯ ನಡವಳಿ ಮತ್ತು ಪಾಲನಾ ವರದಿಯನ್ನು ತಾಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿಗೆ ಕಡ್ಡಾಯವಾಗಿ ಸಲ್ಲಿಸುವುದು.

## ಮಕ್ಕಳ ರಕ್ಷಣಾ ಸಮಿತಿ ಸೂಚ್ಯಂಕ

**ಪಂಚಾಯತಿನ ಹೆಸರು :**

**ಮೌಲ್ಯಮಾಪನದ ಅವಧಿ:**

| ಕ್ರಮ ಸಂಖ್ಯೆ | ಸೂಚ್ಯಂಕ | ಉತ್ತಮ (4/2) | ತೃಪ್ತಿಕರ (1) | ಅತೃಪ್ತಿಕರ (0) |
|---|---|---|---|---|
| 1 | ನಡೆದ ತ್ರೈಮಾಸಿಕ ಸಭೆಗಳು<br>• ಕಳೆದ ಆರು ತಿಂಗಳಲ್ಲಿ 6 ಸಭೆಗಳು ನಡೆದಿದೆಯೇ? 2<br>• ಒಂದು ಸಭೆಗಳು ನಡೆದಿದೆಯೇ? 1<br>• ಯಾವುದೇ ಸಭೆಗಳು ನಡೆಯುವುದುದಿಲ್ಲ 0 | 2 | 1 | 0 |
| 2 | ಸಭೆಗಳ ಹಾಜರಾತಿ<br>• 70%ಕ್ಕಿಂತ ಹೆಚ್ಚು 2<br>• 50%–90% ರಷ್ಟು–1<br>• 49% ಅಥವಾ ಅದಕ್ಕಿಂತ ಕೆಳಗೆ | 2 | 1 | 0 |
| 3 | ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣಾ ವ್ಯವಸ್ಥೆಗಳು ಬಗ್ಗೆ | 4 | 1 | 0 |

| | | | | |
|---|---|---|---|---|
| | ಅರಿವು ಮೂಡಿಸಲಾಗಿದೆಯೇ?<br>• 3 ಅಥವಾ ಹೆಚ್ಚಿನ ಚಟುವಟಿಕೆಗಳು ಕಳೆದ 6 ತಿಂಗಳಲ್ಲಿ ನಡೆದಿದೆಯೇ? –4<br>• ಒಂದು ಅಥವಾ 2 ಚಟುವಟಿಕೆಗಳು ಕಳೆದ 6 ತಿಂಗಳಲ್ಲಿ ನಡೆದಿದೆಯೇ 1<br>• ಯಾವುದೇ ಚಟುವಟಿಕೆಗಳು ನಡೆದಿಲ್ಲ.0 | | | |
| **4** | ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ಗುರುತಿಸುವುದು ಮತ್ತು ಪರಿಹಾರವನ್ನು ಕಂಡುಕೊಳ್ಳ ಲಾಗುತ್ತಿದೆಯೇ?<br>• ಪ್ರಕರಣವನ್ನು ಗುರುತಿಸಿ ಪರಿಹಾರ ನೀಡಲಾಗಿದೆ– 2<br>• ಪ್ರಕರಣವನ್ನು ಗುರುತಿಸಲಾಗಿದೆ ಮತ್ತು ಪರಿಹಾರ ಸಿಕ್ಕಿಲ್ಲ. 1<br>• ಯಾವುದೇ ಪ್ರಕರಣವನ್ನು ಗುರುತಿಸಿಲ್ಲ. 0 | 2 | 1 | 0 |
| **5** | ಪ್ರಕರಣವನ್ನು ಮೇಲಾಧಿಕಾರಿಯವರಲ್ಲಿ ದಾಖಲು ಮಾಡಲಾಗುತ್ತಿದೆಯೇ?<br>• ಎಲ್ಲಾ ಪ್ರಕರಣವನ್ನು ಗುರುತಿಸಿ ಸಮಯಕ್ಕೆ ಸರಿಯಾಗಿ ದಾಖಲೆ ಮಾಡಿ ಅನುಸರಣೆ ಮಾಡಲಾಗಿದೆಯೇ? 4<br>• ಕೆಲವು ಪ್ರಕರಣವನ್ನು ಗುರುತಿಸಿ ದಾಖಲಾಗಿದೆ ಅಥವಾ ತಡವಾಗಿ ದಾಖಲಾಗಿದೆ ಆದರೆ ಅನುಸರಣೆ ಮಾತ್ರ ದಾಖಲಾದ ನಂತರ ಆಗಿರುತ್ತದೆಯೇ? 1<br>• ಗುರುತಿಸಿದ್ದು ದಾಖಲಾಗಿರುವುದಿಲ್ಲ – 0 | 4 | 1 | 0 |
| **6** | ನಿಮ್ಮ ಪಂಚಾಯತು ವ್ಯಾಪ್ತಿಯಲ್ಲಿ ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದಾಖಲಾದ ಪ್ರಕರಣವನ್ನು ಇತ್ಯರ್ಥ ಪಡಿಸಲಾಗಿದೆಯೇ?<br>• ಯಾವುದೇ ಪ್ರಕರಣ ದಾಖಲಾಗಿಲ್ಲ | 2 | 1 | 0 |

| | | | | |
|---|---|---|---|---|
| | ಅಥವಾ ಎಲ್ಲಾ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ–2<br>• ಪ್ರಕರಣಗಳ ಇತ್ಯರ್ಥ ಪ್ರಕ್ರಿಯೆಯಲ್ಲಿದೆ.–1<br>• ಪ್ರಕರಣಗಳು ದಾಖಲಾಗಿವೆ ಅದರೆ ಯಾವುದೇ ಕ್ರಮತೆಗೆದುಕೊಂಡಿಲ್ಲ –0 | | | |
| **7** | ಮೇಲ್ವಿಚಾರಣಾ ಬೇಟಿಗಳು ಹಾಸ್ಟೆಲ್‌ಗಳು, ಶಾಲೆಗಳು, ಅಂಗನವಾಡಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಆಗುತ್ತಿದೆಯೇ?<br>• ಕಳೆದ ಅರ್ಧವಾರ್ಷಿಕದಲ್ಲಿ 2 ಭೇಟಿಗಳು ಅನೇಕ ಸಂಸ್ಥೆಗಳಿಗೆ ಆಗಿದೆಯೇ? 2<br>• ಒಂದು ಭೇಟಿ ನಡೆಸಲಾಗಿದೆಯೇ–1<br>• ಯಾವುದೇ ಬೇಟಿಯಾಗಿಲ್ಲ 0 | 2 | 1 | 0 |
| **8** | ಮಕ್ಕಳ ರಕ್ಷಣಾ ಅಧಿಕಾರಿಗಳು ಸಭೆಗಳಲ್ಲಿ ಭಾಗವಹಿಸುತ್ತಾರೆಯೇ?<br>• ಮಕ್ಕಳ ರಕ್ಷಣಾ ಅಧಿಕಾರಿಗಳು 2 ಸಭೆಗಳಲ್ಲಿ ಕನಿಷ್ಠ ಒಂದು ಸಭೆಗಳಲ್ಲಿ ಭಾಗವಹಿಸುತ್ತಾರೆಯೇ?–2<br>• ಮಕ್ಕಳ ರಕ್ಷಣಾ ಅಧಿಕಾರಿಗಳು ಸಭೆಗಳಲ್ಲದೇ ಒಂದು ಭೇಟಿಯನ್ನು ಮಾಡುತ್ತಾರೆಯೇ? ಭಾಗವಹಿಸುತ್ತಾರೆಯೇ?–1<br>• ಮಕ್ಕಳ ರಕ್ಷಣಾ ಅಧಿಕಾರಿಯು ಮಕ್ಕಳ ರಕ್ಷಣಾ ಸಮಿತಿಯ ಯಾವುದೇ ಸಭೆಗಳಲ್ಲಿ ಭಾಗವಹಿಸಿಲ್ಲ – 0 | 2 | 1 | 0 |
| **9** | ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಅಂಕಿ ಅಂಶಗಳು ಅದರಲ್ಲೂ ಹೆಚ್.ಐ.ವಿ, ಭಿನ್ನ ಸಾಮರ್ಥ್ಯ, ಅನಾಥ, ಬಾಲಕಾರ್ಮಿಕ ಇತ್ಯಾದಿ<br>• ಅಂಕಿ ಅಂಶಗಳು ಇವೆ ಮತ್ತು ಇದನ್ನು ಚಟುವಟಿಕೆಗಳನ್ನು ಯೋಜಿಸುವಾಗ ಉಪಯೋಗಿಸುತ್ತಾರೆಯೇ? ಅಥವಾ ಇದು ಬೇರೆ ಇಲಾಖೆಗಳಿಗೆ ಸಲಹೆ ಕೊಡುವಲ್ಲಿ ಪ್ರಯೋಜನವಾಗುತ್ತದೆಯೇ? –2 | 2 | 1 | 0 |

| | | | | |
|---|---|---|---|---|
| | • ಅಂಕಿ ಅಂಶಗಳು ಇವೆ ಆದರೆ ನವೀಕರಿಸಿಲ್ಲ ಅಥವಾ ಇದು ಯಾವುದೇ ಯೋಜನೆಗೆ/ ಶಿಫಾರಸ್ಸು ಪ್ರಯೋಜನವಾಗಲಿಲ್ಲ<br>• ಯಾವುದೇ ಅಂಕಿಅಂಶಗಳು ಇಲ್ಲ–1 | | | |
| **10** | ಮಕ್ಕಳ ರಕ್ಷಣಾ ಸಮಿತಿಗಳು ಮೇಲಿನ 9 ಸೂಚ್ಯಂಕಗಳನ್ನು ಪರಿಣಾಮಕಾರಿಯಾಗಿ ಸ್ವಮೌಲ್ಯಮಾಪನ ಮಾಡುತ್ತಾರೆಯೇ?<br>• ಎಲ್ಲಾ ಸೂಚ್ಯಂಕಗಳು ಮತ್ತು ವಸ್ತುನಿಷ್ಠವಾಗಿ ಚರ್ಚಿಸಲಾಗುತ್ತಿದೆಯೇ?–2<br>• ಕೆಲವು ಸೂಚ್ಯಂಕಗಳು ತುಂಬಾ ಸದಸ್ಯರಿರುವಾಗ ಆಳವಾಗಿ ಚರ್ಚಿಸುವುದಿಲ್ಲ – 1<br>• ಎಲ್ಲಾ ಸೂಚ್ಯಂಕಗಳನ್ನು ಬಳಸಲಾಗುತ್ತಿಲ್ಲ ಅಥವಾ ಕೆಲವು ಸೂಚ್ಯಂಕಗಳನ್ನು ಮಾತ್ರ ಬಳಸಲಾಗುತ್ತಿದೆ – 0 | 2 | 1 | 0 |

ಮೌಲ್ಯಮಾಪನದ ದಿನಾಂಕ:

ಗರಿಷ್ಠ ಸಾಧ್ಯತ ಅಂಕ

ಮೌಲ್ಯಮಾಪನದಲ್ಲಿ ಗಳಿಸಿದ ಒಟ್ಟು ಅಂಕ =


| **ಕ್ರಮ ಸಂಖ್ಯೆ** | **ಗ್ರೇಡ್** | **ಅಂಕ** | **ಮೌಲ್ಯಮಾಪನದ ಪ್ರಕಾರ ಗಳಿಸಿದ ಸ್ಥಾನ** |
|---|---|---|---|
| 1 | ಉತ್ತಮ | 16–24 | |
| 2 | ತೃಪ್ತಿಕರ | 9–15 | |
| 3 | ಅತೃಪ್ತಿಕರ | 0–8 | |

# 2017–2020 ಅವಧಿಯಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕಾಗಿ ಅನುಷ್ಠಾನಿಸಿದ ಯೋಜನೆಯ ತ್ರೈವಾರ್ಷಿಕ ಪ್ರಕ್ರಿಯೆ ಮತ್ತು ಪರಿಣಾಮಕಾರಿ ಬದಲಾವಣೆಗಳ ವರದಿ

2017–2020 ಪಡಿ ಯೋಜನೆಯು ಮಗುಸ್ನೇಹಿ ಸಮುದಾಯದ ಮೂಲಕ ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ತರುವ ನಿಟ್ಟಿನಲ್ಲಿ ಕಾರ್ಯಾನುಷ್ಠಾನಗೊಂಡಿರುತ್ತದೆ. ಯೋಜನೆಯು ತಳಮಟ್ಟದಿಂದ ಮೇಲ್ಮಟ್ಟದವರೆಗೂ ಸ್ಟೇಕ್‌ಹೋಲ್ಡರ್ಸ್‌ಗಳ ಜೊತೆ ಜೊತೆಯಾಗಿ ನಡೆಸುವ ಮೂಲಕ ಬದಲಾವಣೆಯನ್ನು ತರಲು ಮಾಡಿದ ಯೋಜನೆಯನ್ವಯ ವಕಾಲತು ನಡೆಸಿದ ಪ್ರಯತ್ನಗಳು ಹಾಗೂ ಈ ಯೋಜನೆಯ ಅನುಷ್ಠಾನಕ್ಕಾಗಿ ತಯಾರಿಸಲ್ಪಟ್ಟ ಸೂಚ್ಯಂಕಗಳು ಮತ್ತು ಉದ್ದೇಶಿತ ಪರಿಣಾಮಗಳನ್ನು ಅಳೆಯುವ ತಾಂತ್ರಿಕ ರೀತಿಯನ್ನು ವಿವಿಧ ನೆಲೆಯಲ್ಲಿ ಉಪಯೋಗಿಸಲಾಗಿದೆ. ಕಾರ್ಯಕ್ಷೇತ್ರದಲ್ಲಿ ನಿರಂತರ ಮೇಲ್ವಿಚಾರಣೆಗಾಗಿ ನಡೆಸಿದ ಆವರ್ತಗಳು:




ಹಾಗೆಯೇ ಬದಲಾವಣೆಯನ್ನು ಯೋಜಿತ ಫಲಿತಾಂಶಗಳನ್ನು ಗುರುತಿಸಲು ಉಪಯೋಗಿಸಿದ ತಾಂತ್ರಿಕ ಸಾಧನ:





2017–2020 ಅವಧಿಯ ಯೋಜನೆಯಲ್ಲಿ ಮುಖ್ಯವಾಗಿ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೌಲ್ಯಯುತ ಶಿಕ್ಷಣಕ್ಕಾಗಿ ಹಮ್ಮಿಕೊಂಡಂತಹ ಚಟುವಟಿಕೆಗಳು ಸಮ ಸಮಾಜ ನಿರ್ಮಾಣದೆಡೆಗೆ ಸಾಗುವಂತೆ ಪ್ರೇರಣೆಯಾಗಿದೆ. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ದ.ಕ. ಜಿಲ್ಲೆ ಹಾಗೂ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ, ಉಡುಪಿ ಇವುಗಳ ತಾಲೂಕು ಘಟಕಗಳನ್ನು ಸೇರಿಸಿಕೊಂಡು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಹಾಗೂ ಮಗುಸ್ನೇಹಿ ಸಮುದಾಯದ ಪರಿಕಲ್ಪನೆಯಲ್ಲಿ ಇನ್ನಷ್ಟು ಆಳವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಈ ಯೋಜನೆಯ ಆರಂಭ, ಚಟುವಟಿಕೆಗಳು, ನಿರಂತರ ಅನುಸರಣೆ ಮತ್ತು ಯಶಸ್ಸುಗಳು ಹಾಗೂ ಎದುರಿಸಿರುವ ಸವಾಲುಗಳನ್ನು ವರದಿಯ ರೂಪದಲ್ಲಿ ದಾಖಲೆ ಮಾಡುತ್ತಿದ್ದೇವೆ.

**ಪಡಿ–ವೆಲೊರೆಡ್ ತನ್ನ 2017–2020ರ ಯೋಜನೆಯಲ್ಲಿ ಕರ್ನಾಟಕ ರಾಜ್ಯದ ಆಯ್ದ ಜಿಲ್ಲೆಗಳು ಹಾಗೂ ತಾಲೂಕುಗಳು:–**



ಜಿಲ್ಲೆಗಳ ತಾಲೂಕುಗಳಲ್ಲಿ ಆಯ್ದುಕೊಂಡ ಶೈಕ್ಷಣಿಕ ಕ್ಲಸ್ಟರ್‌ಗಳು, ಆ ಕ್ಲಸ್ಟರ್‌ನ ಶಾಲೆಗಳು:–




ಶಿಕ್ಷಣ ಹಕ್ಕು ಕಾಯ್ದೆಯನ್ವಯ, ಸುಸ್ಥಿರ ಅಭಿವೃದ್ಧಿ ಯೋಜನೆ 2030 ಅಲ್ಲದೆ ಮಕ್ಕಳ ಹಕ್ಕುಗಳು ಮತ್ತು ಸಂರಕ್ಷಣೆಯ ನೆಲೆಯಲ್ಲಿ ಅನೇಕ ವಿಚಾರಗಳ ಕೊರತೆಗಳನ್ನು ಈ ಆಯ್ದ ಶಾಲೆಗಳಲ್ಲಿ ಹಾಗೂ ಪಂಚಾಯತ್‌ಗಳ ನೆಲೆಯಲ್ಲಿ ಕಂಡುಬಂದಿರುವುದನ್ನು ಗಮನಸಲಾಯಿತು.

1. ಶಾಲಾ ಅಭಿವೃದ್ಧಿಯಲ್ಲಿ ಎಸ್‌ಡಿಎಂಸಿ ಸದಸ್ಯರ ಭಾಗವಹಿಸುವಿಕೆ ಸಾಕಷ್ಟು ಇಲ್ಲದಿರುವುದು.
2. ಶಾಲಾ ಮೂಲಸೌಕರ್ಯಗಳಲ್ಲಿ ಕೊರತೆ.
3. ಶೈಕ್ಷಣಿಕ, ಸಾಮಾಜಿಕ ಹಾಗೂ ವೈಜ್ಞಾನಿಕವಾಗಿ ಶಾಲೆಯಲ್ಲಿ ಮಕ್ಕಳ ಭಾಗವಹಿಸುವಿಕೆ.
4. ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಳೀಯ ಸರಕಾರಗಳ ಭಾಗವಹಿಸುವಿಕೆ ಸಾಕಷ್ಟು ಇಲ್ಲದಿರುವುದು.
5. ಸಮುದಾಯದಲ್ಲಿ ಸರಕಾರಿ ಶಾಲೆಗಳು ಮತ್ತು ಸರಕಾರಿ ಸೌಲಭ್ಯಗಳ ಅರಿವು ಇಲ್ಲದಿರುವುದು.
6. ಸರಕಾರದ ಕಾಯಿದೆ ಕಾನೂನುಗಳ ಅನುಷ್ಠಾನದಲ್ಲಿ ವಿಫಲತೆ.

7. ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಳೀಯ, ತಾಲೂಕು, ಜಿಲ್ಲಾ ಹಾಗೂ ರಾಜ್ಯ ಸರಕಾರಗಳ ನಿಲುವು ಮತ್ತು ಅವರ ಸಹಕಾರ ಸೌಲಭ್ಯಗಳನ್ನು ಪಡೆಯುವ ಸಮರ್ಪಕ ಸಂಪರ್ಕ ವಿಧಾನಗಳನ್ನು ತಿಳಿಯದಿರುವುದು.
8. ಗ್ರಾಮ ಪಂಚಾಯತು ಶಿಕ್ಷಣ ಕ್ಷೇತ್ರದ ಬಗ್ಗೆ ಯಾವುದೇ ಹೆಚ್ಚಿನ ಕಾಳಜಿ ತೋರಿಸದಿರುವುದು.

ಹೀಗೆ ಹತ್ತು ಹಲವು ಮುಖ್ಯ ವಿಚಾರಗಳು ಶಾಲಾ ಮಕ್ಕಳಿಗೆ ಹಾಗೂ ಸಮುದಾಯದ ಮಕ್ಕಳಿಗೆ ಗುಣಮಟ್ಟದ, ಮೌಲ್ಯಾಧಾರಿತ ಶಿಕ್ಷಣ ಮತ್ತು ಜೀವನವನ್ನು ಅನುಭವಿಸುವಲ್ಲಿ ತಡೆಯಾಗಿವೆ ಅನ್ನುವುದು ಆರಂಭಿಕ ಸ್ಥಿತಿಗತಿ ಅಧ್ಯಯನದಲ್ಲಿ ಕಂಡುಕೊಳ್ಳಲಾದ ಮುಖ್ಯ ಅಂಶಗಳಾಗಿದ್ದವು.

ಈ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಹಾಗೂ ಮಕ್ಕಳ ಅಭಿವೃದ್ಧಿ ಕುರಿತಾಗಿ ಕಾರ್ಯ ನಿರ್ವಹಿಸುವ ಇಲಾಖೆಗಳೂ, ಪ್ರತಿನಿಧಿಗಳು ಸಮಾನ ಮನಸ್ಕರುಗಳೊಂದಿಗೆ ಸಮಾಲೋಚನೆಗಳನ್ನು ನಡೆಸಿ ಯೋಜನೆಯ ಕಾರ್ಯ ಪ್ರವೃತ್ತಿಗಿಳಿಯುವ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಜತೆಯಲ್ಲಿ ಸಮುದಾಯಧಾರಿತ ಶಿಕ್ಷಣ ಸಂಪನ್ಮೂಲ ಕೇಂದ್ರಗಳನ್ನು ಮುಖ್ಯ ಭಾಗೀದಾರರಾಗಿ ಮತ್ತು ಅವರನ್ನು ಬಲವರ್ಧಿಸುವ ನಿಟ್ಟಿನಲ್ಲಿ ಯೋಜನೆಯ ಜತೆಜತೆಯಲ್ಲಿ ಸೇರಿಸಿಕೊಳ್ಳಲಾಯಿತು.

| ಘಟಕ | ಕಾರ್ಯಕಾರಿ ಸಮಿತಿ | | | ಸದಸ್ಯರು | | | ಸಂಪನ್ಮೂಲ ವ್ಯಕ್ತಿಗಳು |
|---|---|---|---|---|---|---|---|
| | ಗಂ | ಹೆ | | ಗಂ | ಹೆ | | |
| ದ.ಕ.ಒಕ್ಕೂಟ | 6 | 7 | 13 | 35 | 35 | 70 | |
| ಮಂಗಳೂರು | 5 | 8 | 13 | 15 | 25 | 40 | 5 |
| ಬಂಟ್ವಾಳ | 8 | 5 | 13 | 21 | 14 | 35 | 5 |
| ಪುತ್ತೂರು | 6 | 7 | 13 | 39 | 28 | 67 | 5 |
| ಬೆಳ್ತಂಗಡಿ | 6 | 7 | 13 | 15 | 25 | 40 | 5 |
| ಸುಳ್ಯ | 7 | 6 | 13 | 24 | 32 | 56 | 5 |
| ಉಡುಪಿ ಒಕ್ಕೂಟ | 6 | 6 | 12 | 20 | 25 | 45 | |
| ಉಡುಪಿ | 6 | 6 | 12 | 34 | 20 | 54 | 5 |
| ಕಾರ್ಕಳ | 6 | 6 | 12 | 17 | 5 | 23 | 5 |
| ಕುಂದಾಪುರ | 6 | 6 | 12 | 8 | 3 | 11 | 5 |
| ಒಟ್ಟು | 62 | 64 | 126 | 228 | 212 | 440 | 40 |

ಹೀಗಾಗಿ ಯೋಜನೆಯು ಎರಡೂ ಜಿಲ್ಲೆಗಳ ಪ್ರತೀ ತಾಲೂಕುಗಳಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಹಾಗೂ ಘಟಕಗಳನ್ನು ಮುಖ್ಯ ಭಾಗೀದಾರರನ್ನಾಗಿರಿಸಿಕೊಂಡು ಸಂಬಂಧಪಟ್ಟ ಇಲಾಖೆಗಳು ಅಂದರೆ, ಶಿಕ್ಷಣ

ಇಲಾಖೆ, ಪಂಚಾಯತ್ ರಾಜ್ ಮತ್ತು ಮುನಿಸಿಪಾಲಿಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೋಲಿಸ್ ಇಲಾಖೆ, ಮಕ್ಕಳ ಕಲ್ಯಾಣ ಸಮಿತಿಗಳು, ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಅಲ್ಲದೆ ಸ್ವಯಂಸೇವಾ ಸಂಸ್ಥೆಗಳನ್ನೂ ಸೇರಿಸಿಕೊಂಡು ಸಹಭಾಗೀಯ ಒಪ್ಪಂದವನ್ನು ಮಾಡಿಕೊಂಡು, ಮುಖ್ಯ ಪರಿಕಲ್ಪನೆಯೆಡೆಗೆ ಹೆಜ್ಜೆಯನ್ನಿಡಲು ಮುಂದಾಯಿತು.

ಪಡಿ ಸಂಸ್ಥೆಯು ಯೋಜನೆಯ ಕಾರ್ಯ ಅನುಷ್ಠಾನಕ್ಕಾಗಿ ಕಾರ್ಯಕ್ರಮ ತಂಡವಾಗಿ ಒಟ್ಟು 16 ಸಿಬ್ಬಂಧಿಗಳೂ, ಆಡಳಿತ ತಂಡದಲ್ಲಿ ಒಟ್ಟು 4 ಸಿಬ್ಬಂಧಿಗಳನ್ನು ನೇಮಕ ಮಾಡಿತ್ತು. ಅಲ್ಲದೆ ಈ ಕೆಳಕಂಡಂತೆ 2 ಜಿಲ್ಲೆಗಳಲ್ಲಿ ಸಮುದಾಯಾಧಾರಿತ ಸಂಘವಾದ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಹಾಗೂ ಅವುಗಳ ಘಟಕಗಳಲ್ಲಿರುವ ಮಾನವ ಸಂಪನ್ಮೂಲಗಳನ್ನು ಜೊತೆಗೂಡಿಸಿಕೊಂಡು ಉಭಯ ಜಿಲ್ಲೆಗಳಾದ್ಯಂತ ಮಗುಸ್ನೇಹಿ ಹಾಗೂ ಮೌಲಿಕ ಶಿಕ್ಷಣದ ಜೊತೆಗೆ ಮಗುಸ್ನೇಹಿ ಸಮಾಜದ ನಿರ್ಮಾಣದೆಡೆಗೆ ತನ್ನ ದೂರದೃಷ್ಟಿಯನ್ನಿಟ್ಟುಕೊಂಡು ಕಾರ್ಯಾಚರಣೆ ಮಾಡಲಾಯಿತು.

ಸಮುದಾಯಕ್ಕೆ ತಿಳಿವಳಿಕೆ ನೀಡುವುದರ ಮೂಲಕ ಬಲಪಡಿಸುತ್ತಾ, ಸರಕಾರದ ಕಾನೂನು, ನೀತಿ ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯಾಚರಿಸಲು ಕರೆ ನೀಡುತ್ತಾ ಮಗುಸ್ನೇಹಿ ಪರಿಕಲ್ಪನೆಯನ್ನು ರಾಜ್ಯಾದ್ಯಂತ ಸಮುದಾಯಗಳಿಗೆ ತಲುಪಿಸುವ ಪ್ರಯತ್ನವನ್ನು ಈ ಯೋಜನೆಯು ಕೈಗೆತ್ತಿಕೊಂಡಿರುವುದನ್ನು ಉಲ್ಲೇಖಿಸಲು ಬಯಸುತ್ತೇವೆ.

ಗುಣಮಟ್ಟದ ಶಿಕ್ಷಣವನ್ನು ಸರಕಾರಿ ಶಾಲೆಗಳಲ್ಲಿ ಅನುಷ್ಠಾನಿಸಲಿರುವ ಮುಖ್ಯವಾಹಿನಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ. ಹೀಗಾಗಿ ಈ ಸಮಿತಿಯ ಬಲವರ್ಧನೆಯ ಮೂಲಕ ಮಾತ್ರವೇ ಸಮುದಾಯಕ್ಕೆ ತಮ್ಮೂರಿನ ಶಾಲೆಯ ಮಾಲಿಕತ್ವದ ಅನುಭವವಾಗುವುದು. ಹೀಗಾಗಬೇಕಾದರೆ ಸರಕಾರಿ ಶಾಲೆಯೊಳಗಿನ ಮುಖ್ಯ ಪ್ರಾಧಿಕಾರ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಗೆ ಸರಕಾರಿ ಸುತ್ತೋಲೆಗಳು, ಶಿಕ್ಷಣ ಹಕ್ಕು ಕಾಯಿದೆಗಳು, ಶಾಲಾಭಿವೃದ್ಧಿಯಲ್ಲಿ ಅವರ ಪಾತ್ರ ಹಾಗೂ ಜವಾಬ್ದಾರಿಗಳನ್ನು ಸರಿಯಾಗಿ ಅರ್ಥೈಸಿಕೊಂಡಾಗ ಮಾತ್ರ ಈ ಯೋಜನೆ ಯಶಸ್ವಿಯಾಗುತ್ತದೆ. ಶಾಲಾ ನೆಲೆಯಲ್ಲಿ ಕೆಳಮಟ್ಟಕ್ಕೆ ಹೋಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಸಂಪೂರ್ಣ ಪರಿವರ್ತನೆಯನ್ನು ತರಬಹುದು. ಮಾತ್ರವಲ್ಲದೆ ಗುಣಮಟ್ಟದ ಶಿಕ್ಷಣದ ಮೂಲಕ ಸಮುದಾಯವನ್ನು ಆಕರ್ಷಿಸುವ ಶಾಲೆಯಾಗಿ ಪರಿವರ್ತಿಸಬಹುದು.

ಘನ ಸರಕಾರವು ಶಿಕ್ಷಣಕ್ಕೆ ಬಹಳಷ್ಟು ಮಹತ್ವವನ್ನು ನೀಡಿ 'ಶಿಕ್ಷಣ ಹಕ್ಕು ಕಾಯಿದೆ'ಯನ್ನು ಜಾರಿಗೆ ತಂದಿದೆ. ಸರಕಾರದ ವಿಭಿನ್ನ ಇಲಾಖೆಗಳು, ಪ್ರಾಧಿಕಾರಗಳನ್ನೊಳಗೂಡಿಸಿಕೊಂಡು ಈ ಕಾಯಿದೆಯ ಸಮರ್ಪಕ ಅನುಷ್ಠಾನ ಮಾಡುವ ಉದ್ದೇಶದಿಂದ ನಿರ್ದಿಷ್ಟ ಚಟುವಟಿಕೆಗಳನ್ನು ಆಯೋಜನೆ ಮಾಡಿತು.

**ಮುಖ್ಯ ಸೂಚಕಗಳಾಗಿ:**

1. ಆಯ್ದ 52 ಶಾಲೆಗಳಲ್ಲಿ ಹಾಗೂ 15 ಪಂಚಾಯತುಗಳಲ್ಲಿ ಮಗುಸ್ನೇಹಿ ವಾತಾವರಣವನ್ನು ನಿರ್ಮಿಸುವುದು
2. ಸದೃಢ ಮಾನವೀಯ ಸಮಾಜ ನರ್ಮಾಣದ ಚಿಂತನೆಗೆ ಪೂರಕವಾಗಿ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಗಳಲ್ಲಿ ಬಹುಮುಖೀ ಪಠ್ಯಕ್ರಮಗಳನ್ನು ಅಳವಡಿಸುವುದು.
3. ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನವನ್ನು ಕರ್ನಾಟಕದ (ರಾಯಚೂರು–ಗುಲ್ಬರ್ಗ, ಬೆಂಗಳೂರು–ರಾಮನಗರ, ಮೈಸೂರು–ಉಡುಪಿ ಹಾಗೂ ದ.ಕ. ಜಿಲ್ಲೆ ಮತ್ತು ಬೆಳಗಾವಿ–ದಾರವಾಡ) 4 ಪ್ರದೇಶ ವ್ಯಾಪ್ತಿಗಳ 62 ಸರಕಾರಿ ಶಾಲೆಗಳಲ್ಲಿ ಮಾಡುವುದು.
4. ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಹಾಗೂ ಅವುಗಳ ಒಕ್ಕೂಟಗಳ ಸುಸ್ಥಿರತೆಗಾಗಿ ಆಡಳಿತಾತ್ಮಕವಾಗಿ ಸಾಮರ್ಥ್ಯವರ್ಧನೆ.
5. ಸಿಬ್ಬಂದಿ ವರ್ಗದ ಜ್ಞಾನವರ್ಧನೆ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ.

1. ಆಯ್ದ 52 ಶಾಲೆಗಳಲ್ಲಿ ಹಾಗೂ 15 ಪಂಚಾಯತುಗಳಲ್ಲಿ ಮಗುಸ್ನೇಹಿ ವಾತಾವರಣವನ್ನು ನಿರ್ಮಿಸುವುದು:

ಈ ಕೆಳಗಣ ಚಿತ್ರಣದಲ್ಲಿ ಯೋಜನಾ ವ್ಯಾಪ್ತಿಯ 6 ತಾಲೂಕುಗಳು ಅವುಗಳಲ್ಲಿ ಆಯ್ದುಕೊಂಡ ಶೈಕ್ಷಣಿಕ ಕ್ಲಸ್ಟರ್‌ಗಳು, ಕ್ಲಸ್ಟರ್ ವ್ಯಾಪ್ತಿಯಲ್ಲಿನ ಪಂಚಾಯತ್‌ಗಳು ಆ ಪ್ರತೀ ಪಂಚಾಯತ್ ವ್ಯಾಪ್ತಿಯ ಶಾಲೆಗಳು ಹೀಗೆ 15 ಪಂಚಾಯತ್‌ನಂದ ಒಟ್ಟು 52 ಶಾಲೆಗಳನ್ನು ಮಗುಸ್ನೇಹಿ ಶಾಲೆ, ಮಗುಸ್ನೇಹಿ ಪಂಚಾಯತ್ ಹಾಗೂ ಸಮುದಾಯದ ನಿರ್ಮಾಣದ ಗುರಿಯೊಂದಿಗೆ ಸಮಯಕ್ಕನುಗುಣವಾದ ಕ್ರಿಯಾ ಯೋಜನೆಗಳನ್ನು ಮಾಡುವುದರ ಮೂಲಕ ಕೈಗೆತ್ತಿಕೊಳ್ಳಲಾಗಿದೆ.

| ತಾಲೂಕು | ಕ್ಲಸ್ಟರ್ | ಪಂಚಾಯತ್ | ಸಂಖ್ಯೆ | ಶಾಲೆಗಳು |
|---|---|---|---|---|
| ಬಂಟ್ವಾಳ | ಮದ್ವ | ಕಾವಳ ಮೂಡೂರು | 1 | ಕೆದ್ದಳಿಕೆ |
| | | | 2 | ಕಾವಳಕಟ್ಟೆ |
| | | | 3 | ಕಾವಳ ಮೂಡೂರು |
| | | ಕಾವಳಪಡೂರು | 4 | ಕಾಡಬೆಟ್ಟು |
| | | | 5 | ಆಲಂಪುರಿ |
| | | | 6 | ಮದ್ವ |
| | | ನಾವೂರು | 7 | ದೇವಶ್ಯಪಡೂರು |
| | | | 8 | ಕುಂಟಲಪಲ್ಕೆ |
| ಪುತ್ತೂರು | ಹಾರಾಡಿ | ಕಬಕ | 1 | ಕಬಕ |
| | | | 2 | ಮುರ |
| | | ಕೋಡಿಪ್ಪಾಡಿ | 3 | ಕೋಡಿಪ್ಪಾಡಿ |
| | | | 4 | ಆರ್ಕ |
| | | ಬಲ್ನಾಡು | 5 | ರಾಗಿಕುಮೇರು |
| | | | 6 | ಬಲ್ನಾಡು |
| | | | 7 | ಪಡ್ನೂರು |
| ಬೆಳ್ತಂಗಡಿ | ಉಜಿರೆ | ಉಜಿರೆ | 1. | ಅತ್ತಾಜೆ |
| | | | 2. | ಗಾಂಧಿನಗರ |
| | | | 3. | ನೀರಚಿಲುಮೆ |
| | | | 4. | ಗುರಿಪಳ್ಳ |
| | | | 5. | ಬದನಾಜೆ |
| | | | 6. | ಹಳೆಪೇಟೆ |
| | | | 7. | ದೊಂಪದಲ್ಕೆ |
| | | ಬೆಳಾಲು | 8. | ಕೊಲ್ಪಾಡಿ |
| | | | 9. | ಮಾಯಬೆಳಾಲು |
| | | | 10. | ಮುಂಡತ್ತೋಡಿ |
| | | | 11. | ಪೆರಿಯಡ್ಕ |
| ಸುಳ್ಯ | ಆಲೆಟ್ಟಿ | ಉಬರಡ್ಕ ಮಿತ್ತೂರು | 1. | ಉಬರಡ್ಕ ಮಿತ್ತೂರು |
| | | | 2. | ಕೊಡಿಯಾಲ್‌ಬೈಲು |
| | | | 3. | ಅಮ್ಮೆಮಡಿಯೂರು |
| | | ಆಲೆಟ್ಟಿ | 4. | ಕೊಲ್ಚಾರು |
| | | | 5. | ಇಡಿಯಡ್ಕ |
| | | | 6. | ರಂಗತ್‌ಮಲೆ/ಆಶ್ರಮ್ ಶಾಲೆ |
| | | | 7. | ನಾಗಪಟ್ಣ |
| | | | 8. | ನಾರ್ಕೋಡು |
| | | | 9. | ಪೈಂವಿಚಾಲು |

| | | | | |
|---|---|---|---|---|
| ಕುಂದಾಪುರ | ತಲ್ಲೂರು | ತಲ್ಲೂರು | 1. | ತಲ್ಲೂರು |
| | | | 2. | ಕೋಟೆಬಾಗಿಲು |
| | | | 3. | ಉಪ್ಪಿನಕುದ್ರು |
| | | ಹಟ್ಟಿಯಂಗಡಿ | 4. | ಹಟ್ಟಿಯಮಾಗಡಿ |
| | | | 5. | ಕನ್ಯಾನ |
| | | | 6. | ಕೆಂಚನೂರು |
| | | | 7. | ಅಂದಾರುಕಟ್ಟೆ |
| | | | 8. | ಕೂಡ್ಲು |
| | | | 9. | ಸಬ್ಲಾಡಿ |
| ಕಾರ್ಕಳ | ಬೈಲೂರು | ಬೈಲೂರು | 1. | ಎಲಿಯಾಲ |
| | | | 2. | ಬೈಲೂರು ಮೈನ್ |
| | | | 3. | ಬಸ್ರಿಬೈಲೂರು |
| | | | 4. | ಮೈಂದಲ್‌ಕೆರೆ |
| | | ನೀರೆ | 5. | ನೀರೆಹೆದ್ದಾರಿ |
| | | | 6. | ಎಕ್ಕಡ್ಕ |
| | | ಎರ್ಲಪ್ಪಾಡಿ | 7. | ಕಾಂತರಗೋಳಿ |
| | | | 8. | ಎರ್ಲಪ್ಪಾಡಿ |
| **ಒಟ್ಟು** | **6 ಕ್ಲಸ್ಟರ್‌ಗಳು** | **15 ಪಂಚಾಯತ್‌ಗಳು** | **52 ಶಾಲೆಗಳು** | |

ಈ ಕಾರ್ಯಚಟುವಟಿಕೆಗಳಲ್ಲಿ ಕಾರ್ಯಕ್ರಮದ ಮುಖ್ಯ ಭಾಗಿದಾರರುಗಳಾಗಿ ಮಕ್ಕಳು, ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಶಿಕ್ಷಣ ಇಲಾಖೆ, ಪಂಚಾಯತು ಸದಸ್ಯರು, ಪಂಚಾಯತ್ ಯೋಜನಾಧಿಕಾರಿಗಳು, ಸ್ಥಳೀಯ ಸಂಘಸಂಸ್ಥೆಗಳು, ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಮತ್ತು ಅವುಗಳ ಒಕ್ಕೂಟದ ಸದಸ್ಯರುಗಳು ಜೊತೆಯಲ್ಲಿದ್ದಾರೆ.

ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಕಾರ್ಯ ಯೋಜನೆಯಡಿ ಈ ಕೆಳಕಂಡಂತೆ ಚಟುವಟಿಕೆಗಳನ್ನು ಆಯೋಜಿಸಿ ನಿರೀಕ್ಷಿತ ಫಲಿತಾಂಶವನ್ನು ಕಂಡುಕೊಳ್ಳಲು ಒಂದಷ್ಟು ಸಾಧ್ಯವಾಗಿದೆ.

- ಶಾಲಾ ಮೂಲ ಅಂಕಿ–ಅಂಶಗಳ ಅಧ್ಯಯನ.
- ಇಲಾಖೆ, ಸಮುದಾಯ ಸ್ಥಳೀಯ ಸರಕಾರದ ಜೊತೆ ಸಮಾಲೋಚನ ಸಭೆ ಮತ್ತು ವಕಾಲತು ನಡೆಸುವುದು.
- ಎಸ್.ಡಿ.ಎಂ.ಸಿ. ಮೌಲ್ಯಮಾಪನದ ಮೂಲಕ ಎಸ್.ಡಿ.ಎಂ.ಸಿ. ಸ್ಥಿತಿ–ಗತಿಗಳ ಅಧ್ಯಯನ.

◗ ಇಲಾಖೆಯೊಂದಿಗೆ ಕ್ಲಸ್ಟರ್ ಮಟ್ಟದಲ್ಲಿ ಎಸ್.ಡಿ.ಎಂ.ಸಿ. ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ವಿಶ್ಲೇಷಣೆ.

◗ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿ.ಆರ್.ಪಿ,ಎಸ್.ಡಿ.ಎಂ.ಸಿ, ಶಿಕ್ಷಕ ಜೊತೆ ಸಮಾಲೋಚನ ಸಭೆ.

◗ ಮಕ್ಕಳು ಮತ್ತು ಇಲಾಖಾಧಿಕಾರಿಗಳ ಜೊತೆ ಮುಖಾ–ಮುಖಿ ಸಂವಾದ.

**ಶಾಲಾ ಮೂಲ ಅಂಕಿ–ಅಂಶಗಳ ಅಧ್ಯಯನ:** ಯೋಜನೆಯು ಆಯ್ದುಕೊಂಡ ಒಟ್ಟು 52 ಶಾಲಾ ಮಕ್ಕಳ ವರ್ಗಾವಾರು ವಿವರಗಳು 2016–17 ಈ ರೀತಿಯಲ್ಲಿತ್ತು:

| ತಾಲೂಕು | ಒಟ್ಟು ಶಾಲೆಗಳು | ಪ.ಜಾತಿ | | ಪ.ಪಂಗಡ | | ಅಲ್ಪ ಸಂಖ್ಯಾತ | | ಹಿಂದುಳಿದ ಜಾತಿ | | ಇತರ ಜಾತಿ | | ಒಟ್ಟು | |
|---|---|---|---|---|---|---|---|---|---|---|---|---|---|
| | | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ |
| SULLYA | 9 | 65 | 69 | 31 | 24 | 20 | 19 | 36 | 32 | 73 | 93 | 225 | 237 |
| PUTTUR | 7 | 44 | 64 | 28 | 19 | 88 | 87 | 78 | 82 | 0 | 4 | 238 | 256 |
| BELTHANGADI | 11 | 21 | 29 | 9 | 14 | 12 | 13 | 20 | 32 | 92 | 69 | 154 | 157 |
| BANTWAL | 8 | 32 | 28 | 15 | 12 | 66 | 91 | 62 | 66 | 29 | 22 | 204 | 219 |
| KARKALA | 8 | 37 | 29 | 14 | 27 | 8 | 11 | 120 | 121 | 6 | 12 | 185 | 200 |
| KUNDAPURA | 9 | 55 | 58 | 9 | 21 | 9 | 12 | 111 | 92 | 118 | 92 | 302 | 275 |
| total: | 52 | 254 | 277 | 106 | 117 | 203 | 233 | 427 | 425 | 318 | 292 | 1308 | 1344 |
| | | 531 | | 223 | | 436 | | 852 | | 610 | | 2652 | |

52 ಶಾಲೆಗಳ ಮಗುಸ್ನೇಹಿ ಶಾಲಾ ಪರಿಕಲ್ಪನೆಯಲ್ಲಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳು ಮುಖ್ಯವಾಗಿ ಸಂವಿಧಾನದ ಆಶಯ ಮತ್ತು ಮೌಲ್ಯಗಳಿಗುಣವಾಗಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯನ್ನು, ಸಮುದಾಯದ ಸಹಭಾಗಿತ್ವವನ್ನು ಬಯಸಿ ಕಾರ್ಯಕ್ರಮವನ್ನು ರೂಪಿಸಿತ್ತು. ಶಾಲಾ ಶಿಕ್ಷಣದಲ್ಲಿ ಸಮುದಾಯದ ಮತ್ತು ಅಗತ್ಯತೆಯನ್ನು, ಶಾಲಾ ಶಿಕ್ಷಣದಲ್ಲಿ ಸಮುದಾಯ ಮತ್ತು ಇಲಾಖಾ ಸಮನ್ವಯತೆಯ ಬಗ್ಗೆ, ಗುಣಾತ್ಮಕತೆಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯೋಜನೆಯನ್ನು ಕೈಗೊಂಡಿತು. ಮಗುಸ್ನೇಹಿ ಶಾಲೆಯ ಹೊಸ ಪರಿಕಲ್ಪನೆ, ಚಿಂತನೆಗಳ ಕುರಿತು ಶಾಲಾಭಿವೃದ್ಧಿ ಯೋಜನೆ ತಯಾರಿ ಹಾಗು ಯೋಜನೆಗಳ ಅನುಷ್ಠಾನಕ್ಕೆ ಸೂಕ್ತ ಕ್ರಮಗಳನ್ನು ನಿರೂಪಿಸಿತು. ತಮ್ಮ ಚಟುವಟಿಕೆಗಳ ಸ್ವಮೌಲ್ಯಮಾಪನದ ಪರಿಕಲ್ಪನೆ, ಗುಣಾತ್ಮಕ ಶಿಕ್ಷಣದ ಅನುಷ್ಠಾನಕ್ಕೆ ಮಕ್ಕಳ ಕಲಿಕೆಯ ಮೌಲ್ಯಮಾಪನ, ಶಾಲಾ ಮೂಲಭೂತ ಸೌಕರ್ಯಗಳ ಅನುಷ್ಠಾನ ಹಾಗು ಶಾಲಾ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಗಳ ಮೇಲ್ವಿಚಾರಣಾ ವಿಷಯಗಳ ಬಗ್ಗೆ ಶಾಲಾ ಹಂತದಲ್ಲಿ

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರುಗಳಿಗೆ 4 ಹಂತದ ತರಬೇತಿಗಳನ್ನು ಯೋಜಿಸಲಾಗಿತ್ತು. (ಮಗುಸ್ನೇಹಿ ಶಾಲಾ ಮೌಲ್ಯಮಾಪನಗಳನ್ನು ಅಳೆಯುವ ಸಾಧನ ನಮೂನೆ ಪುಟ ಸಂಖ್ಯೆ 18–26)

ಮೊದಲನೆಯ ಹಂತವಾಗಿ ಶಾಲಾಭಿವೃದ್ಧಿಯಲ್ಲಿ ಎಸ್.ಡಿ.ಎಂ.ಸಿ.ಯ ಪಾತ್ರ ಮತ್ತು ಜವಾಬ್ದಾರಿಗಳು, ಎರಡನೆಯ ಹಂತವಾಗಿ ಶಾಲಾಭಿವೃದ್ಧಿ ಯೋಜನೆಯ ತಯಾರಿ ಮತ್ತು ಅನುಷ್ಠಾನಿಸುವ ರೀತಿಗಳು, ಮೂರನೆಯ ಹಂತದಲ್ಲಿ ಶಾಲಾಮಟ್ಟದ ಕುಂದು ಕೊರತೆ ನಿವಾರಣಾ ವ್ಯವಸ್ಥೆಗಳ ಬಗ್ಗೆ ಮತ್ತು ನಾಲ್ಕನೆಯ ಹಂತದ ತರಬೇತಿಯನ್ನು ಮೂಲಭೂತ ಸೌಕರ್ಯ, ಮಕ್ಕಳ ಕಲಿಕಾ ಗುಣಮಟ್ಟದ ಮೌಲ್ಯಮಾಪನ ನಡೆಸುವ ಕುರಿತಂತೆ ತರಬೇತಿ ನೀಡಲಾಯಿತು.






ತರಬೇತಿಯಲ್ಲಿ ಶಾಲಾಭಿವೃದ್ಧಿ ಯೋಜನೆ, ಸಮುದಾಯ ಸಹಭಾಗಿತ್ವ, ಮೂಲಭೂತ ಸೌಕರ್ಯ, ಮಕ್ಕಳ ಕಲಿಕಾ ಗುಣಮಟ್ಟ ಮತ್ತು ಕುಂದು ಕೊರತೆ ನಿವಾರಣಾ ವ್ಯವಸ್ಥೆಗಳು ಮತ್ತು ಮೇಲ್ವಿಚಾರಣೆ ಬಗ್ಗೆ ಕೈಗೊಳ್ಳಬೇಕಾದ, ಕೈಗೊಂಡಿರುವ, ಅನುಸರಣೆಯಲ್ಲಿರುವ ಪ್ರಗತಿಗಳ ಬಗ್ಗೆ ವಿಮರ್ಶೆಯನ್ನು ಮಾಡಲಾಗಿದ್ದು ಪ್ರಸ್ತುತ ಎಸ್.ಡಿ.ಎಂ.ಸಿ.ಗಳು ಬಹಳಷ್ಟು ಅನುಭವೀ ತಂತ್ರಗಳನ್ನು ತಮ್ಮ ಶಾಲಾಭಿವೃದ್ಧಿ ನೆಲೆಯಲ್ಲಿ ಚಿಂತನೆ ನಡೆಸುವಲ್ಲಿ ಪರಿಣತರಾಗಿದ್ದಾರೆ.

ಮಗುಸ್ನೇಹಿ ಶಾಲಾ ನಿರ್ಮಾಣದಲ್ಲಿ ಮುಖ್ಯ ಚಟುವಟಿಕೆ ಎಸ್.ಡಿ.ಎಂ.ಸಿ. ತರಬೇತಿಯನ್ನು ಮತ್ತು ಮೌಲ್ಯ ಮಾಪನ ತಂತ್ರಗಳನ್ನು ನಡೆಸುವರೇ ನುರಿತ ತಂಡವನ್ನು ಸಿದ್ಧಪಡಿಸುವಲ್ಲಿ ಯೋಜನೆಯು




ಬಹಳಷ್ಟು ಚಟುವಟಿಕೆಗಳನ್ನು ನಡೆಸಿದೆ. ಪಡಿ ಈಗಾಗಲೇ ಅನೇಕ ವರ್ಷಗಳಿಂದ ವಿವಿಧ ವಿಷಯಗಳಲ್ಲಿ ತರಬೇತು ನೀಡಿ ಪೋಷಿಸಿದ ಸಂಪನ್ಮೂಲ ವ್ಯಕ್ತಿಗಳ ತಂಡವನ್ನು ಅಲ್ಲದೆ ಎಸ್.ಡಿ.ಎಂ.ಸಿ. ಸದಸ್ಯರುಗಳನ್ನು ಶಾಲೆಗಳ ಸರ್ವತೋಮುಖ ಅಭಿವೃದ್ಧಿ ನೆಲೆಯಲ್ಲಿ ತರಬೇತುಗಳನ್ನು ನೀಡುತ್ತಾ ಬಂದಿದೆ. ವಿಷಯಾಧಾರಿತವಾಗಿ ಬಲವರ್ಧನೆಯನ್ನು ಮಾಡಿರುವುದು ನಿಜಕ್ಕೂ ಎಸ್.ಡಿ.ಎಂ.ಸಿ.ಗಳ ದೀರ್ಘಕಾಲದ ಉತ್ತಮ ಕಾರ್ಯನಿರ್ವಹಣೆಯಲ್ಲಿ ಮತ್ತು ದೂರದೃಷ್ಟಿಯ ಯೋಜನೆಯಾಗಿದೆ.

ಈ ಎಲ್ಲಾ ತರಬೇತಿಗಳು, ಮೌಲ್ಯಮಾಪನಗಳ ಮತ್ತು ಸಮಯಕ್ಕೆ ಸರಿಯಾದ ಹಾಗೂ ನಿರಂತರ ಮಾರ್ಗದರ್ಶನದ ಮೂಲಕ ಬಹಳಷ್ಟು ಸಕಾರಾತ್ಮಕ ಪರಿಣಾಮಗಳನ್ನು ಕಾಣುವಂತಾಗಿದೆ. ಮುಖ್ಯವಾಗಿ ಸರಕಾರಿ ಶಾಲೆಗೆ ದಾಖಲಾತಿಯಲ್ಲಿ ಹೆಚ್ಚಳವನ್ನು ಗಮನಿಸುತ್ತಾ ಶಾಲೆಯಲ್ಲಿ ಮಕ್ಕಳ ಭಾಗವಹಿಸುವಿಕೆಯ ಮಟ್ಟವನ್ನು ವಿವಿಧ ನೆಲೆಯಲ್ಲಿ ಅಳತೆ ಮಾಡಲು ಸಾಧ್ಯವಾಗಿದೆ. 2019–2020ರಲ್ಲಿನ ಅಂಕಿಅಂಶಗಳು ಈ ಕೆಳಕಂಡಂತಿದೆ.

| ತಾಲೂಕು | ಒಟ್ಟು ಶಾಲೆಗಳು | ಪ.ಜಾತಿ | | ಪ.ಪಂಗಡ | | ಅಲ್ಪ ಸಂಖ್ಯಾತ | | ಹಿಂದುಳಿದ ಜಾತಿ | | ಇತರಜಾತಿ | | ಒಟ್ಟು | |
|---|---|---|---|---|---|---|---|---|---|---|---|---|---|
| | | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ |
| SULLYA | 9 | 0 | 82 | 43 | 33 | 25 | 23 | 43 | 44 | 81 | 99 | **282** | **281** |
| PUTTUR | 7 | 51 | 59 | 35 | 28 | 114 | 117 | 94 | 98 | 0 | 0 | **294** | **302** |
| BELTHANGADI | 11 | 28 | 35 | 13 | 15 | 16 | 12 | 24 | 39 | 98 | 73 | **179** | **174** |
| BANTWAL | 8 | 44 | 38 | 17 | 19 | 120 | 146 | 87 | 85 | 34 | 21 | **302** | **309** |
| KARKALA | 8 | 46 | 47 | 20 | 30 | 10 | 16 | 166 | 160 | 2 | 2 | **244** | **255** |
| KUNDAPURA | 9 | 72 | 65 | 8 | 14 | 11 | 13 | 120 | 109 | 135 | 128 | **346** | **329** |
| **Total:** | **52** | **331** | **326** | **136** | **139** | **296** | **327** | **534** | **535** | **350** | **323** | **1647** | **1650** |
| | | **657** | | **275** | | **623** | | **1069** | | **673** | | **3297** | |

ಈ ಕೆಳಗೆ ವಾರ್ಷಿಕವಾರು ಬದಲಾವಣೆಗಳನ್ನು ಕಾಣಬಹುದು :–

| ಸರಕಾರಿ ಶಾಲೆಗಳಲ್ಲಿ ದಾಖಲಾತಿ ವಿವರ | | | | | |
|---|---|---|---|---|---|
| ಮೂಲ ಅಂಕಿ ಅಂಶ | | 2017–18 | | 2019–20 | |
| ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| 1308 | 1344 | 1468 | 1496 | 1647 | 1650 |




ಮಕ್ಕಳ ಕಲಿಕಾ ಗುಣಮಟ್ಟ ಮತ್ತು ಭಾಗವಹಿಸುವಿಕೆಯ ಕುರಿತು ಅಲ್ಲದೆ ಕುಂದುಕೊರತೆಗಳ ನಿರ್ವಹಣಾ ವ್ಯವಸ್ಥೆಗಳ ಬಗ್ಗೆ ಭಾಗಿದಾರರೊಂದಿಗೆ ಯೋಜಿತ ಅವಧಿಗಳಲ್ಲಿ ಪ್ರತಿ ಪರಿಶೀಲನೆಗಳನ್ನು ಮಾಡಲಾಗಿದೆ. ಮಾರ್ಗದರ್ಶನ, ಪುನರ್‌ತರಬೇತಿಗಳನ್ನು ನೀಡುತ್ತಾ ಮಗುಸ್ನೇಹಿ ಶಾಲಾ ವಾತಾವರಣದ ಪೂರ್ಣ ಪರಿಕಲ್ಪನೆಯನ್ನು ಸಮುದಾಯವು ಅರ್ಥೈಸುವ ನಿಟ್ಟಿನಲ್ಲಿ ಅರಿವು ಮೂಡಿಸಿದೆ. ನಿರಂತರ ಸಮುದಾಯದ ಭಾಗವಹಿಸುವಿಕೆಯ ಮೂಲಕ ಬದಲಾವಣೆಯನ್ನು ಕಾಣಲು ಸಾಧ್ಯವಾಗಿದೆ.

ಈ ಸತತ 3 ವರ್ಷಗಳಲ್ಲಿ ಕಾಲಕಾಲಕ್ಕೆ ಶಿಕ್ಷಕರ ಮತ್ತು ಎಸ್‌ಡಿಎಮ್‌ಸಿ (ಸಮುದಾಯ) ಮನೋಸ್ಥಿತಿ, ಸರಕಾರದ ಕಾನೂನು ವ್ಯವಸ್ಥೆ ಮತ್ತು ಸುತ್ತೋಲೆಗಳು, ಎಲ್ಲವನ್ನು ಸರಿಯಾಗಿ ಅರಿತುಕೊಳ್ಳುತ್ತಾ ಮುಂಬರುವ ಎಸ್‌ಡಿಎಂಸಿ ಗಳನ್ನು ಕಾಲಕಾಲಕ್ಕೆ ಸಮರ್ಪಕ ಕಾರ್ಯ ನಿರ್ವಹಿಸಲು ಗಟ್ಟಿಗೊಳಿಸುವ ಸಲುವಾಗಿ ಕರಡು ಎಸ್.ಡಿ.ಎಂ.ಸಿ ತರಬೇತಿ ಕೈಪಿಡಿಯನ್ನು ರಚಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಇಲಾಖಾ ಪ್ರತಿನಿಧಿಗಳನ್ನು, ಶಿಕ್ಷಣಾಸಕ್ತರು ನುರಿತ ಸಂಪನ್ಮೂಲ ವ್ಯಕ್ತಿಗಳನ್ನೊಳಗೂಡಿಸುತ್ತಾ ಸಮಾಲೋಚನೆಗಳನ್ನು ಮಾಡಿ ಇವರ ಮಾರ್ಗದರ್ಶನದೊಂದಿಗೆ ಸಶಕ್ತತೆಯುಳ್ಳ ಎಸ್.ಡಿ.ಎಮ್.ಸಿಯನ್ನು ನಿರ್ಮಿಸುವುದಕ್ಕೋಸ್ಕರ ಸಿದ್ಧವಾದ ತರಬೇತಿ ಕೈಪಿಡಿ 'ಸತ್ವ' ಅನ್ನುವ ಶೀರ್ಷಿಕೆಯಲ್ಲಿ ಪ್ರಕಟಣೆ ಮಾಡಲಾಗಿದೆ.


TRAINING ON SDP PREPARATION

ಪಡಿ ತನ್ನ ಯೋಜನೆಯ ಮತ್ತು ತರಬೇತಿಗಳ ಎಲ್ಲ ಪ್ರಯತ್ನಗಳನ್ನು ಆಗಾಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಹಾಗೂ ಶಾಲಾ ಮುಖ್ಯಸ್ಥರು, ಎಸ್.ಡಿ.ಎಮ್.ಸಿ ಸದಸ್ಯರನ್ನೊಳಗೂಡಿಸಿಕೊಂಡು, ಸಮಾಲೋಚನೆಗಳನ್ನು ಏರ್ಪಡಿಸಿ, ಚರ್ಚಿಸುತ್ತಾ ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಪರಿಣಾಮಕಾರಿ ಅನುಷ್ಠಾನದ ಪ್ರಕ್ರಿಯೆಯ ವರದಿಯನ್ನು ಮಂಡಿಸಿ, ಅವರ ಜತೆಜತೆಗೆ ಮುಂದಿನ ಕಾರ್ಯ ಯೋಜನೆಗಳ ರೂಪುರೇಷೆಯನ್ನು ಹಾಕಿಕೊಂಡು ಮುನ್ನಡೆದುದರ ಫಲವಾಗಿ ಪಡಿ ಯೋಜನೆಯು ಮಗುಸ್ನೇಹಿ ಶಾಲೆಯ ಸೂಚ್ಯಂಕದ ಅನುಷ್ಠಾನ ಮತ್ತು ಮೌಲ್ಯಮಾಪನಗಳನ್ನು ಶಾಲಾ ಮಟ್ಟದಲ್ಲಿ ನಡೆಸಲು ಸಾಧ್ಯವಾಗಿದೆ.



ಮೌಲ್ಯಮಾಪನಾಧಾರದಲ್ಲಿ ಎಸ್.ಡಿ.ಎಮ್.ಸಿಯನ್ನು ಇನ್ನಷ್ಟು ಗಟ್ಟಿಗೊಳಿಸಲು ಸಾಧ್ಯವಾಗಿದೆ. ಎಸ್‌ಡಿಎಂಸಿಯವರನ್ನು ಸಶಕ್ತೀಕರಣಗೊಳಿಸಿರುವ ನೆಲೆಯಲ್ಲಿ ಎಲ್ಲಾ 52 ಶಾಲೆಗಳಲ್ಲಿ ವಿಶಿಷ್ಟ ಬದಲಾವಣೆಗಳು ಕಂಡುಬಂದಿವೆ. ಕೆಲವೊಂದನ್ನು ಮಾತ್ರ ಇಲ್ಲಿ ದಾಖಲಿಸಿದ್ದು ಇನ್ನು ಕೆಲವು ಬದಲಾವಣೆಗಳನ್ನು ಯಶೋಗಾಥೆಗಳ ಮೂಲಕ ದಾಖಲೆಗೊಳಿಸಿದ್ದೇವೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆದ್ದಳಿಕೆ ಶಾಲೆ :**

ಇಲ್ಲಿನ ಎಸ್‌ಡಿಎಂಸಿಯು ಸದೃಢರಾಗಿ ಮಕ್ಕಳ ಆರೋಗ್ಯ, ಪೌಷ್ಟಿಕಾಹಾರ, ಮಕ್ಕಳ ಕಲಿಕಾ ಮೌಲ್ಯಮಾಪನ, ಶುಚಿತ್ವ, ಸಕ್ರಿಯ ಮಕ್ಕಳ ಸಂಘಗಳು, ಮಕ್ಕಳ ಸುರಕ್ಷತೆ ಈ ನಿಟ್ಟಿನಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸುತ್ತಾ ರಾಜ್ಯದಲ್ಲೆ ಮಾದರಿ ಶಾಲೆ


Education Minister Mr Suresh visited the best school of Karnatatka – pic with with SDMC

ಎಂಬುದಾಗಿ ಗುರುತಿಸಿಕೊಂಡು ಪ್ರಶಸ್ತಿಯನ್ನೂ ಪಡೆದಿರುತ್ತದೆ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸತತ ಪಾಲ್ಗೊಳ್ಳುವಿಕೆಯಿಂದಾಗಿ ಆದ ಬದಲಾವಣೆಗಳನ್ನು ಇಲ್ಲಿ ಕಾಣಬಹುದು.

❖ ಪ್ರಾರಂಭದಲ್ಲಿ ತರಕಾರಿ ತೋಟ ಸಣ್ಣ ಮಟ್ಟದಲ್ಲಿ ಬೆಳೆಸುತ್ತಿದ್ದರು. ಎಸ್.ಡಿ.ಎಂ.ಸಿಯ ತರಬೇತಿ, ನಿರಂತರ ಮಾರ್ಗದರ್ಶನದ ಫಲವಾಗಿ ಎಸ್‌ಡಿಎಂಸಿ ಮತ್ತು ಸಮುದಾಯ ಸೇರಿಕೊಂಡು ಅತ್ಯುತ್ತಮ ರೀತಿಯಲ್ಲಿ ತರಕಾರಿ ತೋಟ, ಹಣ್ಣು ಹಂಪಲುಗಳನ್ನು ಬೆಳೆಸಿ ರಾಜ್ಯಕ್ಕೆ ಮಾದರಿಯಾಗಿದೆ.



❖ ಮಕ್ಕಳ ಕಲಿಕಾ ಗುಣಮಟ್ಟದ ಹೆಚ್ಚಳಕ್ಕಾಗಿ ಎಸ್.ಡಿ.ಎಂ.ಸಿ. ಮುಖಾಂತರ 3 ಮಂದಿ ಶಿಕ್ಷಕರನ್ನು ನೇಮಿಸಿರುತ್ತಾರೆ. ಅಲ್ಲದೆ ವೃತ್ತಿ ಕೌಶಲ್ಯ, ಯೋಗಾಸನ, ಯಕ್ಷಗಾನ ಕಲೆಗಳನ್ನು ಊರಿನ ನುರಿತ ವ್ಯಕ್ತಿಗಳು ಮಕ್ಕಳಿಗೆ ಉಚಿತವಾಗಿ ಕಲಿಸುತ್ತಿದ್ದಾರೆ.

❖ ರಂಗಮಂದಿರದ ಅವಶ್ಯಕತೆ ಬಗ್ಗೆ ಶಾಲಾಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿ ಜಿಲ್ಲಾ ಪಂಚಾಯತ್ ಮುಖಾಂತರ ರಂಗ ಮಂದಿರ ನಿರ್ಮಾಣ ಮಾಡಿರುತ್ತಾರೆ.



❖ ಮಕ್ಕಳಿಗೆ ಊಟದ ಹಾಲ್ ಮತ್ತು ನೆರಳಿನಲ್ಲಿ ಆಡಲು ಶೀಟ್‌ಗಳ ಅಳವಡಿಕೆಗಾಗಿ ಎಂ.ಆರ್.ಪಿ.ಎಲ್. ನಿಂದ 30 ಲಕ್ಷ ಅನುದಾನವನ್ನು ಪಡೆದಿದ್ದು ಕಾಮಗಾರಿಗಳು ಸಿದ್ಧಗೊಂಡು ಮಕ್ಕಳು ಉಪಯೋಗಿಸುತ್ತಿದ್ದಾರೆ.

❖ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಶೌಚಾಲಯಗಳ ಕೊರತೆ ನೀಗಿಸುವ ಪ್ರಯತ್ನ ನಡೆಯುತ್ತಿದೆ. ಹೊಸ ಶೌಚಾಲಯ ನಿರ್ಮಾಣಕ್ಕಾಗಿ

ಕಾರ್ಯಯೋಜನೆ ಹಾಕಿಕೊಂಡಿದ್ದು ದಾನಿಗಳ ಮುಖಾಂತರ ಪ್ರಥಮ ಶೌಚಾಲಯ ನಿರ್ಮಾಣವಾಗಿರುತ್ತದೆ.

- ಮಕ್ಕಳ ಹಕ್ಕುಗಳ ಕ್ಲಬ್, ಮಕ್ಕಳ ಮಂತ್ರಿಮಂಡಲ ಉತ್ತಮ ರೀತಿಯಲ್ಲಿ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿರುತ್ತದೆ, ಹೆಣ್ಣು ಮಕ್ಕಳ ಭಾಗವಹಿಸುವಿಕೆ ಉತ್ತಮವಾಗಿರುತ್ತದೆ.
- ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಿ ಅದರ ಪರಿಣಾಮಕಾರಿ ಅನುಸರಣೆಯನ್ನು ಮಾಡುತ್ತಿದ್ದಾರೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾವಳಮುಡೂರು ಶಾಲೆ :**

- ಎಸ್.ಡಿ.ಎಂ.ಸಿ.ಯವರು ಬಿಸಿಯೂಟಕ್ಕೆ ಪ್ರತ್ಯೇಕ ಕೊಠಡಿ ಬಗ್ಗೆ, ಆವರಣಾ ಗೋಡೆ ಬಗ್ಗೆ ಮತ್ತು ಗೇಟ್ ಅಳವಡಿಕೆಯ ಬಗ್ಗೆ ಅಲ್ಲದೆ ರಂಗಮಂದಿರ ನಿರ್ಮಾಣದ ಬಗ್ಗೆ ಕ್ರಿಯಾಯೋಜನೆಯನ್ನು ಅಳವಡಿಸಿದ್ದಾರೆ. ಬಿಸಿಯೂಟ ಕೊಠಡಿ ಜಿಲ್ಲಾ ಪಂಚಾಯತ್ ಅನುದಾನದಿಂದ, ರಂಗಮಂದಿರ ದಾನಿಗಳ ಮುಖಾಂತರ, ಕಾಂಪೌಂಡ್ ವಾಲ್ ಮತ್ತು ಗೇಟ್ ಅಳವಡಿಕೆ ಪಂಚಾಯತ್ ಮುಖಾಂತರ ನಿರ್ಮಾಣವಾಗಿರುತ್ತದೆ.
- ನೀರಿನ ವ್ಯವಸ್ಥೆಗಾಗಿ ಶಾಲಾ ಆವರಣದಲ್ಲಿದ್ದ ಬಾವಿಯನ್ನು ಪಂಚಾಯತ್ ಮೂಲಕ ಶುದ್ಧೀಕರಿಸಿ ನಿರಂತರ ನೀರಿನ ವ್ಯವಸ್ಥೆ ಮಾಡಲಾಯಿತು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಎಂ.ಆರ್.ಪಿ.ಎಲ್.ನ ಮುಖಾಂತರ ಪಡೆದುಕೊಳ್ಳಲಾಗಿದೆ.
- ಮಕ್ಕಳಿಗೆ ಉತ್ತಮ ಶಿಕ್ಷಣಕ್ಕಾಗಿ ಎಸ್.ಡಿ.ಎಂ.ಸಿ. ವತಿಯಿಂದ ಒಬ್ಬ ಪ್ರತ್ಯೇಕ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಮಕ್ಕಳಿಗೆ ಪ್ರತ್ಯೇಕ ಚಟುವಟಿಕೆಗಳಾದ ಕ್ರಾಫ್ಟ್, ನೃತ್ಯ, ಸಂಗೀತ ತರಬೇತಿಗಳನ್ನು ಎಸ್.ಡಿ.ಎಂ.ಸಿ. ಮುಖಾಂತರ ನಿರಂತರ ನೀಡುತ್ತಿದ್ದಾರೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾವಳಕಟ್ಟೆ ಶಾಲೆ :**

- ದಾಖಲಾತಿ ಹೆಚ್ಚಿಸಲು ಮಕ್ಕಳ ಮನೆ ಮನೆ ಭೇಟಿಯನ್ನು ಎಸ್.ಡಿ.ಎಂ.ಸಿ. ಮತ್ತು ಶಿಕ್ಷಕರು ಕೈಗೊಂಡಿದ್ದು ಪರಿಣಾಮವಾಗಿ ದಾಖಲಾತಿಯು ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ.



❖ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳ ನಿರ್ಮಾಣವನ್ನು ದಾನಿಗಳ ಮುಖಾಂತರ ಮಾಡಿಸಿಕೊಂಡಿರುತ್ತಾರೆ.

❖ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಮೂವರು ಶಿಕ್ಷಕರನ್ನು ಎಸ್.ಡಿ.ಎಂ.ಸಿ. ವತಿಯಿಂದ ನೇಮಿಸಿರುತ್ತಾರೆ.

❖ 8ನೇ ತರಗತಿಯನ್ನು ಆರಂಭಿಸಲು ದಾನಿಗಳನ್ನು ಸಂಪರ್ಕಿಸಿ ಹೊಸ ಕಟ್ಟಡ ನಿರ್ಮಾಣಗೊಂಡಿದ್ದು ತರಗತಿಗಳು ನಡೆಯುತ್ತಿದೆ.

❖ ರಂಗಮಂದಿರ ಮತ್ತು ದಾಸ್ತಾನು ಕೊಠಡಿಗಳನ್ನು ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅನುದಾನದಿಂದ ಪಡೆದುಕೊಂಡಿರುತ್ತಾರೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮದ್ವ :**

❖ ತರಕಾರಿ ತೋಟಗಳನ್ನು ಮಾದರಿಯಾಗಿ ಮಾಡಿರುತ್ತಾರೆ, ಎಸ್.ಡಿ.ಎಂ.ಸಿ ಶಾಲೆಯಿಂದ ಹೊರಗುಳಿದ, ದೀರ್ಘ ಗೈರುಹಾಜರಾದ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಪ್ರಯತ್ನಿಸಿದೆ. ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಮನೆಭೇಟಿ ಮಾಡಿ ಕಾರ್ಯಪ್ರವೃತ್ತರಾಗಿದ್ದು ಯಶಸ್ಸನ್ನು ಕಂಡುಕೊಂಡಿದ್ದಾರೆ.

❖ ಪಂಚಾಯತ್ ಮುಖಾಂತರ ಶಾಲೆಗೆ ಆವರಣ ಗೋಡೆ ಮತ್ತು ಗೇಟ್ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.

❖ ಬಿಸಿಯೂಟದಲ್ಲಿ ಸ್ವಚ್ಛತೆಯನ್ನು ಕಾಪಾಡಲು ಆಗಾಗ ಮೇಲ್ವಿಚಾರಣೆಯನ್ನು ನಡೆಸಿ ಅಡುಗೆಯವರಿಗೆ ಪ್ರತ್ಯೇಕ Apron ವ್ಯವಸ್ಥೆ ಮಾಡಿರುತ್ತಾರೆ.

❖ ಗುಣಮಟ್ಟದ ಕಲಿಕೆಗಾಗಿ 2 ಪ್ರತ್ಯೇಕ ಶಿಕ್ಷಕರನ್ನು, ಎಸ್.ಡಿ.ಎಂ.ಸಿ.ಯು ನೇಮಕ ಮಾಡಿರುತ್ತದೆ.

❖ ಮಕ್ಕಳ ಹಕ್ಕುಗಳ ಸಂಘ, ಮಕ್ಕಳ ಪಾರ್ಲಿಮೆಂಟ್ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಡಬೆಟ್ಟು ಶಾಲೆ :**

❖ ಎಸ್.ಡಿ.ಎಂ.ಸಿ. ಯು ಮುಖಾಂತರ ಶಾಲಾ ಜಾಗದ ಅಳತೆ ಮತ್ತು ದಾಖಲೆಗಳನ್ನು ನಿರ್ಮಿಸಿಕೊಂಡು ಅಡಿಕೆ ತೋಟ ರಚನೆ ಮತ್ತು ತರಕಾರಿಗಳನ್ನು ಮಾಡಿರುತ್ತಾರೆ.



❖ ಎಸ್.ಡಿ.ಎಂ.ಸಿ. ಮುಖಾಂತರ ಪ್ರತ್ಯೇಕ ಶಿಕ್ಷಕರನ್ನು ನೇಮಕ ಮಾಡಿರುತ್ತಾರೆ.

❖ ಮಕ್ಕಳಿಗೆ ಪಠ್ಯೇತರ ಕಲಿಕೆಗಳಾದ ಸಂಗೀತ, ನೃತ್ಯ, ಯಕ್ಷಗಾನಗಳನ್ನು ಊರಿನ ಪರಿಣಿತರಿಂದ ಕೊಡಿಸುವ ವ್ಯವಸ್ಥೆಯನ್ನು ಮಾಡಿರುತ್ತಾರೆ.

❖ ಎಂ.ಆರ್.ಪಿ.ಎಲ್.ನಿಂದ ರಂಗಮಂದಿರ ನಿರ್ಮಾಣ ಮತ್ತು ಅಂಗಳಕ್ಕೆ ಶೀಟ್‌ಗಳ ಅಳವಡಿಕೆಗಳನ್ನು ಮಾಡಿರುತ್ತಾರೆ.

❖ 15 ವರ್ಷಗಳಿಂದ ನಡೆಯದ ಶಾಲಾ ವಾರ್ಷಿಕೋತ್ಸವವನ್ನು ಎಸ್.ಡಿ.ಎಂ.ಸಿ., ಹಳೆ ವಿದ್ಯಾರ್ಥಿ ಸಂಘ, ಪೋಷಕರು ಸೇರಿ ಆಸಕ್ತಿಯಿಂದ ನಡೆಸಿರುತ್ತಾರೆ, ಶಾಲಾಗೋಡೆಗಳಿಗೆ ಪೈಟಿಂಗ್ ವ್ಯವಸ್ಥೆಯನ್ನು ಹಳೆ ವಿದ್ಯಾರ್ಥಿ ಸಂಘದಿಂದ ಮಾಡಿಸಲಾಗಿದೆ.

❖ ಶಾಲಾ ಹಳೆಯ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡ ನಿರ್ಮಾಣಕ್ಕೆ ಇನ್ಫೋಸಿಸ್‌ನಂದ 15 ಲಕ್ಷ ಅನುದಾನ ಸಿಕ್ಕಿದ್ದು ಕಟ್ಟಡ ಕಾಮಗಾರಿ ಚಾಲನೆಯಲ್ಲಿದೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಂಟಾಲ್‌ಪಲ್ಕೆ ಶಾಲೆ :**

❖ ಎಸ್.ಡಿ.ಎಂ.ಸಿ.ಯ ಮುಖಾಂತರ ಶಾಲಾ ಆವರಣ ಗೋಡೆ ರಚನೆ ಮತ್ತು ತರಕಾರಿ ತೋಟ ರಚನೆ, ಬಾಳೆ ಕೃಷಿಗಳನ್ನು ಹಮ್ಮಿ ಕೊಂಡಿರುತ್ತಾರೆ.



❖ ದಾನಿಗಳ ಮುಖಾಂತರ ಕಂಪ್ಯೂಟರ್ ಪಡೆದು ಕೊಂಡಿರುತ್ತಾರೆ.

❖ ಎಸ್.ಡಿ.ಎಂ.ಸಿ. ದಾಖಲಾತಿ ಆಂದೋಲನಕ್ಕೆ ಮನೆ ಭೇಟಿ ಮಾಡಿ ಮಕ್ಕಳ ಸಂಖ್ಯೆ ಹೆಚ್ಚಳವಾಗಿರುತ್ತದೆ.

❖ ಶೌಚಾಲಯಕ್ಕೆ ಶೀಟ್‌ಗಳ ಅಳವಡಿಕೆ ಪಂಚಾಯತ್ ಮುಖಾಂತರ ಮಾಡಲಾಗಿದೆ.

❖ ಪಂಚಾಯತ್ ಮುಖಾಂತರ ಬೋರ್‌ವೆಲ್ ವ್ಯವಸ್ಥೆ ಸರ್ವಕಾಲಿಕ ನೀರಿನ ಸರಬರಾಜು ವ್ಯವಸ್ಥೆ ಇದೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವಸ್ಯ ಪಡೂರು ಶಾಲೆ:**



❖ ತರಕಾರಿ ತೋಟಗಳ ರಚನೆ, ಪ್ರತಿ ತಿಂಗಳ ಎಸ್.ಡಿ.ಎಂ.ಸಿ. ಸಭೆಯಂದು ಎರಡು ಗಂಟೆ ಕಾಲ ಶಾಲಾ ಶ್ರಮಾದಾನಕ್ಕೆ ಮೀಸಲಾಗಿಟ್ಟಿದ್ದಾರೆ.

❖ ಶಾಲಾ ಸಮೀಪ ಇದ್ದ ಬಾವಿಗೆ ತಡೆಗೋಡೆ ಇಲ್ಲದ ಕಾರಣ ಮಕ್ಕಳಿಗೆ ಅಪಾಯದ ಪರಿಸ್ಥಿತಿ ಇದೆ. ಈ ಬಗ್ಗೆ ಎಸ್.ಡಿ.ಎಂ.ಸಿ. ಕಾರ್ಯಪ್ರವೃತ್ತವಾಗಿ ಪಂಚಾಯತ್‌ಗೆ ಮನವಿಯನ್ನು ಮಾಡಿದ್ದು, ಪಿ.ಡಿ.ಓ. ತನ್ನ ಸ್ವಂತ ಖರ್ಚಿನಿಂದ ತಡೆಗೋಡೆಯನ್ನು ನಿರ್ಮಿಸಿ ನೀರನ್ನು ಸ್ವಚ್ಛಗೊಳಿಸಿರುತ್ತಾರೆ. ಅಲ್ಲದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮುಖಾಂತರ ಪಂಪ್‌ಸೆಟ್‌ಗಳನ್ನು ಅಳವಡಿಸಿದ್ದು ಮಕ್ಕಳಿಗೆ ಸರ್ವಕಾಲಿಕಾ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ, ಶುದ್ಧ ಕುಡಿಯುವ ನೀರಿನ ಘಟಕವನ್ನು ದಾನಿಗಳ ಮುಖಾಂತರ ಪಡೆದುಕೊಳ್ಳಲಾಗಿದೆ.

❖ ಮಕ್ಕಳಿಗೆ ಕೈತೊಳೆಯುವ ಘಟಕವನ್ನು ಪಂಚಾಯತ್ ನೀಡಿರುತ್ತಾರೆ. ಇನ್ಫೋಸಿಸ್‌ನಿಂದ ಎರಡು ಕಪಾಟು, ಒಂದು ಕಂಪ್ಯೂಟರ್ ನೀಡಿರುತ್ತಾರೆ. ತಾಲೂಕು ಪಂಚಾಯತ್‌ನಂದ ಕಟ್ಟಡದ ಮೇಲ್ಛಾವಣಿ ರಿಪೇರಿಗೆ ರೂ.50,000/– ಅನುದಾನ ದೊರೆತ್ತಿದ್ದು ರಿಪೇರಿ ಪೂರ್ಣವಾಗಿರುತ್ತದೆ.

❖ ಸರಿಯಾದ ರಸ್ತೆ ವ್ಯವಸ್ಥೆ ಇಲ್ಲದಿದ್ದು ಈ ಬಗ್ಗೆ ಎಸ್.ಡಿ.ಎಂ.ಸಿ., ಎಂ.ಎಲ್.ಎ. ಯವರಿಗೆ ಮನವಿ ಮಾಡಿ ಅವರ ಅನುದಾನದಿಂದ ಶಾಲೆಯ ತನಕ ಉತ್ತಮ ರೀತಿಯ ರಸ್ತೆ ನಿರ್ಮಾಣವಾಗಿದೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಲಂಪುರಿ ಶಾಲೆ:**

- ❖ ಶಾಲಾ ಜಾಗವನ್ನು ಸರ್ವೆ ಮಾಡಿಸಿ ದಾಖಲೆಗಳನ್ನು ನಿರ್ಮಿಸಿಕೊಂಡಿರುತ್ತಾರೆ.
- ❖ ಅಪಾಯಕಾರಿ ವಿದ್ಯುತ್ ಕಂಬಗಳು ಶಾಲಾ ಆವರಣದೊಳಗೆ ಇದ್ದು ಇದನ್ನು



ಪಂಚಾಯತ್ ಮತ್ತು ಮೆಸ್ಕಾಂಗೆ ಮನವಿಯನ್ನು ಮಾಡಿ ತೆರವುಗೊಳಿಸಲಾಗಿದೆ.

- ❖ ಪಂಚಾಯತ್ ಮುಖಾಂತರ ಶಾಲಾ ಆವರಣ ಗೋಡೆ ರಚನೆ, ತರಕಾರಿ ತೋಟ ರಚನೆ.
- ❖ ದಾನಿಗಳಿಂದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ.
- ❖ ಮಕ್ಕಳ ಸುರಕ್ಷಾ ಸಮಿತಿಯನ್ನು ರಚಿಸಿ ಪರಿಣಾಮಕಾರಿಯಾಗಿ ಅನುಸರಣೆ.

**ಮಕ್ಕಳ ಹಕ್ಕುಗಳ ರಂಗ ತಂಡ:**

ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕತೆಯ ಕಲಿಕೆಯನ್ನು ಖಾತರಿಗೊಳಿಸುವ ಅಂಶಗಳನ್ನು ಹಲವಾರು ಆಯಾಮಗಳಲ್ಲಿ ನೋಡಬೇಕಾಗುತ್ತದೆ. ಶಾಲಾ ಹಂತದಲ್ಲಿ ಮಗುವಿನ ಶಿಕ್ಷಣ ಹಾಗೂ ಕಲಿಕೆಯು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ ಚಟುವಟಿಕೆಗಳಾಗಿ ನಡೆಯುತ್ತದೆ. ಮಕ್ಕಳಲ್ಲಿ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಅನುಕೂಲಕರ ವಾತಾವರಣವು ಅತೀ ಅವಶ್ಯವಾಗಿದೆ. ಅದರಲ್ಲೂ ಗುಣಾತ್ಮಕ ಶಿಕ್ಷಣ ಎಂದಾಗ ಮಕ್ಕಳು, ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿಗಳು ಅಲ್ಲದೆ ಶಾಲಾ ಹಂತದಲ್ಲಿ ಇಡೀ ಸಮುದಾಯ ಅಂದರೆ ಪೋಷಕರ, ಸ್ಥಳೀಯ ಸರಕಾರಗಳ, ಸಂಘ ಸಂಸ್ಥೆಗಳ ಸಕ್ರಿಯ ಪಾಲ್ಗೊಳ್ಳುವಿಕೆಯು ಮುಖ್ಯ ಸೂಚ್ಯಂಕಗಳಾಗಿವೆ.

ಹೀಗಾಗಿ ಪಡಿ ಸಂಸ್ಥೆಯು ಶಾಲಾ ಶಿಕ್ಷಣದಲ್ಲಿ ಸಾಂವಿಧಾನಿಕ ಮೌಲ್ಯಗಳ ಅನುಷ್ಠಾನದ ಮೂಲಕ ಮಗುಸ್ನೇಹಿ ಶಾಲೆ ಮತ್ತು ಸಮಾಜದ ನಿರ್ಮಾಣದ ಗುರಿಯನ್ನಿರಿಸಿಕೊಂಡು ಇದನ್ನು ಸಾಧಿಸಲು ಕೆಲವೊಂದು ಉದ್ದೇಶಗಳನ್ನು ಯೋಜಿಸಿತ್ತು. ಮುಖ್ಯವಾಗಿ ಶಾಲೆಗಳಲ್ಲಿ ರಂಗಶಿಕ್ಷಣದ ಮೂಲಕ ಎಲ್ಲಾ ಮಕ್ಕಳ ಕಲಿಕೆಯನ್ನು ಉತ್ತಮಗೊಳಿಸುವುದು ಮತ್ತು ವೃದ್ಧಿಸುವುದು, ಸಮುದಾಯಕ್ಕೆ ಶಾಲೆ ನಮ್ಮದು ಎನ್ನುವ ಸಂಬಂಧವನ್ನು ಬೆಳೆಸುವುದು, ಸಮುದಾಯಕ್ಕೆ ಮಕ್ಕಳ ಹಕ್ಕು ಮತ್ತು ಮಕ್ಕಳ ಹಕ್ಕುಗಳ ಅನುಷ್ಠಾನದ ವಿವಿಧ ವ್ಯವಸ್ಥೆಗಳ ಕರ್ತವ್ಯದ ಬಗ್ಗೆ ಜಾಗೃತಿ

ಮೂಡಿಸುವುದು, ಮಕ್ಕಳು ಮತ್ತು ಸಮುದಾಯದಲ್ಲಿ ಸಾಮಾಜಿಕ ಜವಾಬ್ದಾರಿ ಹಾಗೂ ಮೌಲ್ಯಗಳನ್ನು ಬೆಳೆಸುವುದು ಮಾತ್ರವಲ್ಲದೆ ಮಕ್ಕಳು ಮತ್ತು ಸಮುದಾಯದಲ್ಲಿ ವೈಚಾರಿಕತೆಯ ಚಿಂತನೆಯನ್ನು ಬೆಳೆಸುವುದು. ಈ ಉದ್ದೇಶವನ್ನಿಟ್ಟುಕೊಂಡು ಪಡಿ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಕಾರ ಮತ್ತು ಸಹಭಾಗಿತ್ವದಲ್ಲಿ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡವನ್ನು ರಚಿಸಿ ಈ ಮೂಲಕ ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿ ಮೂಡಿಸುವ ವಿನೂತನ ಪ್ರಯತ್ನವನ್ನು ಮಾಡಿದೆ.



ಯೋಜನಾ ವ್ಯಾಪ್ತಿಯ ಆರು ತಾಲೂಕುಗಳಲ್ಲಿ ಸುಮಾರು 20 ರಿಂದ 25 ಮಕ್ಕಳನ್ನೊಳಗೊಂಡ 'ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡ'ವನ್ನು ನುರಿತ ರಂಗ ತರಬೇತುದಾರರಾದ, ಶ್ರೀ ಬಾಸುಮ ಕೊಡಗು, ಶ್ರೀ ಕೃಷ್ಣಪ್ಪ ಬಂಬಿಲ, ಶ್ರೀ ಗೋಪಾಲ ಅಂಚನ್, ಶ್ರೀ ಮೋಹನ್ ಕಾಳವರ, ಶ್ರೀ ಮುಖೇಶ್ ಇವರುಗಳು ತರಬೇತಿಯನ್ನು ನೀಡುವುದರ ಮೂಲಕ ಸಜ್ಜುಗೊಳಿಸಲಾಗಿದೆ. ರಂಗತಂಡದ ರಚನೆಯನ್ನು ಮಾಡುವಾಗ ಲಿಂಗ ಸಮಾನತೆಯನ್ನು ನೋಡಿಕೊಳ್ಳಲಾಗಿದೆ. ಮಕ್ಕಳ ಹಿತರಕ್ಷಣೆಯ ನೆಲೆಯಲ್ಲಿ ಪ್ರತೀ ಪೋಷಕರಿಂದ ಮಕ್ಕಳು ಪ್ರದರ್ಶನವನ್ನು ನೀಡಲು ಹೊರಹೋಗಲಿರುವುದರಿಂದ ಅವರ ಅನುಮತಿಯನ್ನು ಪಡೆದುಕೊಳ್ಳಲಾಗಿತ್ತು. ಈ ರಂಗತಂಡಗಳು ಅವರ ತಾಲೂಕಿನಲ್ಲಿ ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿಗಾಗಿ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಜಾಗೃತಿ ಮೂಡಿಸುವ ನೆಲೆಯಲ್ಲಿ ಸಿದ್ಧಗೊಳಿಸಲಾಯಿತು.



2018ರಲ್ಲಿ ಸಿದ್ಧಗೊಂಡ ಆರು ತಂಡಗಳ ಅಧಿಕೃತ ಉದ್ಘಾಟನೆಯನ್ನು ಪಡಿ ಬೆಳ್ಳಿಹಬ್ಬ ಆಚರಣೆ ಸಂದರ್ಭದಲ್ಲಿ ಮಾಡಲಾಗಿತ್ತು. ಆ ತಂಡಗಳು ಈ ಕೆಳಕಂಡಂತಿವೆ. ಆರು ತಂಡಗಳ ಗುಂಪನ್ನು ನಮ್ಮ ವೆಬ್‌ಸೈಟ್ www.padivalored.com ಸಂದರ್ಶಿಸಿದಲ್ಲಿ ವೀಕ್ಷಿಸಬಹುದು.

1. ಬೆಳಕು – ಮಕ್ಕಳ ಹಕ್ಕುಗಳ ರಂಗತಂಡ, ಕುಂದಾಪುರ ಕ್ಲಸ್ಟರ್
2. ಕನಸು – ಮಕ್ಕಳ ಹಕ್ಕುಗಳ ರಂಗತಂಡ, ಬಂಟ್ವಾಳ ಕ್ಲಸ್ಟರ್
3. ಬಾಲ್ಯೊದ ಐಸಿರಿ – ಮಕ್ಕಳ ಹಕ್ಕುಗಳ ರಂಗತಂಡ, ಬೆಳ್ತಂಗಡಿ ಕ್ಲಸ್ಟರ್
4. ಮಕ್ಕಳ ಹೆಜ್ಜೆ – ಮಕ್ಕಳ ಹಕ್ಕುಗಳ ರಂಗತಂಡ, ಕುಂದಾಪುರ ಕ್ಲಸ್ಟರ್
5. ಸಂಸಾರ – ಮಕ್ಕಳ ಹಕ್ಕುಗಳ ರಂಗತಂಡ, ಪುತ್ತೂರು ಕ್ಲಸ್ಟರ್
6. ಕಲಾಸಿರಿ ಮಕ್ಕಳ ಹಕ್ಕುಗಳ ರಂಗತಂಡ, ಕಾರ್ಕಳ ಕ್ಲಸ್ಟರ್

ನಂತರ ಮಕ್ಕಳ ಹಕ್ಕುಗಳ ರಂಗತಂಡಗಳು ವ್ಯಾಪಕವಾಗಿ ತಮ್ಮ ಪ್ರದರ್ಶನಗಳನ್ನು ವಿವಿಧ ವೇದಿಕೆಗಳಲ್ಲಿ ಅಂದರೆ ಸಮುದಾಯದತ್ತ ಶಾಲೆ, ಶಾಲಾ ವಾರ್ಷಿಕೋತ್ಸವ, ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ, ಸಮುದಾಯ ಕಾರ್ಯಕ್ರಮಗಳಲ್ಲಿ ನೀಡುತ್ತಾ ಮಕ್ಕಳ ಸಮಸ್ಯೆಗಳ ಬಗ್ಗೆ ನಾಟಕ ಪ್ರದರ್ಶನಗಳ ಮೂಲಕ ಅರಿವನ್ನು ಮೂಡಿಸಿ ಜನಸಮುದಾಯವನ್ನು ಆಕರ್ಷಿಸಿದರು.

ಮಕ್ಕಳ ಹಕ್ಕುಗಳು ಮತ್ತು ಸಂರಕ್ಷಣೆ, ಶಿಕ್ಷಣದಲ್ಲಿ ಸಾಂವಿದಾನಿಕ ಮೌಲ್ಯಗಳ ಕುರಿತು ಮಕ್ಕಳ ಹಕ್ಕುಗಳ ರಂಗ ತಂಡವನ್ನು ನಿರಂತರ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದಕ್ಕಾಗಿ ಸಭೆಯನ್ನು ಕರೆದು ರಂಗ ತಂಡ ಪ್ರದರ್ಶನಗಳ ಪರಿಕಲ್ಪನೆ, ನಿರ್ವಹಣೆ, ವಸ್ತ್ರವಿನ್ಯಾಸ, ಮಕ್ಕಳ ತರಬೇತಿ, ಮುಂತಾದ ವಿಚಾರಗಳ ಕುರಿತು ವಿಮರ್ಶೆ ನಡೆಸಲಾಗಿತ್ತು. ಪರಿಣಾಮವಾಗಿ ಮಕ್ಕಳ ರಂಗತಂಡಗಳಿಗೆ ಪ್ರೋತ್ಸಾಹವನ್ನು ನೀಡುತ್ತಾ ಈ ತಂಡಗಳು ಇನ್ನೊಂದಷ್ಟು ಕಿರಿಯರನ್ನು ಸೇರಿಸಿಕೊಂಡು ತಂಡಗಳನ್ನು ರಚಿಸುವಂತಾಗಿದೆ. ಮಕ್ಕಳ ಹಕ್ಕುಗಳು ಮತ್ತು ರಕ್ಷಣೆ ಹಾಗೂ ಗುಣಮಟ್ಟದ ಶಿಕ್ಷಣದ ಕುರಿತಾಗಿ ನಿರಂತರ ಮಾಹಿತಿ, ಜಾಗೃತಿ ಕೊಡುವ ಮೂಲವಾಗಿ ಸಮುದಾಯದಲ್ಲಿ ಈ ರಂಗಪ್ರದರ್ಶನಗಳು ಪ್ರದರ್ಶಿಸಲ್ಪಡುವ ನಿಟ್ಟಿನಲ್ಲಿ ಚರ್ಚಿಸಲಾಯಿತು.



ಎಲ್ಲಾ ತಂಡಗಳು ತಮ್ಮ ಪ್ರದರ್ಶನವನ್ನು ಮುಖ್ಯವಾಗಿ, ಮಕ್ಕಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ಮುಖ್ಯವಸ್ತುವಾಗಿ ಆಯ್ಕೆ ಮಾಡಿಕೊಂಡಿತ್ತು. ಹಿರಿಯರಿಂದಾಗುವ,

ಶಾಲೆಯಲ್ಲಾಗುವ ತಾರತಮ್ಯಗಳು, ಇಲಾಖೆಗಳಿಂದ, ಪಂಚಾಯತ್ ಎಸ್‌ಡಿಎಂಸಿಗಳ ಕುರಿತು ಸಮಸ್ಯೆಗಳನ್ನು ತಿಳಿಸುವುದೇ ಮಾತ್ರವಲ್ಲ ಅದರ ಪರಿಹಾರೋಪಾಯಗಳನ್ನೂ ತಮ್ಮ ನಟನೆಯ ಮೂಲಕ ಮನಮುಟ್ಟುವಂತೆ ಅಭಿನಯಿಸಿ ತೋರಿಸಿದರು. ಸಂಬಂಧಪಟ್ಟ ಇಲಾಖೆಗಳು, ಶಾಲಾ ಶಿಕ್ಷಕರು, ಎಸ್‌ಡಿಎಂಸಿ ಹಾಗೂ ಜನಪ್ರತಿನಿಧಿಗಳು ಅಲ್ಲದೆ ಸಮುದಾಯದವರೂ ಇದನ್ನು ಕಂಡು ಎಚ್ಚೆತ್ತುಕೊಳ್ಳುವಂತಾಗಿದೆ. ಮಗುಸ್ನೇಹಿ ಶಾಲೆ ಮತ್ತು ಪಂಚಾಯತ್ ಮಾತ್ರವಲ್ಲದೆ ಮಗುಸ್ನೇಹಿ ಸಮುದಾಯದ ನಿರ್ಮಾಣದಲ್ಲಿ ಕೂಡಾ ಈ ತಂಡಗಳು ಬಹಳ ಪರಿಣಾಮಕಾರಿಯಾಗಿ ಅರಿವು ಮೂಡಿಸಿದ್ದಾರೆಂದು ತಿಳಿಸಲು ಸಂತೋಷವೆನಿಸುತ್ತದೆ.

ಈ ತಂಡಗಳನ್ನು ಮುಂದಿನ ದಿನಗಳಲ್ಲಿ ಇನ್ನೂ ಪರಿಣಾಮಕಾರಿಯಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಮುನ್ನಡೆಸಲು ಪ್ರಯತ್ನಿಸುತ್ತಿದೆ. ಅದರ ನಿರ್ವಹಣೆ, ತರಬೇತಿ ಮುಂತಾದ ವಿಚಾರಗಳು ಕ್ಲಸ್ಟರ್ ಹಂತದಿಂದ ಶಾಲಾ ಹಂತಕ್ಕೆ ವಿಸ್ತರಿಸುವ ಕಾರ್ಯತಂತ್ರಗಳನ್ನು ಮಾಡುವ ಕುರಿತಾಗಿ ಯೋಜನೆಗಳನ್ನು ಮಾಡುವುದಾಗಿ ನಿರ್ಧರಿಸಲಾಯಿತು.

**ಮಕ್ಕಳ ಹಕ್ಕುಗಳ ಕ್ಲಬ್, ಮೀನಾ ಕ್ಲಬ್‌ನ ಬಲವರ್ಧನೆಗೆ ಚಟುವಟಿಕೆಗಳು:**

ಮಕ್ಕಳಲ್ಲಿ ನಾಯಕತ್ವ ತರಬೇತಿ, ತಿಂಗಳ ಮಾಸಿಕ ಸಭೆ ನಡೆಸುವ ಕುರಿತಂತೆ ಮಕ್ಕಳು ತಾವೇ ಹೇಗೆ ಮಕ್ಕಳ ಕ್ಲಬ್‌ನ ಚಟುವಟಿಕೆಗಳ ನಿರ್ವಹಣೆ ಮಾಡಬಹುದು ಎಂಬುದರ ಬಗ್ಗೆ ತರಬೇತಿಯನ್ನು ನೀಡುತ್ತಾ ಬಂದಿದೆ. ಮುಖ್ಯವಾಗಿ ಶಾಲಾ ಮಕ್ಕಳು ಲಿಂಗತ್ವ, ಹದಿಹರೆಯದ ಸಮಸ್ಯೆಗಳು ಮತ್ತು ಎದುರಿಸುವ ರೀತಿ, ಮಕ್ಕಳ ಹಕ್ಕುಗಳು,



ಎಸ್.ಡಿ.ಎಂ.ಸಿ ಮತ್ತು ಶಾಲಾಭಿವೃದ್ಧಿಯಲ್ಲಿ ಅವರ ಪಾತ್ರಗಳು, ಮಕ್ಕಳ ಗ್ರಾಮ ಸಭೆ, ಮಕ್ಕಳ ರಕ್ಷಣಾ ವ್ಯವಸ್ಥೆಗಳು ಮತ್ತು ಮಕ್ಕಳ ಹಕ್ಕುಗಳನ್ನು ಪಡೆಯಲು ಮತ್ತು ಮಕ್ಕಳೆಡೆಗೆ ಇಲಾಖೆಗಳ ಪಾತ್ರಗಳು ಈ ಬಗ್ಗೆ ಮಕ್ಕಳಿಗೆ ಅರ್ಥವಾಗುವಂತೆ ತರಬೇತಿಗಳು, ಮಕ್ಕಳ ಮಾಸಿಕ ಸಭೆಗಳಲ್ಲಿ ಚರ್ಚೆ ಮಾಡುವುದರ ಮೂಲಕ ಮಕ್ಕಳನ್ನು ಬಲಪಡಿಸಲು ಶಕ್ತವಾಗಿದೆ.

## ಇಲಾಖೆ, ಜನಪ್ರತಿನಿಧಿಗಳೊಂದಿಗೆ ಮಕ್ಕಳ ಮುಖಾಮುಖಿ ಸಂವಾದ :


ವಾರ್ತಾ ಭಾರತಿ

**ನಮ್ಮ ಶಾಲೆಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಪೂರೈಸಿ**

**ಮಕ್ಕಳ ಸಂವಾದದಲ್ಲಿ ಆರೋಗ್ಯ ಇಲಾಖೆಗೆ ಮಕ್ಕಳ ಒತ್ತಾಯ**

ಬಂಟ್ವಾಳ, ನ.3: ನಮ್ಮ ಶಾಲೆಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಅಳವಡಿಸಲಾಗಿಲ್ಲ. ವಿಟಮಿನ್ ಮಾತ್ರೆ ಸರಬರಾಜು ಮಾಡಿಕೊಡಿ ಎಂದು ಮಕ್ಕಳ ಆರೋಗ್ಯ ಇಲಾಖಾಧಿಕಾರಿಗಳಿಗೆ ಪ್ರಶ್ನೆ ಹೇಳಿದ್ದಾರೆ.

ಕಾವಳಪಡೂರು ಗ್ರಾಪಂ ಸಭಾಂಗಣದಲ್ಲಿ ಶನಿವಾರ ನಡೆದ ಮಕ್ಕಳ ಸಂವಾದ ಕಾರ್ಯಕ್ರಮದಲ್ಲಿ ಶಾಲೆಯೊಂದ ಮಕ್ಕಳು ಆರೋಗ್ಯ ಇಲಾಖೆಯ ಗಮನ ಸೆಳೆದರು.

ಶಾಲೆಯಲ್ಲಿ ನಡೆಯುವ ಮಕ್ಕಳ ಬಿಸಿಯೂಟ ಯೋಜನೆಯನ್ನು ಎರಡು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಬೇಕೆಂದು ವಿನಂತಿಸಿಕೊಂಡರು. ಈ ಬಗ್ಗೆ ಪರಿಹಾರ ಕಂಡುಕೊಳ್ಳಲು ಕ್ರಮ ಕೈಗೊಳ್ಳಲಾಗುವುದಾಗಿ ವೈದ್ಯಾಧಿಕಾರಿ ಡಾ. ಸೋಹನ್ ಕುಮಾರ್ ನುಡಿದರು.

ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುವ ಜಾನಪದ ನೃತ್ಯ ಸಹ ಕಲಾವಿದರಿಗೆ ಪುರಸ್ಕಾರ ಸಿಗುತ್ತಿಲ್ಲ ಎಂದು ಪ್ರಶ್ನಿಸಿದ ವಿದ್ಯಾರ್ಥಿಗಳು ಶಿಕ್ಷಣ ಇಲಾಖೆಯ ಗಮನ ಸೆಳೆದರು. ಈ ಬಗ್ಗೆ ಪ್ರತಿಕ್ರಿಯಿಸಿದ ಶಿಕ್ಷಣ ಇಲಾಖೆಯ ಇಸಿಒ ರಾಜೇಶ್ ಕ್ರಮ ಜರುಗಿಸುವುದಾಗಿ ತಿಳಿಸಿದರು.

ಶಿಕ್ಷಕರ ತರಬೇತಿಯನ್ನು ಶಾಲಾ ರಜಾ ದಿನಗಳಲ್ಲಿ ಏರ್ಪಾಡು ಮಾಡುವಂತೆ ಒತ್ತಾಯಿಸಿದರು.

ಬಿ.ಸಿ.ರೋಡ್-ಬೆಳ್ತಂಗಡಿ ಕಡೆಗೆ ಸಂಚರಿಸುವ ಬಸ್‌ಗಳಿಗೆ ಶಾಲಾ ವಠಾರದಲ್ಲಿ ನಿಲುಗಡೆ ಸೂಚನೆ ನೀಡುವಂತೆ ಕೆಎಸ್ಸಾರ್ಟಿಸಿಗೆ ಸೂಚನೆ ನೀಡಬೇಕು. ಶಾಲಾ ಸಮಯಗಳಲ್ಲಿ ಮಕ್ಕಳಿಗೆ ಸಂಚರಿಸುವ ಅನುಕೂಲವಾಗುವಂತೆ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಬೇಕು. ಶಾಲಾ ವಠಾರದಲ್ಲಿ ಕಸದ ತೊಟ್ಟಿ, ಜಲ ಮರು ಪೂರಣ, ಶಾಲಾ ಕಟ್ಟಡಗಳ ದುರಸ್ತಿ ಕಾರ್ಯ, ಚರಂಡಿ, ರಸ್ತೆ ಸುಧಾರಣೆ, ಸೂಚನಾ ಫಲಕ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದಾಗಿ ಕಾವಳಪಡೂರು ಗ್ರಾಪಂ ಅಧ್ಯಕ್ಷ ಪ್ರಮೋದ್ ಕುಮಾರ್ ರೈ ಹೇಳಿದರು.

ಮಕ್ಕಳ ಸಹಾಯವಾಣಿ ಕೇಂದ್ರ ಸಂಯೋಜಕ ದೀಕ್ಷಿತ್, ಮಕ್ಕಳ ರಕ್ಷಣಾ ಘಟಕಾಧಿಕಾರಿ ಯಶೋಧಾ, ಎಸಿಡಿಪಿಒ ಗಾಯತ್ರಿ ಕಂಬಳಿ, ಮೆಸ್ಕಾಂ ಅಧಿಕಾರಿ ರಂಗಸ್ವಾಮಿ ಮಕ್ಕಳ ಸಮಸ್ಯೆ ಕುರಿತು ಮಾತನಾಡಿದರು.

ತಾಪಂ ಸ್ಥಾಯಿ ಸಮಿತಿ ಅಧ್ಯಕ್ಷೆ ಧನಲಕ್ಷ್ಮೀ ಬಂಗೇರ, ತಾಪಂ ಉಪಾಧ್ಯಕ್ಷ ಅಬ್ಬಾಸ್ ಅಲಿ ಬೋಳಂತೂರು, ಗ್ರಾಪಂ ಸದಸ್ಯರಾದ ಜಿನರಾಜ ಅರಿಗ, ಚಂದ್ರಶೇಖರ ಕರ್ಣ, ಆನಂದ ಮಧ್ವ, ಯೂಸುಫ್ ಬಾಂಬಿಲ, ದಾಮೋದರ್, ಕಾವಳಮೂಡೂರು ಗ್ರಾಪಂ ಸದಸ್ಯ ಇಸ್ಮಾಯಿಲ್ ಸಿದ್ದೀಕ್ ಉಪಸ್ಥಿತರಿದ್ದರು.

ಪಡಿ ಸಂಯೋಜಕಿ ರಾಜೇಶ್ವರಿ ಸ್ವಾಗತಿಸಿದರು. ಪಿಡಿಒ ವೇದಾವತಿ ವಂದಿಸಿದರು. ಶಿಕ್ಷಣ ಸಂಪನ್ಮೂಲ ಕೇಂದ್ರದ ಅಧ್ಯಕ್ಷ ಫಾರೂಕ್ ಬಂಟ್ವಾಳ ಮಕ್ಕಳ, ಪಡಿ ಸಂಯೋಜಕಿ ಸಮಿತಾ ಶೆಟ್ಟಿ ಸಂವಾದ ನಡೆಸಿಕೊಟ್ಟರು. ಕೇಂದ್ರದ ಸದಸ್ಯರಾದ ಶಾರದ ಕಾವಳಕಟ್ಟೆ, ಪಿ.ಎಚ್.ಉಸ್ಮಾನ್, ಎಂಪಿಸ್ ಡಬ್ಬು, ವಿದ್ಯಾರ್ಥಿಗಳಾದ ದೀಕ್ಷಿತಾ, ಜಯಂತಿ, ಸ್ವಾತಿ ಸಹಕರಿಸಿದರು.

Page No. 5 Nov 04, 2019
Powered by: erelego.com

ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಭಾರತ ಸರಕಾರವು ವಿಶ್ವ ಸಂಸ್ಥೆಯೊಂದಿಗೆ ಮಕ್ಕಳ ಹಕ್ಕುಗಳ ಒಡಂಬಡಿಕೆ ಮಾಡಿದಂತೆ, ಹಕ್ಕುಗಳಲ್ಲೊಂದಾದ ಭಾಗವಹಿಸುವಿಕೆಯ ಹಕ್ಕನ್ನು ಅನುಷ್ಠಾನಿಸುವಲ್ಲಿ ಪಡಿ, ಮಂಗಳೂರು ಸಂಸ್ಥೆಯು ಮಕ್ಕಳ ಮುಖಾಮುಖಿ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿದೆ.

ಪಡಿ ಸಂಸ್ಥೆಯು ತನ್ನ ಯೋಜನಾ ವ್ಯಾಪ್ತಿಯ ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಳ್ಯ, ಕುಂದಾಪುರ ಹಾಗೂ ಕಾರ್ಕಳ ಹೀಗೆ ಒಟ್ಟು ಆರು ತಾಲೂಕುಗಳಲ್ಲಿ ಇಲಾಖೆ ಮತ್ತು ಜನಪ್ರತಿನಿಧಿಗಳನ್ನು ಒಟ್ಟು ಸೇರಿಸಿ, ಮಕ್ಕಳ ಸಂವಾದ ಕಾರ್ಯಕ್ರಮವನ್ನು ವಿವಿಧ ನೆಲೆಯಲ್ಲಿ ಆಯೋಜಿಸಿದೆ.



ಯೋಜನಾ ವ್ಯಾಪ್ತಿಯ ಶಾಲೆಗಳ ಮಕ್ಕಳು ಶಿಕ್ಷಣ ಹಾಗೂ ದೈನಂದಿನ ಜೀವನದಲ್ಲಿ ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಮತ್ತು



ಸರಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳ ಮುಂದೆ ಇಟ್ಟರು. ಮುಖ್ಯವಾಗಿ ಶಾಲೆಗಳಲ್ಲಿ ಉಪಯೋಗಿಸಲು ಯೋಗ್ಯವಾದ ಶೌಚಾಲಯ ಇಲ್ಲದಿರುವುದು, ಶಾಲೆಯಲ್ಲಿ ರಕ್ಷಣಾ ವ್ಯವಸ್ಥೆಗಳು ಇಲ್ಲದಿರುವುದು, ಕುಡಿಯುವ ನೀರಿನ ವ್ಯವಸ್ಥೆ, ಶಿಥಿಲಗೊಳ್ಳುತ್ತಿರುವ ಶಾಲಾ ಕಟ್ಟಡಗಳು,

ವೈದ್ಯಕೀಯ ಸೇವೆಗಳ ಸಮಸ್ಯೆ, ಶಾಲೆಯಲ್ಲಿ ಉಪಾಧ್ಯಾಯರ ಕೊರತೆ, ಬಿಸಿಯೂಟದಲ್ಲಿ ಪೌಷ್ಟಿಕಾಂಶದ ಕೊರತೆ, ಮಕ್ಕಳಲ್ಲಿ ಅಮಲು ಪದಾರ್ಥ ಸೇವನೆ ಹಾಗೂ ದುಶ್ಚಟಗಳಿಗೆ ಬಲಿಯಾಗುವುದು ಮುಂತಾದ ವಿಷಯಗಳ ಬಗ್ಗೆ ಸಂವಾದ ನಡೆಯಿತು.

ಅನೇಕ ವರ್ಷಗಳಿಂದ ಬಗೆಹರಿಸಲಾಗದ ಮಕ್ಕಳ ಕೆಲವು ಸಮಸ್ಯೆಗಳಿಗೆ ಅಂದೇ ಪರಿಹಾರ ದೊರಕಿತು, ಇನ್ನು ಕೆಲವು ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳು, ಪ್ರಾಧಿಕಾರಗಳಿಗೆ ತಿಳಿಸಿ ಕೂಡಲೇ ಬಗೆಹರಿಸುವರು ಎಂಬದಾಗಿ ಆಶ್ವಾಸನೆ ನೀಡಿದ್ದರು.

ಕಾರ್ಯಕ್ರಮದಲ್ಲಿ ಸಮುದಾಯದ ಪ್ರತಿನಿಧಿಗಳು, ಸ್ಥಳೀಯ ಜನಪ್ರತಿನಿಧಿಗಳು, ಶಿಕ್ಷಕರು, ಶಿಕ್ಷಣಾಸಕ್ತರು, ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳು, ಅಂಗನವಾಡಿ, ಚೈಲ್ಡ್‌ಲೈನ್, ಅಲ್ಲದೆ ಪತ್ರಕರ್ತರು ಹಾಜರಿದ್ದರು.

ಪಡಿ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯೊಂದಿಗೆ ಈ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡಿದ್ದು ಎಲ್ಲಾ ತಾಲೂಕುಗಳ ಮಕ್ಕಳಿಂದ ಬಂದ ಪ್ರಶ್ನೆಗಳ ಪಟ್ಟಿಯನ್ನು ಚರ್ಚಿಸಿ ವಕಾಲತು ಸಮಿತಿಯ ಮೂಲಕ ಅನುಪಾಲನೆ ಮಾಡುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಿದೆ.



ಸಂಪನ್ಮೂಲ ಕೇಂದ್ರಗಳ ಕಾರ್ಯಕಾರಿ ಸಮಿತಿ ಹಾಗೂ ಒಕ್ಕೂಟಗಳ ವಕಾಲತು ಸಮಿತಿಗಳು ಒಂದಾಗಿ ಶಿಫಾರಸ್ಸುಗಳ ಪಟ್ಟಿಯನ್ನು ತಯಾರಿಸಿ ಜನಪ್ರತಿನಿಧಿ/ಎಂ.ಎಲ್.ಎ.ರವರಿಗೆ ನೀಡಿ ಮಕ್ಕಳು ಸುರಕ್ಷಿತವಾಗಿ, ಮಗುಸ್ನೇಹಿ ವಾತಾವರಣದಲ್ಲಿ ಶಿಕ್ಷಣವನ್ನು ಹೊಂದುವಂತೆ ಸರ್ವ ರೀತಿಯ ಪ್ರಯತ್ನಗಳನ್ನು ಮಾಡಲೇಬೇಕು ಎಂದು ಒತ್ತಾಯವನ್ನು ಮಾಡಿದರು.

ಶಿಫಾರಸ್ಸುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಲಾಗಿ ಎಲ್ಲಾ ಇಲಾಖೆಗಳು ಅಲ್ಲದೆ ಜಿಲ್ಲಾಧಿಕಾರಿಗಳೂ ಹೆಚ್ಚಿನ ಮುತುವರ್ಜಿಯನ್ನು ವಹಿಸಿ ಮಕ್ಕಳ ಬೇಡಿಕೆಗಳನ್ನು ಈಡೇರಿಸುವಲ್ಲಿ ಪ್ರಯತ್ನಗಳನ್ನು ಮಾಡಿದ್ದೇ ಅಲ್ಲದೆ ಸರಿಯಾದ ಅನುಪಾಲನೆಗಳನ್ನು ಮಾಡಿ ಬೇಡಿಕೆಗಳು ಈಡೇರುವಲ್ಲಿ ಸೂಕ್ತ ಕ್ರಮಗಳನ್ನು ಮಾಡಿದ್ದಾರೆ.

## ಮಕ್ಕಳ ರಕ್ಷಣಾ ನೀತಿ 2016ರ ಶಾಲಾ ಹಂತದ ಮಕ್ಕಳ ರಕ್ಷಣಾ ನೀತಿ ತಯಾರಿ

Mr. Vasudeva Sharma, CRT, R.P. for CPC



ಉಡುಪಿ ಮತ್ತು ದ.ಕ ಜಿಲ್ಲೆಯ ಯೋಜನಾ ವ್ಯಾಪ್ತಿಯ ಶಾಲೆಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ರ ಅನ್ವಯ ರೂಪಿಸಬೇಕಾಗಿರುವ ನೀತಿಯನ್ನು ಹೇಗೆ ತಯಾರಿಸಬಹುದು ಎಂಬುದರ ಬಗ್ಗೆ ಎರಡು ದಿನಗಳ ಪ್ರತ್ಯೇಕ ಕಾರ್ಯಾಗಾರವನ್ನು ನಡೆಸಲಾಯಿತು. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಹಾಗೂ ಬೆಂಗಳೂರು ಮಕ್ಕಳ ಹಕ್ಕುಗಳ ಟ್ರಸ್ಟ್ ಮುಖ್ಯಸ್ಥ ಪ್ರತಿನಿಧಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯಾಗಾರ ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ಪಡಿ ಯೋಜನಾ ವ್ಯಾಪ್ತಿಯ 52 ಶಾಲೆಗಳ ಪ್ರತಿನಿಧಿಗಳು ಭಾಗವಹಿಸಿ ಕರಡು ನೀತಿಯನ್ನು ಕಾರ್ಯಾಗಾರದಲ್ಲಿ ರೂಪಿಸಲು ತರಬೇತಿ ನೀಡಲಾಯಿತು.



ಪ್ರತೀ ಶಾಲೆಗಳಲ್ಲಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸಮಿತಿ 2016ರ ಅನ್ವಯ ರೂಪಿಸಲಾದ ಮಕ್ಕಳ ರಕ್ಷಣಾ ನೀತಿಯ ರೂಪುರೇಷೆಯ ಆಧಾರದಲ್ಲಿ 52 ಶಾಲೆಗಳಲ್ಲೂ ರಕ್ಷಣಾ ನೀತಿಯನ್ನು 2018 ಒಕ್ಟೋಬರ್ 2018 ತಿಂಗಳಿನಿಂದ 2019 ಫೆಬ್ರವರಿ ತಿಂಗಳೊಳಗಾಗಿ ಈ ಕೆಳಕಂಡ ಮಾದರಿಯಲ್ಲಿ ರಚಿಸಲಾಗಿದ್ದು ಅದರ ಗುರಿ, ಸಾರಾಂಶ ಹಾಗೂ ನಮೂನೆಯು ಈ ಕೆಳಕಂಡಂತಿರುತ್ತದೆ.

### 1. ಮಕ್ಕಳಾ ರಕ್ಷಣಾ ನೀತಿಯ ಸಾರ :

ಮಕ್ಕಳಿಗೆ ಯಾವುದೇ ರೀತಿಯ ಶೋಷಣೆ ಆಗದಂತೆ ಜಾಗೃತಿ ಮೂಡಿಸುವುದು. ಶೋಷಣೆಯನ್ನು ಗುರುತಿಸುವುದು. ಮಕ್ಕಳ ಮೇಲೆ ತಾರತಮ್ಯ ಹೋಗಲಾಡಿಸುವುದು, ಮಾನಸಿಕ ಹಿಂಸೆ ದೌರ್ಜನ್ಯದಿಂದ ರಕ್ಷಿಸಿ ಮಕ್ಕಳ ಪ್ರಗತಿ ವೃದ್ಧಿಸುವುದು.

## 2. ಶಾಲೆಯ ಗುರಿ ಉದ್ದೇಶ :

ಗುಣಾತ್ಮಕ ಶಿಕ್ಷಣ ನೀಡುವುದು, ಭಯಮುಕ್ತ ವಾತಾವರಣವನ್ನು ರೂಪಿಸುವುದು. ಮಕ್ಕಳ ರಕ್ಷಣೆ ಮಾಡುವುದು ಮತ್ತು ಯಾವುದೇ ಸೌಲಭ್ಯಗಳಿಂದ ಮಗು ವಂಚಿತರಾಗದಂತೆ ನೋಡಿಕೊಳ್ಳುವುದು. ಮಕ್ಕಳ ಹಕ್ಕುಗಳ ಪಾಲನೆ ಮಾಡುವುದು, ಮಗು ಸ್ನೇಹಿ ವಾತಾವರಣ ಕಲ್ಪಿಸುವುದು ಮತ್ತು ಸಮುದಾಯಕ್ಕೆ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ತಿಳುವಳಿಕೆ ನೀಡುವುದು.

## 3. ಶಾಲೆಯ ಸಂರಚನೆ :

ಸರಕಾರಿ ಪ್ರಾಥಮಿಕ ಶಾಲೆಯಾಗಿದ್ದು, 15 ಮಕ್ಕಳು ವ್ಯಾಸಂಗ ಮಾಡುತ್ತಾರೆ. ಎರಡು ಹುದ್ದೆಗಳಲ್ಲಿ ಒಬ್ಬರೇ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಡುಗೆ ಮಹಿಳಾ ಸಿಬ್ಬಂದಿ, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ಪೋಷಕರು, ನಾಮನಿರ್ದೇಶಿತ ಸದಸ್ಯರು, ಜನಪ್ರತಿನಿಧಿ ಹಾಗೂ ಶಾಲಾ ನಾಯಕನನ್ನು ಹೊಂದಿರುವ 24 ಜನರ ಎಸ್.ಡಿ.ಎಂ.ಸಿ. ಇದೆ.

## 4 ಶಾಲೆಯ ಮಕ್ಕಳ ರಕ್ಷಣಾ ಸಮಿತಿಯಲ್ಲಿ ಒಳಗೊಂಡಿರುವವರು:

- ಮುಖ್ಯ ಶಿಕ್ಷಕರು
- ಸಹಶಿಕ್ಷಕರು
- ವಿದ್ಯಾರ್ಥಿಗಳು
- ಅಡುಗೆ ಸಿಬ್ಬಂದಿ
- ಎಸ್.ಡಿ.ಎಂ.ಸಿ.
- ಅಧ್ಯಕ್ಷರು/ಸದಸ್ಯರು
- ನಾಮನಿರ್ದೇಶಿತ ಸದಸ್ಯರು
- ಜನಪ್ರತಿನಿಧಿ
- ಶಾಲಾ ನಾಯಕ

## 5. ಮಕ್ಕಳ ರಕ್ಷಣಾ ನೀತಿಯನ್ನು ಒಪ್ಪಿದ ದಿನ :

## 6. ಮಕ್ಕಳ ರಕ್ಷಣಾ ನೀತಿಯ ಪುನರ್‌ವಿಮರ್ಶೆ ಮಾಡುವ ದಿನ : ಶಾಲಾ ಪ್ರಾರಂಭಕ್ಕೆ

## 7. ಮಕ್ಕಳ ರಕ್ಷಣಾ ನೀತಿಗೆ ಸಂಸ್ಥೆ ಬದ್ಧವಾಗಿರುವ ಕುರಿತು ಹೇಳಿಕೆ.

ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ, ಶಾಲೆಯು ತನ್ನ ಪ್ರತಿಯೊಂದು ಮಗುವಿನ ರಕ್ಷಣೆ ಮತ್ತು ಸುರಕ್ಷತೆಗೆ ಬದ್ಧವಾಗಿದ್ದು, ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ವಿವರಿಸುವಂತೆ ತಮ್ಮ ಆರೈಕೆಯಲ್ಲಿ ಬೆಳವಣಿಗೆ ಹೊಂದಲು ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯಲು, ಸಮಾನತೆ ಮತ್ತು ತಾರತಮ್ಯ ಹೋಗಲಾಡಿಸಲು ನಾವು ಬದ್ಧರಾಗಿರುವುದು.

**8. ವ್ಯಾಖ್ಯಾನಗಳು :**

ಮಕ್ಕಳು ಎಂದರೆ 0 ವರ್ಷದಿಂದ 18ವರ್ಷದ ಒಳಗಿನವರು.

ಮಕ್ಕಳ ದೌರ್ಜನ್ಯ 0–18 ವರ್ಷದ ಒಳಗಿನ ಯಾವುದೇ ಮಗುವಿಗೆ ಶೋಷಣೆ ಆಗದಂತೆ ನೋಡಿಕೊಳ್ಳುವುದು. ಉದಾ: ದೈಹಿಕ ಹಿಂಸೆ, ಬಯ್ಯುವುದು, ಜಾತಿ ನಿಂದನೆ, ತಾರತಮ್ಯ ಮಾಡುವುದು, ಮಕ್ಕಳ ದುರುಪಯೋಗ, ಕೆಟ್ಟ ಶಬ್ದಗಳ ಬಳಕೆ, ಮಗುವಿನ ಮನಸ್ಸಿಗೆ ನೋವಾಗುವಂತಹ ವರ್ತನೆಗಳಿಂದ ದೂರವಿರುವುದು ಇತ್ಯಾದಿ.

**9. ಮಕ್ಕಳ ರಕ್ಷಣೆ :**

ಯಾವುದೇ ವ್ಯಕ್ತಿ, ಸಂಸ್ಥೆಯು ವ್ಯವಸ್ಥೆ ಅಥವಾ ಪ್ರಾಧಿಕಾರದ ಪೋಷಣೆಯಲ್ಲಿರುವಾಗ ತಾರತಮ್ಯ ಮತ್ತು ಎಲ್ಲಾ ರೀತಿಯ ಹಿಂಸೆ ದುರುಪಯೋಗಗಳಿಂದ ಮಗುವಿನ ಮೂಲಭೂತ ಹಕ್ಕುಗಳನ್ನು ರಕ್ಷಿಸಿ ಮಗುವಿಗೆ ಮುಕ್ತ ಮತ್ತು ಮಗುಸ್ನೇಹಿ ವಾತಾವರಣವನ್ನು ಕಲ್ಪಿಸುವುದು.

10. **ಈ ನೀತಿಯ ವ್ಯಾಪ್ತಿ :**

ಶಾಲಾ ಶಿಕ್ಷಕ ವೃಂದ, ಅಂಗನವಾಡಿ ಕಾರ್ಯಕರ್ತೆಯರು, ಅಡುಗೆ ಸಿಬ್ಬಂದಿ, ದಾನಿಗಳು, ಶಾಲೆಗೆ ಭೇಟಿ ನೀಡುವವರು, ಶಾಲೆಯಲ್ಲಿರುವವರು, ಎಸ್.ಡಿ.ಎಂ.ಸಿ. ಅಧ್ಯಕ್ಷರು/ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು, ವೈದ್ಯರು, ಎ.ಎನ್.ಎಂ.ಗಳು ಮತ್ತು ಸಮುದಾಯ.

**11. ಮಕ್ಕಳೊಂದಿಗೆ ಸಂಪರ್ಕದಲ್ಲಿರುವುದು ಎಂದರೇನು** ?

ತರಗತಿ ಕೊಠಡಿ, ಊಟದ ಸಮಯ, ಗ್ರಂಥಾಲಯ, ಶೈಕ್ಷಣಿಕ ಪ್ರವಾಸ, ಪ್ರತಿಭಾ ಕಾರಂಜಿ ಆಟದ ಮೈದಾನ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಮಕ್ಕಳೊಡನೆ ಜೊತೆಯಲ್ಲಿ ಇರುವವರು.

**12. ಮಕ್ಕಳ ರಕ್ಷಣಾ ನೀತಿಯಡಿ ಜವಾಬ್ದಾರಿಗಳು :**

ಮಕ್ಕಳ ಹಕ್ಕುಗಳ ಜಾಗೃತಿ ಮತ್ತು ತಿಳುವಳಿಕೆ.

**13. ಯಾವುದನ್ನು ಈ ನೀತಿ ನಿಷೇಧಿಸಿರುತ್ತದೆ?**

ಹೊಡೆಯುವುದು, ತಂದೆ ತಾಯಿಯ ಹೆಸರನ್ನು ಹೇಳಿ ಬಯ್ಯುವುದು, ಮಾದಕ ವಸ್ತು, ಮೊಬೈಲ್ ಬಳಕೆ, ಮಕ್ಕಳಿಂದ ಕೆಲಸ ಮಾಡಿಸುವುದು, ಲಿಂಗ ತಾರತಮ್ಯ,

ಜಾತಿ ನಿಂದನೆ, ಬಡವ–ಶ್ರೀಮಂತ ಎಂಬ ಭಾವನೆ ಮುಂತಾದವುಗಳನ್ನು ನಿಷೇಧಿಸುತ್ತದೆ.

**14. ನಾವು ಮಾಡಲೇ ಬೇಕಾದುದು :**

ಮಗುವನ್ನು ವೀಕ್ಷಿಸಿ ಶಿಕ್ಷಿತನಾಗಿ ಮಾಡುವುದು. ಅದಕ್ಕಾಗಿ ಗುಣಮಟ್ಟದ ಶಿಕ್ಷಣ ನೀಡುವುದು, ಮಕ್ಕಳ ಸಂಪೂರ್ಣ ಸುರಕ್ಷತೆ ಮತ್ತು ರಕ್ಷಣೆ ಹಾಗೂ ಉತ್ತಮ ಮೌಲ್ಯಗಳನ್ನು ಕಲಿಸುವುದು, ಸಮಸ್ಯೆಗಳು ಕಂಡುಬಂದಲ್ಲಿ ಕೂಡಲೇ ಕಾರ್ಯಪ್ರವೃತ್ತರಾಗುವುದು.

**15. ದೂರು ದಾಖಲಿಸುವ ಪ್ರಕ್ರಿಯೆ :**

ಸಲಹಾ ಪೆಟ್ಟಿಗೆ ಇಡುವುದು. ಶಾಲಾ ಸಮಯದಲ್ಲಿ ಅಥವಾ ಹೊರಗೆ ಯಾವುದೇ ಸಮಸ್ಯೆ ಬಂದಲ್ಲಿ ಸುರಕ್ಷಾ ಸಮಿತಿ ಜೊತೆಗೆ ಎಸ್.ಡಿ.ಎಂ.ಸಿ. ಜೊತೆ ಸೇರಿ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡುವುದು. ಆರಕ್ಷಕ ಠಾಣೆಗೆ ಕರೆ ಮಾಡುವುದು.

**16. ಸಂಸ್ಥೆಯ (ಶಾಲೆಯ) ಜವಾಬ್ದಾರಿಗಳು :**

ಮಕ್ಕಳ ರಕ್ಷಣಾ ಸಮಿತಿಯ ಸಭೆಯನ್ನು ನಡೆಸಲು ನಮ್ಮ ಸಂಸ್ಥೆಯಲ್ಲಿ ಮುಕ್ತ ಅವಕಾಶ ಒದಗಿಸುವುದು. ಮಕ್ಕಳ ರಕ್ಷಣಾ ನೀತಿ ರಚಿಸಿ ಪ್ರಕಟಿಸಿ ಸಂಬಂಧಿತರೆಲ್ಲರಿಗೂ ಅರಿವು ಮೂಡಿಸುವುದು.

**17. ಸಂಸ್ಥೆಯ (ಶಾಲೆಯ) ನಿರ್ದಿಷ್ಟ ಸಿಬ್ಬಂದಿಯ ಜವಾಬ್ದಾರಿ**

ಸಂಸ್ಥೆಯ ಸಿಬ್ಬಂದಿಯು ಕೆಲಸದ ಸಮಯ ಮತ್ತು ಕೆಲಸದ ನಂತರವು ಜವಾಬ್ದಾರಿಯನ್ನು ನೋಡಿಕೊಳ್ಳುವುದು. ದಿನದ 24 ಗಂಟೆಯು ವಿದ್ಯಾರ್ಥಿಗಳ ಅಭಿವೃದ್ಧಿ ಮತ್ತು ರಕ್ಷಣೆಗಾಗಿ ಕಾರ್ಯನಿರತನಾಗುವುದು. ಸ್ವತಃ ಪಾಲಿಸುವ ಜವಾಬ್ದಾರಿ.

**18. ಪರಿಣಾಮಗಳು**

ನಾವು ಶಿಕ್ಷಕರು ಮಕ್ಕಳ ಸಂಪರ್ಕಕ್ಕೆ ಬರುವವರ ಮಾತು. ನೋಟ, ಭಾವ, ದೈಹಿಕ, ಮಾನಸಿಕ, ಹಾವಭಾವಗಳು ಇತ್ಯಾದಿಗಳು ಉತ್ತಮವಾಗಿರಬೇಕು. ಮಕ್ಕಳ ಹಕ್ಕುಗಳು ಹಾಗೂ ಅವರ ಭಾವನೆಗಳಿಗೆ ಸ್ಪಂದಿಸುವವರಾಗಿರಬೇಕು.

## 19 ಚಾಲ್ತಿ ಕಾಯಿದೆಗಳು

- ❖ ವ್ಯಕ್ತಿ ಹಿನ್ನೆಲೆ ಪರೀಕ್ಷೆ ಮಾಡಲು ಪತ್ರ
- ❖ ಮಕ್ಕಳ ರಕ್ಷಣಾ ನೀತಿಗೆ ಒಪ್ಪಿಗೆ ಪತ್ರ
- ❖ ಮಕ್ಕಳ ರಕ್ಷಣಾ ನೀತಿ ಜಾರಿ ಜವಾಬ್ದಾರಿ
- ❖ ಗೊತ್ತಿರುವ ಅಧಿಕಾರಿಗಳ ವಿವರ
- ❖ ದೂರು ನೀಡುವ ವಿಧಾನ
- ❖ ದೂರು ವಿಚಾರಣೆ ವಿಧಾನ
- ❖ ಮಕ್ಕಳು ಮತ್ತು ಪೋಷಕರಿಗೆ ನೀತಿ ಕುರಿತು ತಿಳಿಸುವ ವಿಧಾನ.

**ಸಂಸ್ಥೆಯ (ಶಾಲೆಯ) ಸಿಬ್ಬಂದಿಗಳ ಜವಾಬ್ದಾರಿ:** ಮಕ್ಕಳ ರಕ್ಷಣಾ ನೀತಿಯನ್ನು ಸಂಪೂರ್ಣವಾಗಿ ಅರಿತುಕೊಂಡು ಶಾಲಾ ಅವಧಿ ಬೆಳಗ್ಗೆ 9.00 ರಿಂದ ಸಾಯಂಕಾಲ 5.00 ಗಂಟೆಯವರೆಗೆ ಜವಾಬ್ದಾರರಾಗಿರುವುದು. ಯಾವುದೇ ದೂರು ದಾಖಲಾದಾಗ ಅದರ ಸಂಪೂರ್ಣ ಭದ್ರತೆ ಮತ್ತು ಪರಿಹಾರ ಒದಗಿಸಿ ಮಕ್ಕಳಿಗೆ ನ್ಯಾಯ ಒದಗಿಸುವುದು. ಮುಖ್ಯವಾಗಿ ...

- ◗ ಶಾಲಾ ಸಮಯದಲ್ಲಿ (ಬೆಳಗ್ಗೆ 9.00 ರಿಂದ ಸಾಯಂಕಾಲ 5.00) ಶಾಲೆಯ ಹೊರಗೆ ಹಾಗೂ ಶಾಲೆಯ ಒಳಗೆ ನಮ್ಮ ಶಾಲೆಯ ಮಕ್ಕಳ ಜೊತೆ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳುವುದು.
- ◗ ಮಕ್ಕಳಿಗೆ ಯಾವುದೇ ತರಹದ ಶಿಕ್ಷೆಗಳಿಲ್ಲದೆ ಮತ್ತು ಕಲಿಕೆಗೆ ಮುಕ್ತ ವಾತಾವರಣ ಕಲ್ಪಿಸುವುದು.
- ◗ ಶಾಲೆಯಲ್ಲಿ ಎಲ್ಲಾ ಮಕ್ಕಳಿಗೆ ಭಾಗವಹಿಸುವ ಹಕ್ಕನ್ನು ನೀಡಿದ್ದು, ವಿವಿಧ ಸ್ಪರ್ಧೆಗಳು, ಮಕ್ಕಳ ಗ್ರಾಮ ಸಭೆಗಳಲ್ಲಿ ಭಾಗವಹಿಸುವ ಹಕ್ಕನ್ನು ನೀಡುವುದು.
- ◗ ಶಾಲಾ ವ್ಯಾಪ್ತಿಗೊಳಪಟ್ಟ ಪ್ರದೇಶಗಳಲ್ಲಿ ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ, ಮಕ್ಕಳ ಮಾರಾಟ–ಸಾಗಾಟ ಕಂಡುಬಂದರೆ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಿ ಮಕ್ಕಳ ರಕ್ಷಣೆಗೆ ಮುಂದಾಗುವುದು.
- ◗ ಶಾಲೆಯಲ್ಲಿ ಮಕ್ಕಳ ರಕ್ಷಣಾ ನಿಯಮ ಇರುವುದರಿಂದ ಯಾವುದೇ ಸಮಸ್ಯೆಗೆ ತಕ್ಷಣ ಪ್ರತಿಕ್ರಿಯೆ ನೀಡಿ ಸಮಸ್ಯೆ ಬಗೆಹರಿಸುವುದು.
- ◗ ಶಾಲೆ ಇರುವ ಗ್ರಾಮ\ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಮಗು ಶಾಲೆಯಿಂದ ಹೊರಗುಳಿಯುದಂತೆ ಹಾಗೂ ಶಿಕ್ಷಣದಿಂದ ವಂಚಿತರಾಗದಂತೆ

ನೋಡಿಕೊಳ್ಳುವುದು. ಮತ್ತು ಅಂತಹ ಮಕ್ಕಳನ್ನು ಶಾಲೆಗೆ ಕರೆ ತರುವ ಜವಾಬ್ದಾರಿ ವಹಿಸುವುದು.

- ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಪೋಷಕರು, ಗ್ರಾಮಸ್ಥರು, ಸಂಘ–ಸಂಸ್ಥೆಗಳು, ನಮ್ಮ ಗ್ರಾಮ ಪಂಚಾಯತ್, ವಾರ್ಡ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಸ್ಥಳೀಯ ಪೋಲೀಸ್ ಠಾಣೆ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದೊಂದಿಗೆ ನಿರಂತರ ಸಂಪರ್ಕದಲ್ಲಿರುವುದು.
- ಮೂಲಭೂತ ಸೌಕರ್ಯಗಳಾದ ತರಗತಿ ಕೋಣೆ, ಕುಡಿಯುವ ನೀರು, ಶೌಚಾಲಯ (ಗಂಡು–ಹೆಣ್ಣು ಮಕ್ಕಳಿಗೆ ಪ್ರತ್ಯೇಕ) ಗ್ರಂಥಾಲಯ, ವಿಜ್ಞಾನೋಪಕರಣ, ಆಟದ ಸಾಮಾಗ್ರಿ, ಕಂಪ್ಯೂಟರ್ ಶಿಕ್ಷಣ, ಆಟದ ಮೈದಾನ ಇವೆಲ್ಲವು ಶಾಲೆಯಲ್ಲಿ ಇದೆ ಎಂದು ಖಾತ್ರಿ ಪಡಿಸುವುದು.
- ಶಾಲೆಯಲ್ಲಿರುವ ಮತ್ತು ಮುಂದೆ ದಾಖಲಾಗುವ ಭಿನ್ನ ಸಾಮರ್ಥ್ಯದ ಮಕ್ಕಳಿಗೆ ಶಾಲೆಯ ವಾತಾವರಣವು ಅಡೆ–ತಡೆ ಇಲ್ಲದೆ ಮುಕ್ತವಾಗಿರುವಂತೆ ನೋಡಿಕೊಳ್ಳುವುದು.
- ಪಠ್ಯೇತರ ಚಟುವಟಿಕೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸುವಾಗ ಅವರ ಪೂರ್ವಾಪರಗಳನ್ನು ಪರಿಶೀಲಿಸಿ ನೇಮಕ ಮಾಡುವುದು.
- ಶಾಲಾ ಮಕ್ಕಳಿಗೆ ಹೊರಗಡೆಯಿಂದ ಯಾರಾದರೂ ಸಿಹಿ–ತಿಂಡಿಗಳನ್ನು ನೀಡಿದಾಗ ಅದನ್ನು ಪರಿಶೀಲಿಸಿ ಮಕ್ಕಳಿಗೆ ನೀಡುವುದು.
- ಶಾಲಾ ಅವಧಿಯಲ್ಲಿ ಮಕ್ಕಳನ್ನು ಪೋಷಕರು ಕರೆದುಕೊಂಡು ಹೋಗುವಾಗ ಮಕ್ಕಳ ಚಲನ–ವಲನ ಪುಸ್ತಕದಲ್ಲಿ ಸಹಿ ಮಾಡಿಸುವುದು.
- ಶಾಲೆಯ ಹಿತದೃಷ್ಟಿಯಿಂದ ಗ್ರಾಮ ಪಂಚಾಯತ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಸ್ಥಳೀಯ ಪೊಲೀಸ್ ಠಾಣೆ, ಪಿಹೆಚ್‌ಸಿ, ರಾಜ್ಯ ಮಕ್ಕಳ ಹಕ್ಕುಗಳ ಆಯೋಗದೊಂದಿಗೆ ಸಂಪರ್ಕ ದಲ್ಲಿರುವುದು.



ಮೇಲಿನ ಎಲ್ಲಾ ಅಂಶಗಳಿಗೆ ನಮ್ಮ ಶಾಲೆಯ ಮುಖ್ಯ ಗುರುಗಳು, ಶಿಕ್ಷಕರು, ಎಸ್.ಡಿ.ಎಮ್.ಸಿಯವರು ಅಡುಗೆ ಸಿಬ್ಬಂದಿಗಳು ಬದ್ಧರಾಗಿರುತ್ತಾರೆ. ಎಂಬುದಾಗಿ ಪ್ರತೀ ಶಾಲೆಗಳು ತಮ್ಮದೇ ಆದ ನಿಲುವನ್ನು ಮಕ್ಕಳ ಹಿತದೃಷ್ಟಿಯಿಂದ ಕಡ್ಡಾಯವಾಗಿ ಪಾಲಿಸುತ್ತಿದ್ದಾರೆ.

**ಮಗುಸ್ನೇಹಿ ಪಂಚಾಯತ್‌ಗಾಗಿ ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಪಾಲುದಾರಿಕೆ:**

ವಿಶ್ವ ಸಂಸ್ಥೆಯ ಒಡಂಬಡಿಕೆಯಂತೆ ಮಕ್ಕಳ ಗುಣಾತ್ಮಕ ಶಿಕ್ಷಣ ಹಾಗು ಮಕ್ಕಳ ಹಕ್ಕುಗಳ ಪರಿಣಾಮಕಾರಿ ಅನುಷ್ಠಾನವಾಗುವಲ್ಲಿ ಸಮುದಾಯವು ಮಗು ಸ್ನೇಹಿಯಾಗಿ ಕಾರ್ಯನಿರ್ವಹಿಸುವಲ್ಲಿ ಯೋಜನೆಗಳು ಸಮರ್ಪಕವಾಗಿ ಕಾರ್ಯರೂಪಕ್ಕೆ ಬರುವುದರ ಮೂಲಕ ಗ್ರಾಮ ಮಟ್ಟದಲ್ಲಿ ಎಲ್ಲಾ ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಿಕೊಂಡು ಕಲಿಕೆಗೆ ಪೂರಕವಾದ ಸಂತೋಷದಾಯಕ ವಾತಾವರಣ ಹೊಂದಿರಬೇಕಾಗಿದೆ. ಶಿಕ್ಷಣ ಹಕ್ಕು ಕಾಯಿದೆಯಲ್ಲಿ ತಿಳಿಸಿದಂತೆ ಗ್ರಾಮ ಮಟ್ಟದ 0–18 ವರ್ಷದ ಮಕ್ಕಳ ಶಿಕ್ಷಣ ಮತ್ತು ರಕ್ಷಣೆಯ ಜವಾಬ್ದಾರಿಯು ಸ್ಥಳೀಯ ಸರಕಾರದ್ದಾಗಿದ್ದು, ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತ್ ಮಕ್ಕಳಿಗೆ ಪೂರಕ ವಾತಾವರಣ ನಿರ್ಮಿಸಬೇಕಾಗಿದೆ. ಇದಕ್ಕಾಗಿ ಪಂಚಾಯತ್‌ಗಳಲ್ಲಿ ಮಗುಸ್ನೇಹಿ ವಾತಾವರಣ ನಿರ್ಮಿಸುವ ಉದ್ದೇಶದಿಂದ ಪಡಿ ಸಂಸ್ಥೆಯು ದ.ಕ. ಮತ್ತು ಉಡುಪಿ ಜಿಲ್ಲೆಯ ಆಯ್ದ 15 ಗ್ರಾಮ ಪಂಚಾಯತ್‌ಗಳನ್ನು ಆಯ್ಕೆ ಮಾಡಿ ಮಗುಸ್ನೇಹಿ ಪಂಚಾಯತ್ ನಿರ್ಮಾಣಕ್ಕೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಮಗುಸ್ನೇಹಿ ಶಾಲೆ ಮತ್ತು ಮಗುಸ್ನೇಹಿ ಪಂಚಾಯತು ಪರಿಕಲ್ಪನೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಇಲಾಖಾ ಸಹಭಾಗಿತ್ವ ಮತ್ತು ಸಹಕಾರಕ್ಕಾಗಿ ತಾಲೂಕು ಪಂಚಾಯತು ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಮಾಲೋಚನಾ ಸಭೆಯನ್ನು ಪಡಿ ಯೋಜನಾ ವ್ಯಾಪ್ತಿಯ ಎಲ್ಲಾ ತಾಲೂಕುಗಳಲ್ಲಿ ನಡೆಸಲಾಗಿದೆ.

ಈ ನಿಟ್ಟಿನಲ್ಲಿ ಆರಂಭಿಕ ಹಂತದಲ್ಲಿ ಆಯ್ದ ಪಂಚಾಯತ್‌ಗಳಲ್ಲಿ ಮಗುಸ್ನೇಹಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮೂಲ ಅಂಕಿಅಂಶಗಳನ್ನು ಕ್ರೋಢೀಕರಣ ಮಾಡುವ ಸಮೀಕ್ಷೆ ನಡೆಸಲಾಗಿದೆ. ಈ ಸಮೀಕ್ಷೆಯಲ್ಲಿ ಕಂಡುಕೊಂಡ ಅಂಶಗಳ ಮುಖ್ಯ ವಿಚಾರಗಳ ಮುಂದಿನ ಅನುಸರಣೆಗಾಗಿ ಎಲ್ಲಾ ತಾಲೂಕುಗಳಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರ ಜೊತೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಮುಂದಿನ ಹಂತವಾಗಿ ನಾಲ್ಕು ಹಂತದ ತರಬೇತಿಗಳಾದ

1. ಪಂಚಾಯತ್ ರಾಜ್ ಕಾಯ್ದೆಯಲ್ಲಿ ಮಗುಸ್ನೇಹಿ ಶಿಕ್ಷಣ, ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಸ್ಥಳೀಯ ಸರ್ಕಾರದ ಪಾತ್ರ,
2. ಮಕ್ಕಳ ರಕ್ಷಣಾ ವ್ಯವಸ್ಥೆಗಳು, ಮಗು ಸಂಬಂಧೀ ಕಾನೂನುಗಳು ಮತ್ತು ಪ್ರಾಧಿಕಾರಗಳು ಮತ್ತು ಮಕ್ಕಳ ರಕ್ಷಣಾ ಸಮಿತಿಯ ರಚನೆ
3. ಮಕ್ಕಳ ಗ್ರಾಮ ಸಭೆಯ ಪರಿಣಾಮಕಾರಿ ಅಳವಡಿಕೆ ಮತ್ತು ಅನುಸರಣಾ ವಿಧಾನ ಹಾಗು ಶಾಲಾಭಿವೃದ್ದಿ ಯೋಜನೆಗಳಲ್ಲಿ ಪಂಚಾಯತ್ ಪಾತ್ರ
4. ಮಗುಸ್ನೇಹಿ ಪಂಚಾಯತ್ ಸೂಚ್ಯಂಕಗಳ ಸ್ವಮೌಲ್ಯಮಾಪನ ವಿಧಾನ

ಈ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಯಿತು. ಈ ತರಬೇತಿಯನ್ನು ಪಂಚಾಯತ್ ಮಟ್ಟದಲ್ಲಿ ನಡೆಸಲಾಗಿದ್ದು ಅಯಾಯ ತಾಲೂಕುಗಳಲ್ಲಿ ಶೈಕ್ಷಣಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಂಪನ್ಮೂಲ ವ್ಯಕ್ತಿಗಳ ಮುಖಾಂತರ ನೀಡಲಾಯಿತು. ಪ್ರತಿಯೊಂದು ಹಂತದ ತರಬೇತಿಯ ನಂತರದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಮೌಲ್ಯಮಾಪನಗಳನ್ನು ನಡೆಸಿ ಮುಂದಿನ ಯೋಜನೆ ಮತ್ತು ಅನುಷ್ಠಾನ ಕಾರ್ಯತಂತ್ರಗಳನ್ನು ಮಾಡಲಾಯಿತು.

**ತರಬೇತಿಯ ನಂತರದ ಬದಲಾವಣೆಗಳು:**

- ✓ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಗಳ ಆಯೋಜನೆ ಮತ್ತು ಮಕ್ಕಳ ಬೇಡಿಕೆಗಳ ಅನುಷ್ಠಾನ ಮತ್ತು ಅನುಸರಣೆ.
- ✓ ಪಂಚಾಯತ್ ವ್ಯಾಪ್ತಿಯ ಸರಕಾರಿ ಶಾಲೆಗಳ ಶಾಲಾ ಅಭಿವೃದ್ಧಿ ಯೋಜನೆಗೆ ಮನ್ನಣೆ ಮತ್ತು ಶಾಲೆಯ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಅನುದಾನ ಒದಗಣೆ.
- ✓ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಗಳಲ್ಲಿ ಮಕ್ಕಳ ಶಿಕ್ಷಣ, ಆರೋಗ್ಯ, ರಕ್ಷಣೆಗೆ ಸಂಬಂಧಿಸಿದ ವಿಷಯಗಳ ಚರ್ಚೆ ಮತ್ತು ಅನುಪಾಲನೆ.
- ✓ ಸಮುದಾಯದಲ್ಲಿ ಮಕ್ಕಳ ಹಕ್ಕುಗಳ ಬಗೆಗಿನ ಜನಜಾಗೃತಿ ಕಾರ್ಯಕ್ರಮಗಳ ಆಯೋಜನೆ.
- ✓ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿಗಳ ಸಭೆಯ ಆಯೋಜನೆ ಮತ್ತು ಈ ಸಭೆಗಳಲ್ಲಿ ಮಗು ಸಂಬಂಧೀ ಸರಕಾರಿ ವ್ಯವಸ್ಥೆಗಳ ಜಿಲ್ಲಾ ಹಾಗು ತಾಲೂಕು ಮಟ್ಟದ ಅಧಿಕಾರಿಗಳ ಪಾಲ್ಗೊಳ್ಳುವಿಕೆ.
- ✓ ಪಂಚಾಯತ್ ವ್ಯಾಪ್ತಿಯಲ್ಲಿ ಶಾಲೆಬಿಟ್ಟ ಮಕ್ಕಳ ಬಗ್ಗೆ ನಿಗಾ ಹಾಗೂ ಮರು ಸೇರ್ಪಡೆಯ ಮೂಲಕ ಎಲ್ಲಾ ಮಕ್ಕಳಿಗೂ ಶಿಕ್ಷಣದ ಲಭ್ಯತೆ.

## 2017 ರಿಂದ 2020 ಅವಧಿಯಲ್ಲಿ ಪಡಿ ಸಂಸ್ಥೆಯ ಮೂಲಕ ಹಮ್ಮಿಕೊಂಡ ಯೋಜನೆಯ ಒಳಹುಗಳು



**ರೆನ್ನಿ ಡಿಸೋಜ**
**ನಿರ್ದೇಶಕರು**
**ಪಡಿ, ಮಂಗಳೂರು**

ಪಡಿ ಸಂಸ್ಥೆಯ ವೆಲೊರೆಡ್ ಯೋಜನೆಯೊಂದಿಗೆ ಕಳೆದೆರಡು ದಶಕಗಳೊಂದಿಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ಸಹಕಾರದೊಂದಿಗೆ ಶ್ರಮಿಸಿದ ವೆಲೊರೆಡ್ ತಂಡ, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸದಸ್ಯರು, ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು, ಜನಪ್ರತಿನಿಧಿಗಳು, ಇಲಾಖಾಧಿಕಾರಿಗಳು ಹಾಗೂ ಬಹಳ ಮುಖ್ಯವಾಗಿ ಮಕ್ಕಳ ನಿರಂತರ ಒಡನಾಟದಿಂದ ಮಗುಸ್ನೇಹಿ ಸಮಾಜಕ್ಕೆ ಪೂರಕವಾಗಿರುವ ವ್ಯವಸ್ಥೆಗಳು ಚಿಗುರುತ್ತಿವೆ. ಈ ಸಂಧರ್ಭದಲ್ಲಿ ನಾವು ಕಂಡ ಕೆಲವೊಂದು ಫಲಿತಾಂಶಗಳನ್ನು ಇಲ್ಲಿ ದಾಖಲಿಸುವ ಸಂದರ್ಭದಲ್ಲಿ, ಇನ್ನೂ ಸಾಧಿಸಬೇಕಾದ ಕೆಲವೊಂದು ಅಂಶಗಳನ್ನು ಗುರುತಿಸಿ ಚರ್ಚಿಸಬೇಕೆಂದಿದ್ದೇವೆ. ಯಾಕೆಂದರೆ ಮಗುಸ್ನೇಹಿ ವ್ಯವಸ್ಥೆ ಚಿಗುರುವುದು ಒಂದು ಪ್ರಕ್ರಿಯೆ ಅಥವಾ ಇದೊಂದು ನಿರಂತರ ಚಿಂತನೆ ಹಾಗೂ ಇಡೀ ಸಮುದಾಯ ಮಗುಸ್ನೇಹಿ ಸಮಾಜದ ಪರಿಕಲ್ಪನೆ. ಈ ಚಿಂತನೆಯನ್ನು ಸಮುದಾಯವಾಗಿ ಪ್ರತಿಯೊಬ್ಬ ನಾಗರಿಕನೂ ತೊಡಗಿಸಿಕೊಳ್ಳುವ ಪ್ರಯತ್ನದಲ್ಲಿ ಕಳೆದ ಯೋಜನಾವಧಿ (2017–2020)ಯಲ್ಲಿ 52 ಸರಕಾರಿ ಶಾಲೆಗಳಲ್ಲಿ ಮಗುಸ್ನೇಹಿ ಶಾಲಾ ಪ್ರಕ್ರಿಯೆ ಮತ್ತು RTE ಕಾಯಿದೆಯ 5ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಿದ ಗುಣಮಟ್ಟದ ಶಿಕ್ಷಣ ಮತ್ತು ಮಗುಸ್ನೇಹಿ ಪರಿಕಲ್ಪನೆಯನ್ನು ಪ್ರಾಯೋಗಿಕವಾಗಿ ಅರ್ಥಮಾಡಲು ಸಾಧ್ಯವಾಯಿತು. ಮಾತ್ರವಲ್ಲದೆ ಒಂದು ಶಾಲೆ ಎಷ್ಟರಮಟ್ಟಿಗೆ ಮಗುಸ್ನೇಹಿಯಾಗಿದೆ ಎಂದು ಅಳೆಯಲು ತಯಾರಿಸಲಾದ ಸೂಚ್ಯಂಕಗಳ ಮೂಲಕ ಶಾಲೆಯ ಪ್ರಗತಿಯನ್ನು ಶಾಲೆಯ ಆಡಳಿತ ವ್ಯವಸ್ಥೆಯು ಕಾಲಕಾಲಕ್ಕೆ ಅರ್ಥಮಾಡಿಕೊಡಲು ಸಾಧ್ಯವಾಗಿದೆ.

ಯೋಜನಾವಧಿಯಲ್ಲಿ 52 ಶಾಲೆಗಳಲ್ಲಿ ಬಳಸಿದ ಈ ಸೂಚ್ಯಂಕಗಳು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಬಳಸಲು ಮಾರ್ಗದರ್ಶಕವಾಗಿದೆ. ಎಂಬುದು ನಮ್ಮ ಅನಿಸಿಕೆ. ಹಾಗೂ RTE ಕಾಯಿದೆ ಅನುಷ್ಠಾನದಲ್ಲಿ ತಮ್ಮ ತಮ್ಮ ಶಾಲೆಗಳು ಶಾಲಾ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯಾವ ಮಟ್ಟದಲ್ಲಿ ಇದೆ ಹಾಗೂ ಇದಕ್ಕೆ ಪೂರಕವಾಗಿ ಶಾಲಾ

ಮಟ್ಟದಲ್ಲಿ ಮಾಡಬೇಕಾದ ಅಂಶಗಳನ್ನು ಪಟ್ಟಿ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಈ ಯೋಜನಾವಧಿಯಲ್ಲಿ ತಯಾರಿಸಿದ ಸೂಚ್ಯಂಕಪಟ್ಟಿಯನ್ನು ಎಲ್ಲಾ ಶಾಲೆಗಳಲ್ಲಿ ಅಳವಡಿಸುವ ನಿಟ್ಟಿನಲ್ಲಿ ಇಲಾಖೆಗಳೊಡನೆ ವಿಚಾರ ವಿನಿಮಯ ಮಾಡುವ ಅವಶ್ಯಕತೆ ಇದೆ. ಹಾಗೂ ಯೋಜನೆಯ ಅವಧಿಯಲ್ಲಿ ಅಂತಿಮಗೊಳಿಸಲ್ಪಟ್ಟ ಸೂಚ್ಯಂಕಗಳು ಬಳಕೆಗೆ ಲಭ್ಯವಿದ್ದು ಆಸಕ್ತಿ ಇರುವ ಶಾಲೆಗಳಲ್ಲಿ ಸ್ವಇಚ್ಛೆಯಿಂದ ಬಳಸಬಹುದಾಗಿದೆ.

ಎರಡು ವರ್ಷಗಳ ಅವಧಿಯ 4 ಹಂತಗಳ ಶಾಲಾಮಟ್ಟದ ಎಸ್‌ಡಿಎಂಸಿ ಸದಸ್ಯರನ್ನು ತರಬೇತುಗೊಳಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ತಯಾರಿಸಿದ 'ಸತ್ವ' ತರಬೇತಿ ಕೈಪಿಡಿ ಸಾಹಿತ್ಯವು ರಾಜ್ಯದಲ್ಲಿ ನಡೆದ ಪ್ರಥಮ ಪ್ರಯತ್ನವಾಗಿದ್ದು, ಇಲಾಖೆಗಳ ಮೂಲಕ ಈ ಶಾಲೆಯಲ್ಲಿ ಎಸ್‌ಡಿಎಂಸಿಗಳನ್ನು ಸಶಕ್ತಗೊಳಿಸಲು 'ಸತ್ವ' ತರಬೇತಿ ಕೈಪಿಡಿ ಸಾಹಿತ್ಯವು ಅನುಕೂಲವಾಗಲಿದೆ.

ಅದಲ್ಲದೆ ಉಭಯ ಜಿಲ್ಲೆಗಳಲ್ಲಿ ಮಕ್ಕಳ ರಂಗತಂಡ ರಚನೆ ಮತ್ತು ನಾಟಕ ಪ್ರದರ್ಶನ ಪ್ರಕ್ರಿಯೆ ಶಿಕ್ಷಣ ರಂಗದಲ್ಲೆ ಹೊಸ ಸಂಚಲನ ಮೂಡಿಸಿತು. ಸ್ಥಳಿಯ ಪರಿಣತ ರಂಗ ನಿರ್ದೇಶಕರ ಸಹಕಾರದಲ್ಲಿ ಶಾಲೆ, ಸಮುದಾಯ ಹಾಗೂ ಮಕ್ಕಳು ತೊಡಗಿರುವ ಪ್ರಕ್ರಿಯೆ ಸಮುದಾಯಕ್ಕೆ ಶಿಕ್ಷಣದ ಕುರಿತು ಮಕ್ಕಳೇ ಜಾಗೃತಿ ಮೂಡಿಸಿದ್ದು ಬಹಳ ಪರಿಣಾಮಕಾರಿಯಾಗಿದ್ದು, ತಾಲೂಕು ಮಟ್ಟದಲ್ಲಿ ಮಕ್ಕಳ ರಂಗತಂಡಗಳಿಗೆ ವೇದಿಕೆ ಸ್ಥಾಪಿಸಿ ಶಿಕ್ಷಣವನ್ನು ನಿಟ್ಟಿನಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ಮತ್ತು ಶಿಕ್ಷಣದ ಪ್ರಾಧಿಕಾರಗಳು ಮಕ್ಕಳಿಗೆ ವೇದಿಕೆಗಳನ್ನು ಮಕ್ಕಳನ್ನು ಪ್ರೋತ್ಸಾಹಿಸಬೇಕು.

ಯೋಜನಾವಧಿಯಲ್ಲಿ ಕಂಡುಕೊಂಡ ಅಂಶದಂತೆ ಮಗುಸ್ನೇಹಿ ಗ್ರಾಮಪಂಚಾಯತ್‌ನ ಅನುಷ್ಠಾನಕ್ಕಾಗಿ ನಡೆಸಿದ ವಿವಿಧ ಚಟುವಟಿಕೆಗಳ ಸಂಧರ್ಭದಲ್ಲಿ ಗಮನಿಸಿದಂತೆ ಮಕ್ಕಳ ಹಕ್ಕುಗಳ ಗ್ರಾಮಸಭೆ ಇನ್ನಷ್ಟು ಆಳ ಹಾಗೂ ವಿಸ್ತಾರವಾಗಿ ಹಮ್ಮಿಕೊಳ್ಳುವ ಅವಶ್ಯಕತೆ ಇದೆ. ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು ಒಂದು ದಿವಸಕ್ಕೆ ಸೀಮಿತಗೊಳ್ಳದೆ, ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆರಂಭ ಮಾಡುವ ಮುನ್ನ ವಾರ್ಡ್ ಮಟ್ಟದಲ್ಲಿ ಚರ್ಚೆ ಅಭಿಯಾನ ನಡೆದು, ಮಗುಸ್ನೇಹಿ ಪಂಚಾಯತ್ ಅನುಗುಣವಾಗಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳ ಸಮಸ್ಯೆಗಳಿಗೆ ಪಂಚಾಯತ್ ಗಮನ ಕೊಡುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಮಗುಸ್ನೇಹಿ ಶಾಲಾ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಹಾಗೂ ಪ್ರತಿಯೊಂದು ಮಗು ಶಾಲೆಯಲ್ಲಿ ಉಳಿಯುವ ನಿಟ್ಟಿನಲ್ಲಿ, ಸರಕಾರ ಮಟ್ಟದಲ್ಲಿ ಕಾರ್ಯೋನ್ಮುಖರಾಗುವ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದೆ.

ಮಗುಸ್ನೇಹಿ ಪಂಚಾಯತ್ ಪರಿಕಲ್ಪನೆಯಲ್ಲಿ ಕೆಲಸ ಮಾಡುತ್ತಾ ಸ್ಥಳೀಯ ಮಟ್ಟದಲ್ಲಿ ಮಕ್ಕಳ ರಕ್ಷಣೆಯ ಕುರಿತು ಮಕ್ಕಳ ರಕ್ಷಣಾ ಸಮಿತಿಗಳ ಅವಶ್ಯಕತೆ ಇದ್ದು ಮಕ್ಕಳ ರಕ್ಷಣೆಯ ಕುರಿತು ಇರುವ ಬೇರೆಬೇರೆ ಸಮಿತಿಗಳ ಬದಲು ಪಂಚಾಯತ್ ಮಟ್ಟದಲ್ಲಿ ಮಕ್ಕಳ ಸಮಗ್ರ ರಕ್ಷಣೆಗಾಗಿ ಒಂದೇ ಸಮಿತಿಯನ್ನು ಪುನರ್‌ರಚಿಸಿ ಸರಕಾರ ಚಿಂತನೆ ನಡೆಸಬೇಕಾಗಿದೆ. ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಿಸಿದ ಅನುಭವದ ಹಿನ್ನೆಲೆಯಲ್ಲಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಮಾಡಲೇಬೇಕಾದ ಸುದಾರಣಾ ಅಂಶಗಳನ್ನು ಈ ಕೆಳಕಂಡಂತೆ ದಾಖಲಿರಿಸಿರುತ್ತೇವೆ ಮತ್ತು ಅನುಸರಣಾ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ಸರಕಾರದ ಇಲಾಖಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿರುತ್ತೇವೆ.

- ಮಗುಸ್ನೇಹಿ ಶಾಲೆ ಯೋಜನೆಯ ಅವಧಿಯಲ್ಲಿ ಶಾಲಾಮಟ್ಟದ ನಾಯಕತ್ವ ಬೆಳೆಸುವ ನಿಟ್ಟಿನಲ್ಲಿ ಶಾಲಾ ಮಟ್ಟದಲ್ಲಿ ಎಸ್‌ಡಿಎಂಸಿಯನ್ನು ಸಶಕ್ತೀಕರಣಗೊಳಿಸುವ ಕಾರ್ಯಕ್ರಮವು ರಾಜ್ಯಾದ್ಯಂತ ಎಲ್ಲಾ ಶಾಲೆಗಳಿಗೆ ನಡೆಯಬೇಕಾಗಿದೆ.

- ಶಿಕ್ಷಣ ಹಕ್ಕು ಕಾಯಿದೆ ಹಾಗೂ ನಿಯಮಗಳನ್ನು ಅನುಸರಿಸುವ ಪ್ರಕ್ರಿಯೆಯಲ್ಲಿ ಎಸ್‌ಡಿಎಂಸಿಯನ್ನು ಶಾಲಾ ಹಂತದಲ್ಲಿ ಸದೃಢಗೊಳಿಸುವ ನೆಲೆಯಲ್ಲಿ ತರಬೇತಿ ಮಾರ್ಗದರ್ಶಿಯನ್ನು ಹೊರತಂದು ಅನುಷ್ಠಾನಿಸುವಂತೆ ಪ್ರೇರೇಪಿಸುವ ಅವಶ್ಯಕತೆ ಇದೆ.

- ಯೋಜನಾವಧಿಯಲ್ಲಿ ಕಂಡುಕೊಂಡ ಕಲಿಕೆ, ತರಬೇತಿ, ಸಾಹಿತ್ಯಗಳು ಹಾಗೂ ಶಾಲೆಯಲ್ಲಿ ಪಡೆದ ಫಲಿತಾಂಶಗಳು ನಿಜವಾಗಿಯೂ ಮುಂದಿನ ದಿನಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನವಾಗಿ ಮಗುಸ್ನೇಹಿ ಶಾಲಾ ವಾತಾವರಣಕ್ಕೆ ಶಕ್ತಿ ತುಂಬಬೇಕಾಗಿದೆ.

- ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಕಲಿಕೆಯನ್ನು ಸುಧಾರಿಸುವುದು ಮಾತ್ರವಲ್ಲ, ಮಕ್ಕಳ ರಕ್ಷಣೆ ವಿಧಾನಗಳು ಸದೃಢಗೊಳಿಸಬಹುದಾಗಿದೆ.

- ತಳಮಟ್ಟದಲ್ಲಿ ಮಕ್ಕಳ ರಕ್ಷಣೆ ಪ್ರಕ್ರಿಯೆಯಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಇತರ ಮಕ್ಕಳ ರಕ್ಷಣಾ ಇಲಾಖೆಗಳನ್ನು ತೊಡಗಿಸುವ ನಿಟ್ಟಿನಲ್ಲಿ ಸರಕಾರ ವಿಶೇಷ ಗಮನ ಹರಿಸಬೇಕಾಗಿದೆ.

- ಎಲ್ಲಾ ಶಾಲೆಗಳಲ್ಲಿ ರಚಿಸಲಾದ ಶಾಲಾ ಮಕ್ಕಳ ರಕ್ಷಣಾ ನೀತಿ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನವಾಗಬೇಕು. ಮತ್ತು ಎಲ್ಲಾ ಶಾಲೆಗಳಿಗೆ ಮಕ್ಕಳ ರಕ್ಷಣಾ ನೀತಿಯ ರಚನೆ ಮತ್ತು ಅನುಷ್ಠಾನ ಕಡ್ಡಾಯಗೊಳಿಸಬೇಕಾಗಿದೆ.

- ಮಗುಸ್ನೇಹಿ ಪಂಚಾಯತ್‌ಗೆ ಸಂಬಂಧಪಟ್ಟು ಪ್ರಗತಿಯನ್ನು ಅಳೆಯುವ ಸಾಧನಗಳು (tools) ಈಗಾಗಲೇ ಸಂಶೋಧಿಸಲಾಗಿದ್ದು, ಇದು ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ತಲುಪುವ ನಿಟ್ಟಿನಲ್ಲಿ ಸ್ಥಳೀಯ ಸರಕಾರಗಳ ಜನಪ್ರತಿನಿಧಿಗಳಿಗೆ ತರಬೇತಿ ನಡೆಸಬೇಕಾಗಿದೆ. ಹಾಗೂ ಪಂಚಾಯತ್ ಅಭಿವೃದ್ಧಿಯ ಸೂಚ್ಯಂಕದಲ್ಲಿ ಈ ಸಾಧನವನ್ನು ಬಳಸಬಹುದಾಗಿದೆ.

- ಈ ಮೂರು ವರ್ಷಗಳ ಯೋಜನಾವಧಿಯಲ್ಲಿ ಗಮನಿಸಿದಂತೆ ಶಾಲಾ ಹಂತದಲ್ಲಿಯೇ ಎಸ್‌ಡಿಎಂಸಿ ತರಬೇತಿಯು ನಡೆದು ಶಾಲಾ ಅಭಿವೃದ್ಧಿ ಯೋಜನೆಯ ಅನುಷ್ಠಾನ ಮೇಲ್ವಿಚಾರಣೆಯ ಪ್ರಕ್ರಿಯೆಯು ನಡೆದು, ಈ ಮೇಲ್ವಿಚಾರಣೆಗೆ ಸಂಬಂಧಪಟ್ಟಂತೆ ಕ್ಲಸ್ಟರ್ ಮಟ್ಟದಲ್ಲಿ ಕ್ಲಸ್ಟರ್ ಹಂತದ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಸಮೂಹ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪ್ರಗತಿ ಪರಿಶೀಲನೆಗಳು ನಡೆಯಬೇಕಾಗಿದೆ.

- ಇದೇ ಮಾದರಿಯು ಗ್ರಾಮೀಣ ಪ್ರದೇಶದಲ್ಲಿರುವಂತೆ ನಗರಪ್ರದೇಶದ ಶಾಲೆಗಳು ಹಾಗೂ ಸ್ಥಳೀಯ ಆಡಳಿತಗಳಿಗೂ ಅನ್ವಯಿಸಿ ಮಗುಸ್ನೇಹಿ ನಗರದ ಕುರಿತು ಕೆಲಸಗಳು ತುರ್ತಾಗಿ ಆರಂಭವಾಗಬೇಕಾಗಿದೆ.

ಈ ಒಂದು ಪ್ರಕ್ರಿಯೆಯಲ್ಲಿ ವಿಶಿಷ್ಟ ಅನುಭವ ಹಾಗೂ ಸಂಶೋಧನಾತ್ಮಕ ಚಿಂತನೆಗಳನ್ನು ಮಾಡುವ ನಿಟ್ಟಿನಲ್ಲಿ ಪಡಿ ಯೋಜನೆಯಲ್ಲಿ ಒಳಗೊಂಡಂತಹ ಸರ್ವರಿಗೂ ನನ್ನ ಹೃದಯಾಂತರಾಳದ ವಂದನೆಗಳನ್ನು ತಿಳಿಸುತ್ತ ಮುಂದಿನ ಯೋಜನೆಯ ಅನುಷ್ಠಾನದಲ್ಲೂ ತಮ್ಮ ಸಹಕಾರ ಮತ್ತು ಸಹಭಾಗಿತ್ವವನ್ನು ನಿರೀಕ್ಷಿಸುತ್ತೇವೆ.